ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 15 ಭಾನುವಾರ 2025

₹4

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 60 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕೆಆರ್‌ಎಸ್‌ನಲ್ಲಿ ಅಮ್ಯೂಸ್ಮೆಂಟ್ ಪಾರ್ಕ್ ವಿರೋಧಿಸಿ ಮೈಸೂರಲ್ಲಿ ಪ್ರತಿಭಟನೆ



ಕೆಆರ್‌ಎಸ್‌ನಲ್ಲಿ ಅಮ್ಯೂಸ್ಮೆಂಟ್ ಪಾರ್ಕ್ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆ ವಿರೋಧಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರಿನ ಹಳೆ ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.14(ಜಿಎ)–ಕೃಷ್ಣ ರಾಜಸಾಗರ (ಕೆಆರ್‌ಎಸ್)ದಲ್ಲಿ ಅಮ್ಯೂಸ್ಮೆಂಟ್ ಪಾರ್ಕ್ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರಿನ ಹಳೆ ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಕೆಆರ್‌ಎಸ್ ಅಣೆಕಟ್ಟು ನಿರ್ಮಿಸಿರುವುದು ಉಪಮುಖ್ಯಮಂತ್ರಿಗಳ ಮೋಜು ಮಸ್ತಿ ಮಾಡೋದಕ್ಕೆ ಅಲ್ಲ. ಕೃಷ್ಣರಾಜ ಸಾಗರ ನಿರ್ಮಿಸಿರುವುದು ರೈತಾಪಿ ವರ್ಗದವರು ಕೃಷಿ ಚಟುವಟಿಕೆಗಳು ಹಾಗೂ ಮೈಸೂರು–ಬೆಂಗಳೂರಿನ ಜನತೆಗೆ ಕುಡಿಯುವ ನೀರು ಒದಗಿಸುವ ಯೋಜನೆಗೆ ಮೀಸಲಾಗಿದೆ. ಕರ್ನಾಟಕ ಮತ್ತು ತಮಿಳುನಾಡು ಜನರ ಜೀವನದಿ ಕಾವೇರಿ. ಮೈಸೂರಿನ ಇತಿ ಹಾಸ ತಿಳಿಯದ ಸಚಿವರು ವಿಧಾನಸೌಧದ ಎಲ್ಲೋ ಒಂದು ಮೂಲೆಯಲ್ಲಿ ಕುಳಿತು ಮನಸ್ಸಿಗೆ ಬಂದಂತೆ ಹೇಳಿಕೆ ನೀಡುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಈಗಾಗಲೇ ಮೈಸೂರು ಮತ್ತು ಮಂಡ್ಯ ಭಾಗದ ಕೆಲವು ಶಾಸಕರು, ರೈತ ಹೋರಾಟಗಾರರು, ಕನ್ನಡಪರ ಹೋರಾಟಗಾರರು ಅಮ್ಯೂಸ್ಮೆಂಟ್ ಪಾರ್ಕ್ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಆದರೆ, ಸರ್ಕಾ ರದ ಮಂತ್ರಿ ಮಂಡಲದವರು ನಾವೇ ಕೆಆರ್‌ಎಸ್ ಅಣೆಕಟ್ಟು ಕಟ್ಟಿದ ರೀತಿಯಲ್ಲಿ ಮನ ಬಂದಂತೆ ಮಾತನಾಡುತ್ತಿದ್ದಾರೆ. ಮಂಡ್ಯ ಮತ್ತು ಮೈಸೂರು ಜನತೆಯನ್ನು ಗಣನೆಗೆ ತೆಗೆದುಕೊಳ್ಳದೆ ತುಘಲಕ್ ದರ್ಬಾರಿನಂತೆ ಸರ್ಕಾರ ದರ್ಬಾರು ಮಾಡುತ್ತಿದೆ ಯಾವೊಬ್ಬ ರೈತನಿಗಾಗಲಿ ಕಿಂಚಿತ್ತು ಗೌರವ ನೀಡುತ್ತಿಲ್ಲ. ಕೋಟ್ಯಾಂತರ ಜನರಿಗೆ ಆಶ್ರಯವಾಗಿರುವ ಕಾವೇರಿ ನೀರು ಇವರ ಮನೆ ಸ್ವತ್ತಂತೆ ಮಾತನಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ ತಕ್ಷಣ ಈ ಯೋಜನೆ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಗುರುಬಸಪ್ಪ, ಮಾದಪ್ಪ, ಗೋವಿಂದರಾಜು, ಕಾವೇರಮ್ಮ, ಹರೀಶ್, ಪ್ರೇಮ, ಸುನಿಲ್, ಶಿವುಗೌಡ, ಚಿನ್ನಪ್ಪ, ಸ್ವಾಮಿ ಗೈಡ್, ಸ್ವಾಮಿ, ಮೋದಿ, ರಮೇಶ್ ಮತ್ತಿತರು ಭಾಗವಹಿಸಿದ್ದರು.

ನಗರಪಾಲಿಕೆ ಆಯುಕ್ತರಿಂದ ನಗರ ಪ್ರದಕ್ಷಿಣೆ

ಉದಯಗಿರಿ, ಕ್ಯಾತಮಾರನಹಳ್ಳಿ, ರಾಜೀವ್‌ನಗರ, ರಿಂಗ್ ರಸ್ತೆಯಲ್ಲಿ ಸ್ವಚ್ಛತೆ, ಒಳಚರಂಡಿ, ಸಿವಿಲ್ ಕಾಮಗಾರಿ ಪರಿಶೀಲನೆ





ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ತಮ್ಮ ಅಧೀನ ಅಧಿಕಾರಿಗಳೊಂದಿಗೆ ನಗರ ಪ್ರದಕ್ಷಿಣೆ ಮೂಲಕ ಪರಿಶೀಲನೆ ಮಾಡಿದರು.

ಮೈಸೂರು,ಜೂ.14(ಆರ್‌ಕೆ)–ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ನಗರ ಪ್ರದಕ್ಷಿಣೆ ಮೂಲಕ ರಸ್ತೆ, ಒಳಚರಂಡಿ, ಸ್ವಚ್ಛತೆ, ಬೀದಿ ದೀಪ ಸೇರಿದಂತೆ ಮೂಲ ಸೌಲಭ್ಯ ಪರಿಶೀಲನೆ ಮಾಡಿದರು.

ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧು, ಯುಜಿಡಿ ಅಸಿಸ್ಟೆಂಟ್ ಇಂಜಿನಿಯರ್‌ಗಳಾದ ರವಿ ಕುಮಾರ್, ನಾಗರಾಜೇಗೌಡ, ವಲಯ–6ರ ಅಭಿವೃದ್ಧಿ ಅಧಿಕಾರಿ ವೆಂಕಟೇಶ್, ವಲಯ–8ರ ಅಭಿವೃದ್ಧಿ ಅಧಿಕಾರಿ ಅನಂತು, ವಲಯ–9ರ ಅಭಿವೃದ್ಧಿ ಅಧಿಕಾರಿ ಆರ್‌ಶಿಯಾ, ಆಯುಕ್ತರ ಆಪ್ತ ಕಾರ್ಯದರ್ಶಿ ಶ್ಯಾಂಸುಂದರ್ ಹಾಗೂ ಇತರ ಅಧಿಕಾರಿಗಳೊಂದಿಗೆ ಉದಯಗಿರಿ, ಕ್ಯಾತಮಾರನಹಳ್ಳಿ, ರಾಜೀವ್‌ನಗರ, ಬೀಡಿ ಕಾಲೋನಿಗಳಲ್ಲಿ ನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಯ, ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ವೀಕ್ಷಿಸಿದರು.

ಮಳೆ ನೀರು ಚರಂಡಿಯಲ್ಲಿ ಗಿಡಗಂಟಿ ಬೆಳೆದುಕೊಂಡು ನೀರು ನಿಂತು ಸೊಳ್ಳೆಗಳ ತಾಣವಾಗಿರುವುದರ ಬಗ್ಗೆ ಅಸಮಾಧಾನಗೊಂಡ ಆಸಿಫ್, ಚರಂಡಿ ಸ್ವಚ್ಛಗೊಳಿಸಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಿ ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿ ನೀಡುವಂತೆ ಅವರು ಅಧಿಕಾರಿಗಳಿಗೆ ತಿಳಿಸಿದರು.

ಒಳಚರಂಡಿ ಸಂಪರ್ಕ ಮಾರ್ಗಗಳನ್ನು ಸ್ವಚ್ಛಗೊಳಿಸಬೇಕು, ಮಳೆಗಾಲವಾಗಿರುವುದರಿಂದ ಚರಂಡಿಗಳು ತುಂಬಿ ಹರಿಯದಂತೆ ಎಚ್ಚರಿಕೆ ವಹಿಸುವಂತೆ ಒಳಚರಂಡಿ ವಿಭಾಗದ ಇಂಜಿನಿಯರ್‌ಗಳಿಗೆ ಸೂಚನೆ ನೀಡಿದ ಅವರು, ಮಳೆಗಾಲ ಹೆಚ್ಚಾಗುತ್ತಿದ್ದು, ಚರಂಡಿಗಳನ್ನು ಸರಿಯಾಗಿ ನಿರ್ವಹಿಸದಿದ್ದರೆ ಪ್ರವಾಹ ಉಂಟಾಗುತ್ತದೆ ಎಂದರು. ಹಂಚ್ಯಾ–ಸಾತಗಳ್ಳಿಯಿಂದ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಮಾರ್ಗವಾಗಿ ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಜಂಕ್ಷನ್‌ವರೆಗೆ ರಿಂಗ್ ರಸೆ ಪರಿಶೀಲಿಸಿದ ಆಯುಕ್ತರು, ಮೀಡಿಯನ್ ಬಳಿ ಶೇಖರಣೆಯಾಗಿರುವ ಕಸ ತೆರವುಗೊಳಿಸಿ, ಸರ್ವಿಸ್ ರಸ್ತೆ ಸ್ವಚ್ಛಗೊಳಿಸಿ, ಕೆಟ್ಟಿರುವ ಬೀದಿ ದೀಪಗಳಿಗೆ ಹೊಸ ಬಲ್ಬ್ ಅಳವಡಿಸುವಂತೆಯೂ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.

ಪ್ರತೀ 6 ತಿಂಗಳಿಗೊಮ್ಮೆ ರಿಂಗ್ ರಸ್ತೆ ಸ್ವಚ್ಛಗೊಳಿಸಬೇಕು, ಕಸ ತಂದು ಸುರಿಯುವವರ ಬಗ್ಗೆ ಎಚ್ಚರದಿಂದಿದ್ದು, ಕಟ್ಟಡ ತ್ಯಾಜ್ಯ ಹಾಕುವವರ ವಿರುದ್ಧ ಕ್ರಮ ವಹಿಸಿ, ಸರ್ವಿಸ್ ರಸ್ತೆ ಬದಿ ಜಾಹೀರಾತು ಫಲಕ ಅಳವಡಿಸಿ ಸಂಚಾರಕ್ಕೆ ಅಡ್ಡಿಯುಂಟು ಮಾಡುವುದನ್ನು ತಡೆಗಟ್ಟಿ ಎಂದು ಆಸಿಫ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರು ಗ್ರಾಮಾಂತರ ನೂತನ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣರಿಗೆ ಅಭಿನಂದನೆ...



ಭಾರತೀಯ ಜನತಾ ಪಾರ್ಟಿಯ ಮೈಸೂರು ಗ್ರಾಮಾಂತರ ನೂತನ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಅವರನ್ನು ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಅಭಿನಂದಿಸಲಾಯಿತು. ಈ ವೇಳೆ ಮಾಜಿ ಉಪಮೇಯರ್, ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ, ರಾಜ್ಯ ವಕ್ತಾರ ಮಹೇಶ್, ಮಾಜಿ ಮೇಯರ್ ಶಿವಕುಮಾರ್, ಸುರೇಶ್‌ಬಾಬು, ಗೋಪಾಲ್‌ರಾವ್, ಸರ್ವಮಂಗಳ ಸೋಮಶೇಖರ್, ಕೇಬಲ್ ಮಹೇಶ್, ಮಾಜಿ ನಿಗಮ ಅಧ್ಯಕ್ಷ ಎಸ್.ಮಹದೇವಯ್ಯ, ಕೃಷ್ಣೇಗೌಡ, ಮಿರ್ಲೆ ಶ್ರೀನಿವಾಸ್‌ಗೌಡ, ಸಿ.ಎಂ.ಮಹಾದೇವಯ್ಯ, ಶಿವರಾಂ, ವಸಂತ್‌ಕುಮಾರ್, ಸಂತೋಷ್, ದಯಾನಂದ ಪಟೇಲ್, ಬಾಲಕೃಷ್ಣ, ಮಹೇಶ್ ಮಡಿವಾಡಿ, ಕಿರಣ್, ಜೈರಾಮ್, ಮಹೇಶ್ ನಾಯಕ, ಅಶೋಕ್, ಅಶೋಕಪುರಂ ಮಹೇಶ್, ಕೆಂಪಣ್ಣ, ಗಿರೀಶ್, ರಮೇಶ್, ಮಲ್ಲೇಶ್, ವಿನಯ್, ಬಾಲಕೃಷ್ಣ ಇನ್ನಿತರರು ಉಪಸ್ಥಿತರಿದ್ದರು

ಹುಟ್ಟುಹಬ್ಬದ ಶುಭಾಶಯ...



ಉದ್ಯಮಿ, ನಗರ ಬಿಜೆಪಿ ಉಪಾಧ್ಯಕ್ಷ ಎಸ್.ಕೆ.ದಿನೇಶ್ ಅವರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಹುಟ್ಟುಹಬ್ಬದ ಶುಭಾಶಯ ಕೋರಿದರು. ಚಿತ್ರದಲ್ಲಿ ಬಿಜೆಪಿ ಮುಖಂಡರಾದ ಸೋಮಶೇಖರ ರಾಜು, ಸುಬ್ಬಯ್ಯ, ಟೆನಿಸ್ ಗೋಪಿ, ರಾ.ಪರಮೇಶಗೌಡ, ಸಂದೇಶ್, ಅಭಿಷೇಕ್, ಯಶವಂತ್, ಕಾಣಬಹುದು.

ಅರ್ಜಿ ಆಹ್ವಾನ

ಮೈಸೂರು,ಜೂ.14–ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಲಯವು 2025–26ನೇ ಸಾಲಿನ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಒಕ್ಕಲಿಗರ ಜನಾಂಗದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ವಿದ್ಯಾರಣ್ಯಪುರಂ ಸಂಘದ ಕಚೇರಿ ಅಥವಾ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಚೇತನ್, ಮೊ. 9632747328, ವಾರ್ಡನ್ ಶ್ರೀಧರ್, ಮೊ. 9483003564 ಸಂಪರ್ಕಿಸಿ.

ಎಸ್‌ಬಿ ಅಕೌಂಟ್ ತೆರೆಯುವ ಅಭಿಯಾನ




ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಕ್ಯಾತಮಾರನಹಳ್ಳಿಯಲ್ಲಿ ಎಸ್‌ಬಿ ಅಕೌಂಟ್ ತೆರೆಯುವ ಅಭಿಯಾನ ನಡೆಯಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಎನ್.ಯೋಗಾನಂದ್, ಜಿ.ನಿರಂಜನ್, ಹರೀಶ್ ಕುಮಾರ್, ಆರ್.ಸೋಮಣ್ಣ, ಕೆ.ಗಿರೀಶ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಚಂದ್ರಶೇಖರ್, ಪಿ.ರಾಜೇಶ್ವರಿ ಹಾಗೂ ಷೇರುದಾರರು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರಲ್ಲಿ ಶಿಕ್ಷಕರ ತತ್ಸಮಾನ ವೃಂದದ ಹುದ್ದೆಗಳಿಗೆ ಪರೀಕ್ಷೆ

ಮೈಸೂರು, ಜೂ.14(ಆರ್‌ಕೆ)– ಮೈಸೂರಲ್ಲಿ ನಾಳೆ (ಜೂ.15)ಯಿಂದ 3 ದಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರ ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳ ಭರ್ತಿಗಾಗಿ ಲಿಖಿತ ಪರೀಕ್ಷೆಗಳು ನಡೆಯಲಿವೆ.

ನಜರ್‌ಬಾದ್‌ನ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಡಯಟ್)ಯಲ್ಲಿ ಜೂನ್ 15ರಿಂದ 17ರವರೆಗೆ ನಡೆಯುವ ಪರೀಕ್ಷೆಗಳು ಸುಸೂತ್ರವಾಗಿ ನಡೆಯಲು ಅನುಕೂಲವಾಗುವಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023, ಸೆಕ್ಷನ್ 163 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು, ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು. ಪರೀಕ್ಷಾ ಅವಧಿಯಲ್ಲಿ ಸುತ್ತಲಿನ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶಿಸಿದ್ದಾರೆ.

ಯುಪಿಎಸ್‌ಸಿ: ಶ್ರೇಯಸ್ 5ನೇ ರ್‍ಯಾಂಕ್



ಮೈಸೂರು, ಜೂ. 14–ಮೈಸೂರಿನ ನವೋದಯ ಫೌಂಡೇಷನ್ ವತಿಯಿಂದ ನಡೆಸಲಾಗುತ್ತಿರುವ ನವೋ–ಪ್ರಮತಿ ಸ್ಕೂಲ್ ಆಫ್ ಸಿವಿಲ್ ಸರ್ವೀಸಸ್ ಸಂಸ್ಥೆ ವಿದ್ಯಾರ್ಥಿ ಎಸ್. ಶ್ರೇಯಸ್ ಯುಪಿಎಸ್‌ಸಿ ಸಿಎಪಿಎಫ್–2024ರಲ್ಲಿ ರಾಷ್ಟ್ರಮಟ್ಟದಲ್ಲಿ 5ನೇ ರ್‍ಯಾಂಕ್ ಮತ್ತು ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ಈತ ಮೈಸೂರಿನ ನಿವಾಸಿ ಎಚ್.ಎಸ್. ಸಿದ್ದರಾಮೇಗೌಡ ಮತ್ತು ಸುಜಾತಾ ದಂಪತಿ ಪುತ್ರ.

ನಿಧನ

ಎಸ್.ಎಂ.ಮರೀಗೌಡ



ಮೈಸೂರು, ಜೂ.14– ಮೈಸೂರಿನ ದಟ್ಟಗಳ್ಳಿ 3ನೇ ಹಂತದ ನಿವಾಸಿ ಎಸ್.ಎಂ.ಮರೀಗೌಡ (74) ಅವರು ಶುಕ್ರವಾರ ಸಂಜೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮುಡಾ ನಿವೃತ್ತ ಸೆಕ್ಷನ್ ಮ್ಯಾನೇಜರ್ ಆದ ಅವರು, ಪತ್ನಿ ಸರ್ವಮಂಗಳ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮವಾದ ಕೆ.ಆರ್.ನಗರ ತಾಲೂಕು, ಸಿದ್ದನಕೊಪ್ಪಲಿನಲ್ಲಿ ನಾಳೆ (ಜೂ.15) ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಮಾಶಂಕರ್



ಮೂಲತಃ ಟಿ.ನರಸೀಪುರ ತಾಲೂಕಿನ ದೊಡ್ಡಬ್ಬಾಗಿಲು ಗ್ರಾಮದ ಮೈಸೂರು ಒಂಟಿಕೊಪ್ಪಲು ನಿವಾಸಿ, ಉದ್ಯಮಿ ಉಮಾಶಂಕರ್ (71) ಅವರು ಇಂದು ನಿಧನರಾದರು. ಮೃತರು ಪತ್ನಿ ಶಿವಾನಿ, ಪುತ್ರಿ ಶೀಮಾ ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 2 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.06.2025 ಭಾನುವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ವಿಶ್ವದ ಮೊಟ್ಟ ಮೊದಲ ವಿಶಿಷ್ಟ ಕಾರ್ಯಕ್ರಮ ವನ ದುರ್ಗಾ ವೃಕ್ಷಶಾಂತಿ ಮಹಾಯಜ್ಞ, ಸಹಸ್ರ ಚಂಡೀ ಯಾಗ, ಸ್ಥಳ: ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತಕ್ಕೆ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ (ಬೆಳಗ್ಗೆ 6.30 ರಿಂದ 7 ರವರೆಗೆ), ಬೊಜ್ಜು ನಿವಾರಣಾ ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಇಂಗ್ವಾನಲ್ ಹರ್ನಿಯಾ ಮತ್ತು ಮೂಲವ್ಯಾಧಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ವೆರಿಕೋಸ್ ವೇನ್ಸ್, ಉಬ್ಬಿದ ರಕ್ತನಾಳ, ಹಸಿರುಂಬು, ಇಸಬು ರೋಗ, ಬಂಗು, ಅಲರ್ಜಿ ಚರ್ಮರೋಗ ತಪಾಸಣಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ನಂದನ ಪ್ರದರ್ಶಕ ಕಲಾ ಟ್ರಸ್ಟ್ :** ವಿದುಷಿ ಶ್ರೀಮತಿ ಸುಪ್ರೀತಾ ಸಚ್ಚಿದಾನಂದ ಅವರ ರಂಗ ಪ್ರವೇಶ ಕಾರ್ಯಕ್ರಮ, ಉದ್ಘಾಟನೆ : ತುಮಕೂರು ಸಿದ್ಧಗಂಗಾ ಮಠದ ಅಧ್ಯಕ್ಷ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ, ಮುಖ್ಯ ಅತಿಥಿಗಳು : ಕರ್ನಾಟಕ ಕಲಾಶ್ರೀ ಡಾ. ರಾ.ಸಾ. ನಂದಕುಮಾರ್, ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ಶ್ಯಾಮಶಾಸ್ತ್ರಿಗಳ ದಿನಾಚರಣೆ, ಬೆಳಗ್ಗೆ 9ರಿಂದ ಶ್ಯಾಮಾಶಾಸ್ತ್ರಿಗಳ ರಚನೆಗಳ ಗೋಷ್ಠಿ ಗಾಯನ, ಬೆಳಗ್ಗೆ 10ರಿಂದ ಗಾಯನ ಕಛೇರಿ, ವಿದ್ವಾನ್ ಎಸ್. ಶಂಕರ್–ಗಾಯನ, ವಿದುಷಿ ಸಿಂಧು ಸುಚೇತನ್–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸ್ಥಳ: ಶ್ರೀ ವಿದ್ಯಾಭಾರತೀ ಪ್ರಾರ್ಥನಾ ಮಂದಿರ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ:** ದೈಹಿಕ ಶಿಕ್ಷಣ ನಿವೃತ್ತ ನಿರ್ದೇಶಕ ಸಿ. ಚಾಮಶೆಟ್ಟಿ ಅವರು ರಚಿಸಿರುವ ಕೃತಿಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್. ಶಿವರಾಜಪ್ಪ, ಕೃತಿಗಳ ಬಿಡುಗಡೆ : ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ವಿ. ಶ್ರೀಧರಮೂರ್ತಿ, ಕೃತಿಗಳ ಕುರಿತು : ಜೆಎಸ್‌ಎಸ್ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಕವಯತ್ರಿ ಶ್ರೀಮತಿ ಕೆರೋಡಿ ಲೋಲಾಕ್ಷಿ, ಸಿ. ಚಾಮಶೆಟ್ಟಿ, ಡಿ.ಎನ್. ಲೋಕಪ್ಪ, ಡಾ. ದೊಡ್ಡಪುಟ್ಟಯ್ಯ, ಟಿ.ಎನ್. ನಾಗೇಗೌಡ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶಂಕರ ಮಠದ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕಲ್ಪ ಮುಕುಂದ ಐಯ್ಯಂಗಾರ್ ಮತ್ತು ಡಾ. ಹೋವಾರ್ಡ್ ಲೆಸ್ಲಿ ಸ್ಮಿತ್ :** ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ : ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕರಾದ ಡಾ. ಕವಿತಾ ರೈ, ಪುಸ್ತಕ ಬಿಡುಗಡೆ: ಸಾಹಿತಿ ಶ್ರೀಮತಿ ಜ್ಯೋತಿ ಗುರು ಪ್ರಸಾದ, ಅಧ್ಯಕ್ಷತೆ : ಮೈಸೂರು ರಂಗನಾಥ್, ಕೃತಿ ಕುರಿತು: ಸಾಹಿತಿ ಡಾ.ಸಿ.ನಾಗಣ್ಣ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕಳಲೆ ಶ್ರೀರಾಕಾಸಮ್ಮನವರ ದೇವಸ್ಥಾನ ಟ್ರಸ್ಟ್ :** 8ನೇ ವರ್ಷದ ವಾರ್ಷಿಕೋತ್ಸವ ಪೂಜಾ ಮಹೋತ್ಸವ, ಬೆಳಗ್ಗೆ 8 ರಿಂದ ಗಣಪತಿ ಪ್ರಾರ್ಥನೆ, ಗಣಪತಿ ಪೂಜೆ, ಗಣಪತಿ ಪುಣ್ಯಾಃ, ನವಗ್ರಹ ಪೂಜೆ, ಕಳಸ ಸ್ಥಾಪನೆ, ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ದುರ್ಗಿ ಹೋಮ, ಶಾಂತಿ ಹೋಮ, ಪೂರ್ಣಾಹುತಿ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ಕಳಲೆ, ನಂಜನಗೂಡು ತಾ.

■ **ಶ್ರೀ ಸತ್ಯನಾರಾಯಣಸ್ವಾಮಿ ಮತ್ತು ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** ನವಗ್ರಹಗಳ ನೂತನ ಶಿಲಾವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ನೂತನ ಅಶ್ವತ್ಥ ಕಟ್ಟೆಯ ಉದ್ಘಾಟನಾ ಕಾರ್ಯಕ್ರಮ, ಉದ್ಘಾಟನೆ : ಶ್ರೀ ದಂಡಿನ ಮಾರಮ್ಮನ ದೇವಸ್ಥಾನದ ಪೀಠಾಧಿಪತಿ ಶಿವಪ್ಪ, ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ, ಸಂಜೆ 6ಕ್ಕೆ ಸುಚೇತನ್ ರಂಗಸ್ವಾಮಿ ತಂಡದವರಿಂದ ರಸಸಂಜೆ ಕಾರ್ಯಕ್ರಮ, ಅಧ್ಯಕ್ಷತೆ : ಉದ್ಯಮಿ ಸಿ. ರಾಮಕೃಷ್ಣ, ಮುಖ್ಯ ಅತಿಥಿಗಳು : ಜ್ಯೋತಿಷಿ ಡಾ. ಎನ್. ಕೃಷ್ಣ, ಚಂದ್ರಮೌಳಿ, ಶ್ರೀಮತಿ ರುಕ್ಮಿಣಿ ಪ್ರಕಾಶ್ ಕುಮಾರ್, ಪ್ರದೀಪ್ ಚಂದ್ರ, ನಾರಾಯಣ್, ಸ್ಥಳ: ದೇವಸ್ಥಾನದ ಆವರಣ, ರಾಜೇಂದ್ರನಗರ.

■ **ದಿ ಅನಾಥಾಲಯ :** ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆ–2025, ಅಧ್ಯಕ್ಷತೆ : ಅನಾಥಾಲಯ ಅಧ್ಯಕ್ಷ ಸಿ.ವಿ. ಗೋಪಿನಾಥ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ತನ್ವೀರ್ ಆಸೀಫ್ ಶೇಖ್ ಅವರಿಂದ ನಾಗರೀಕ ಸೇವೆಗಳ ಸ್ಪರ್ಧಾತ್ಮಕ ಪರೀಕ್ಷೆಗಳು –ಭೇದಿಸುವ ಸಲಕರಣೆಗಳು, ಸಾಧನೆಗಳು – ಗುರಿ ಮತ್ತು ಪೂರ್ವ ಸಿದ್ಧತೆಗಳ ಕೆಲವು ಆಯಾಮಗಳು ಕುರಿತು ಉಪನ್ಯಾಸ, ಸ್ಥಳ: ಅನ್ನಪೂರ್ಣ ನಿಲಯ, ಅನಾಥಾಲಯ, ಬೆಳಗ್ಗೆ 11ಕ್ಕೆ.

■ **ವೃಕ್ಷ ಟ್ರಸ್ಟ್, ಪಿನಾಕ:** ವೃಕ್ಷ ಟ್ರಸ್ಟ್ ಉದ್ಘಾಟನಾ ಸಮಾರಂಭ, ಉಪಸ್ಥಿತರು: ಹಿರಿಯ ರಂಗ ನಿರ್ದೇಶಕ ಹೆಚ್.ಎಸ್.ಉಮೇಶ್, ಹಿರಿಯ ರಂಗ ಕಲಾವಿದೆ ಶ್ರೀಮತಿ ಇಂದಿರಾ ನಾಯರ್, ಮಾಜಿ ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜ್‌ಗೌಡ, ಉದ್ಯಮಿ ಡಾ. ಧರ್ಮಪ್ರಸಾದ್, ವೃಕ್ಷ ಸಂಸ್ಥಾಪಕ ಕಾರ್ಯದರ್ಶಿ ಪಿ.ಶಾಂತಕುಮಾರ್, ಪಿನಾಕ ಥಿಯೇಟರ್ ಮುಖ್ಯಸ್ಥ ಎಸ್.ಹೇಮಂತ, ಸ್ಥಳ: ರಮಾಗೋವಿಂದ ರಂಗ ಮಂದಿರ, ಸುಯೋಗ್ ಆಸ್ಪತ್ರೆ ಹಿಂಭಾಗ, ರಾಮಕೃಷ್ಣನಗರ, ಸಂಜೆ 4ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಮತ್ತು ಅಧ್ಯಾತ್ಮ ಯೋಗ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.

■ **ನಟನಾ ರಂಗ ಶಾಲೆ:** ವಾರಾಂತ್ಯ ರಂಗ ಪ್ರದರ್ಶನ, ಬೆಂಗಳೂರಿನ ವಾಸ್ಪ್ ಥಿಯೇಟರ್ ಅಭಿನಯಿಸುವ ಟಿ.ಸುನಂದಮ್ಮರವರ ನಗೆ ಬರಹಗಳ ಆಧಾರಿತ ನಾಟಕ 'ಹೀಗಾದ್ರೆ ಹೇಗೆ', ನಾಟಕದ ರಂಗರೂಪ ಕೆ.ವೈ ನಾರಾಯಣ ಸ್ವಾಮಿ, ನಿರ್ದೇಶನ : ವಿನಯ್ ಶಾಸ್ತ್ರಿ, ಸ್ಥಳ: ನಟನಾ ರಂಗ ಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ:** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ನಾಟಕ ಆ ಊರು ಈ ಊರು, ನಿರ್ದೇಶನ : ಯತೀಶ್ ಎನ್. ಕೊಳ್ಳೇಗಾಲ, ಸ್ಥಳ: ರಂಗಾಯಣದ ಭೂಮಿಗೀತ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ –ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಮತ್ತೂರು ಕುಮಾರ ಸ್ವಾಮಿ, ಜಯಂತಿ ವಿ ಭಟ್ಟ್ ಹಾಗೂ ಪಿ.ಎಸ್.ರಂಜನಿ, ವ್ಯಾಖ್ಯಾನ–ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ದಿವ್ಯಾರಾಘವನ್, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು–ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಪ್ರಸ್ತುತಿ–ಡಿ. ಶ್ರೀಹರಿ, 8.50 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಶಿಶುಗಳಲ್ಲಿ ಶ್ರವಣಶಕ್ತಿ ತಪಾಸಣೆಯ ಅಗತ್ಯ ಮತ್ತು ಪರಿಹಾರ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಆಡಿಯಾಲಜಿ ವಿಭಾಗದ ಪ್ರೊ. ಡಾ. ಅಜಿತ್‌ಕುಮಾರ್ ಯು. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ನೇರ ಫೋನ್ ಇನ್ ಕಾರ್ಯಕ್ರಮ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 KRISH-TRISH and Balty boy, ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ ದಿ ಅಕ್ಸ್ ಫರ್ಡ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ – ಚಾಮರಾಜನಗರದ ಹವ್ಯಾಸಿ ಜನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ ಅವರಿಂದ ರಂಗದ ಪದ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ ಅನುರಕ್ತೆ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ –ತಾಳಮದ್ದಲೆ–ಪ್ರಸಂಗ–ಗದಾಯುದ್ಧ, ಪ್ರಸ್ತುತಿ–ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಕೃಪಾ ಪೋಷಿತ ಯಕ್ಷಗಾನ ಮಂಡಲಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದ ಮೀಮಾಂಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪುರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ–ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ–ಜಿ.ಕೆ. ರವೀಂದ್ರ ಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಶ್ರೀ ಕೃಷ್ಣ ಪಾರಿಜಾತ ನಾಟಕದ ಹಾಡುಗಳು, 9.30 ವಿಶೇಷ ಕಾರ್ಯಕ್ರಮ – ವಿಕಸಿತ ಭಾರತದ ಅಮೃತಕಾಲ ಸೇವೆ, ಉತ್ತಮ ಆಡಳಿತ ಹಾಗೂ ಗರೀಬ್ ಕಲ್ಯಾಣದ ಹನ್ನೊಂದು ವರ್ಷಗಳು, 10.00 ರವಿವಾರದ ಅಖಿಲಭಾರತ ಸಂಗೀತ ಸಭಾ, ಚಂದನ್ ವಿಶ್ವಕರ್ಮ ಹಾಗೂ ಉದಯ್ ಕುಲಕರ್ಣಿ– ತಬಲ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 15 ಭಾನುವಾರ 2025

ಸಂಪುಟ: 46 | ಸಂಚಿಕೆ: 60 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಾಳೆಯಿಂದ ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತ



ಬೆಂಗಳೂರು: ಜೂನ್ 16ರಿಂದ ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳನ್ನು ಸ್ಥಗಿತಗೊಳಿಸುವ ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದೆ.

ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಣೆ

ಬೈಕ್ ಟ್ಯಾಕ್ಸಿಗಳನ್ನು ರದ್ದುಗೊಳಿಸುವಂತೆ ಏಕಸದಸ್ಯ ಪೀಠ ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾದ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಕಾಮೇಶ್ವರರಾವ್ ಮತ್ತು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಒಳಗೊಂಡ ದ್ವಿಸದಸ್ಯ ಪೀಠವು ವಿಚಾರಣೆ ನಡೆಸಿತು. ಅರ್ಜಿದಾರರಾದ ಓಲಾ ಮತ್ತು ಉಬರ್ ಮತ್ತು ಪ್ರತಿವಾದಿ (ಸಾರಿಗೆ ಇಲಾಖೆ) ಜೂ.20ರೊಳಗೆ ಅರ್ಹತೆ ಆಧಾರದ ಮೇಲೆ ತಮ್ಮ ಸಲ್ಲಿಕೆಗಳನ್ನು ಸಲ್ಲಿಸುವಂತೆ ನಿರ್ದೇಶಿಸಿತು. ಪ್ರಕರಣದ ಮುಂದಿನ ▶ 6ನೇ ಪುಟಕ್ಕೆ

ಆಗುಂಬೆ ಘಾಟ್‌ನಲ್ಲಿ ಮೂರೂವರೆ ತಿಂಗಳು ಭಾರಿ ವಾಹನ ಸಂಚಾರ ಬಂದ್



ಶಿವಮೊಗ್ಗ: ಭಾರಿ ಮಳೆಯಿಂದ ಭೂಕುಸಿತವಾಗುವ ಸಾಧ್ಯತೆ ಇರುವುದರಿಂದ ಮುಂಜಾಗ್ರತಾ ಕ್ರಮವಾಗಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಆಗುಂಬೆ ಘಾಟ್‌ನಲ್ಲಿ ಭಾರಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಜೂ.15ರಿಂದ ಸೆಪ್ಟೆಂಬರ್ 30ರವರೆಗೆ ಆಗುಂಬೆ ಘಾಟ್‌ನಲ್ಲಿ ಭಾರಿ ವಾಹನಗಳ ಸಂಚಾರ ನಿಷೇಧಿಸಿ ಶಿವಮೊಗ್ಗ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಆದೇಶಿಸಿದ್ದಾರೆ. ಹೀಗಾಗಿ ನಾಳೆಯಿಂದ ಮೂರೂವರೆ ತಿಂಗಳ ಕಾಲ ಆಗುಂಬೆ ಘಾಟ್‌ನಲ್ಲಿ ಭಾರಿ ವಾಹನ ಸಂಚಾರ ಇರುವುದಿಲ್ಲ. ಕೇವಲ ಲಘು ವಾಹನಗಳಿಗೆ ಮಾತ್ರ ಸಂಚಾರಕ್ಕೆ ಅವಕಾಶ ನೀಡಲಾಗಿದೆ ಉಡುಪಿ, ಕುಂದಾಪುರ ಸಿದ್ದಾಪುರ 'ಮಾಸ್ತಿಕಟ್ಟೆ' ತೀರ್ಥಹಳ್ಳಿ ಮಾರ್ಗದಲ್ಲಿ ಭಾರಿ ವಾಹನಗಳು ಸಂಚರಿಸುವಂತೆ ಸೂಚಿಸಲಾಗಿದೆ.

ಬಾಲ್ಯವಿವಾಹವಾಯ್ತು... ಈಗ ಮತ್ತೊಂದು ಗಂಭೀರ ಸಮಸ್ಯೆ

ಬಾಲ ಗರ್ಭಿಣಿಯರು!

- ಆರೋಗ್ಯ–ಕುಟುಂಬ ಅಭಿವೃದ್ಧಿ ಇಲಾಖೆಗೆ ಇನ್ನೊಂದು ತಲೆನೋವು
- ಇಂತಹ ಗರ್ಭಿಣಿಯರ ಆರೋಗ್ಯ ರಕ್ಷಣೆಗೆ ಎಲ್ಲಾ ಮುನ್ನೆಚ್ಚರಿಕಾ ಕ್ರಮ
- ಏನೇ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡರೂ ಎಲ್ಲವೂ ನಿರರ್ಥಕ

ಮೈಸೂರು,ಜೂ.14–ಬಾಲ್ಯವಿವಾಹ ಕಾನೂನುಬಾಹಿರ. **ಬಾಲ್ಯವಿವಾಹ ಮಾಡಿದ ಬಾಲಕಿಯ ಪೋಷಕರು, ಬಾಲಕಿಯನ್ನು ವಿವಾಹವಾದ ವ್ಯಕ್ತಿ, ಆತನ ಪೋಷಕರು ಹಾಗೂ ಸಹಕರಿಸಿದ ಎಲ್ಲರಿಗೂ ಈಗ ಜೈಲು ಶಿಕ್ಷೆ ಗ್ಯಾರಂಟಿ.**

ಬಾಲ್ಯವಿವಾಹ ತಡೆಯಲು ಸರ್ಕಾರವು ಇಂತಹ ಕಟ್ಟುನಿಟ್ಟಿನ ಕಾನೂನನ್ನು ಜಾರಿಗೊಳಿಸಿದೆ. ಅಲ್ಲದೆ ಬಾಲ್ಯವಿವಾಹ ತಡೆ ಬಗ್ಗೆ ಸತತವಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದರೂ ಬಾಲ್ಯವಿವಾಹಗಳ ಸಂಖ್ಯೆಯಂತೂ ಕಡಿಮೆಯಾಗಿಲ್ಲ ಎಂಬುದಕ್ಕೆ 'ಬಾಲ ಗರ್ಭಿಣಿ' ಪ್ರಕರಣಗಳೇ ಸಾಕ್ಷಿ.

ಮೈಸೂರು ಜಿಲ್ಲೆಯಲ್ಲಿ 1603 ಬಾಲ ಗರ್ಭಿಣಿಯರು ಪತ್ತೆಯಾಗಿರುವುದು ತೀವ್ರ ಆತಂಕಕ್ಕೆ ಎಡೆಮಾಡಿಕೊಟ್ಟಿದೆ.

ಮೈಸೂರು ಜಿಲ್ಲೆಯಲ್ಲಿ 14ರಿಂದ 15 ವರ್ಷಕ್ಕೊಳಪಟ್ಟ ಐವರು, 15ರಿಂದ 16 ವರ್ಷಕ್ಕೊಳಪಟ್ಟ 15, 16ರಿಂದ 17 ವರ್ಷಕ್ಕೊಳಪಟ್ಟ 23, 17ರಿಂದ 18 ವರ್ಷಕ್ಕೊಳಪಟ್ಟ 124 ಮತ್ತು 18ರಿಂದ 19 ವರ್ಷಕ್ಕೊಳಪಟ್ಟ 1436 ಸೇರಿದಂತೆ ಒಟ್ಟು 1603 ಬಾಲಗರ್ಭಿಣಿಯರು ಇರುವುದು ಸಂತಾನೋತ್ಪತ್ತಿ ಹಾಗೂ ಮಕ್ಕಳ ಆರೋಗ್ಯ (Reproductive and Child Health-RCH) ಅಂಕಿ–ಅಂಶಗಳು ತಿಳಿಸಿವೆ.

ಹಾಸನ ಜಿಲ್ಲೆಯಲ್ಲಿ 14ರಿಂದ 15 ವರ್ಷಕ್ಕೊಳಪಟ್ಟ ಇಬ್ಬರು, 15ರಿಂದ 16 ವರ್ಷಕ್ಕೊಳಪಟ್ಟ 7, 16ರಿಂದ 17 ವರ್ಷಕ್ಕೊಳಪಟ್ಟ 18, 17ರಿಂದ 18 ವರ್ಷಕ್ಕೊಳಪಟ್ಟ 136, 18ರಿಂದ 19 ವರ್ಷಕ್ಕೊಳಪಟ್ಟ 924 ಸೇರಿದಂತೆ 1087 ಬಾಲಗರ್ಭಿಣಿಯರಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 15ರಿಂದ 16 ವರ್ಷಕ್ಕೊಳಪಟ್ಟ ▶ 6ನೇ ಪುಟಕ್ಕೆ

ಇತ್ತೀಚಿನ ಅಂಕಿ–ಅಂಶ	
ಮೈಸೂರು–	1603
ಹಾಸನ–	1087
ಮಂಡ್ಯ–	948
ಕೊಡಗು–	424
ಚಾ.ನಗರ–	416



ಗೆಜೆಟೆಡ್ ಅಧಿಕಾರಿಗಳಿಂದ ಕಾನೂನು ಉಲ್ಲಂಘನೆ

ಅಪ್ರಾಪ್ತ ಗರ್ಭಿಣಿಯರಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲು ಆಧಾರ್ ಕಾರ್ಡ್ ಕಡ್ಡಾಯವಾಗಿದ್ದು, 18 ವರ್ಷಕ್ಕಿಂತ ಕಡಿಮೆ ಇದ್ದಲ್ಲಿ ಚಿಕಿತ್ಸೆ ನೀಡುವುದಿಲ್ಲ. ಆಧಾರ್ ಕಾರ್ಡ್‌ನಲ್ಲಿ ಜನ್ಮ ದಿನಾಂಕ ತಿದ್ದುಪಡಿಗೆ ಒಂದು ಬಾರಿ ಅವಕಾಶ ನೀಡಿರುವುದನ್ನೇ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. 'ಎ' ಗ್ರೇಡ್ ಗೆಜೆಟೆಟ್ ಅಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಜನ್ಮ ದಿನಾಂಕ ತಿದ್ದುಪಡಿ ಮಾಡಿಸಿಕೊಂಡು ಚಿಕಿತ್ಸೆ ಪಡೆಯಲಾಗುತ್ತಿದ್ದು, ಪರೋಕ್ಷವಾಗಿ ಬಾಲ ಗರ್ಭಿಣಿಯರ ಚಿಕಿತ್ಸೆಗೆ ಗೆಜೆಟೆಡ್ ಅಧಿಕಾರಿಗಳು ಕೈ ಜೋಡಿಸುತ್ತಿದ್ದಾರೆ!

ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಮೋದಿ ಸರ್ಕಾರವೇ ಕಾರಣ

- ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ
- ಮೋದಿ ಅಧಿಕಾರಕ್ಕೆ ಬರುವ ಮುನ್ನ ಇದ್ದ ಬೆಲೆಗಳ ಗಮನಿಸಿದರೆ ಮನವರಿಕೆಯಾಗುತ್ತೆ!

ಬೆಂಗಳೂರು,ಜೂ.14(ಕೆಎಂಶಿ)– ದೇಶದಲ್ಲಿ ಅಗತ್ಯ ಸಾಮಗ್ರಿಗಳ ಬೆಲೆ ಏರಿಕೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕೇಂದ್ರದಲ್ಲಿ ಮೋದಿ ಅಧಿಕಾರಕ್ಕೆ ಬರುವ ಮೊದಲು ಪೆಟ್ರೋಲ್, ಡೀಸೆಲ್, ಔಷಧ, ರಸಗೊಬ್ಬರ, ಎಣ್ಣೆ, ಅಡುಗೆ ಅನಿಲ ಬೆಲೆ ಎಷ್ಟಿತ್ತು; ಈಗ ಎಷ್ಟು ಏರಿಕೆಯಾಗಿದೆ ಎಂಬುದನ್ನು ಗಮನಿಸಬೇಕು ಎಂದರು.

ಕರ್ನಾಟಕದಲ್ಲಿ ಅಭಿವೃದ್ಧಿಗೆ ಹಣ ಇಲ್ಲ ಎನ್ನುವ ಬಿಜೆಪಿ ಪರಿವಾರದ ಸುಳ್ಳುಗಳಿಗೆ ಜನರೇ ಉತ್ತರ ನೀಡುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗೆ ಕೊಟ್ಟಿರುವ ಹಣ ಜನರ ಮನೆ ಬಾಗಿಲಿಗೆ ತಲುಪಿದೆ. ಸುಳ್ಳು ಬಿಜೆಪಿ ಮನೆ ದೇವರು, ಅಧಿಕಾರ ಇದ್ದಾಗಲೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಾಡಲಿಲ್ಲ, 371ಜೆ ತಿದ್ದುಪಡಿ ವಿರೋಧಿಸಿದ್ದರು, ಉಪ ಪ್ರಧಾನಿಯಾಗಿದ್ದ ಎಲ್.ಕೆ.ಅಡ್ವಾಣಿ 371ಜೆ ಜಾರಿ ಮಾಡುವುದಿಲ್ಲ ಎಂದು ಪತ್ರ ಬರೆದಿದ್ದರು. ಡಾ.ಮನಮೋಹನ್ ಸಿಂಗ್ ಪ್ರಧಾನಿಯಾದ ನಂತರ ಮಲ್ಲಿಕಾರ್ಜುನ ಖರ್ಗೆ, ಧರಂಸಿಂಗ್ ಹೋರಾಟದ ಫಲವಾಗಿ 371ಜೆ ಜಾರಿಗೆ ತರಲಾಯಿತು. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲೇ ರಾಜ್ಯ 2ನೇ ಸ್ಥಾನದಲ್ಲಿದೆ. ರಾಜ್ಯ ಆರ್ಥಿಕ ಪ್ರಗತಿ ಪಥದಲ್ಲಿ ಇದೆ ಎಂಬುದಕ್ಕೆ ಇದೇ ಸಾಕ್ಷಿ. ಕೆಕೆಆರ್‌ಡಿಬಿಗೆ ವರ್ಷಕ್ಕೆ 5,000 ಕೋಟಿ ರೂ. ಕೊಡುವುದಾಗಿ ಚುನಾವಣೆ ವೇಳೆ ನೀಡಿದ್ದ ಭರವಸೆಯಂತೆ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಅಭಿವೃದ್ಧಿಗೆ 3 ವರ್ಷಗಳಲ್ಲಿ 13,000 ಕೋಟಿ ರೂ. ಅನುದಾನ ನೀಡಲಾಗಿದೆ. ಡಾ.ನಂಜುಂಡಪ್ಪ ವರದಿ ಶಿಫಾರಸಿನ ಆಶಯಗಳನ್ನು ಸರ್ಕಾರ ಈಡೇರಿಸುತ್ತಿದೆ. ಆರೋಗ್ಯ, ಶಿಕ್ಷಣ, ಉದ್ಯೋಗದ ಜೊತೆಗೆ ಮೂಲಸೌಕರ್ಯಗಳ ಈಡೇರಿಕೆಗೆ ಹಣ ವಿನಿಯೋಗ ಮಾಡಲಾಗುತ್ತಿದೆ. 42 ಆಸ್ಪತ್ರೆ ಮೇಲ್ದರ್ಜೆ, ಹೊಸ ಆಸ್ಪತ್ರೆಗಳ ನಿರ್ಮಾಣ, ಆರೋಗ್ಯ ಸೌಲಭ್ಯ ವಿಸ್ತರಣೆಗೆ 847 ಕೋಟಿ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.




ಮುಖ್ಯಮಂತ್ರಿ ಸಿದ್ದರಾಮಯ್ಯ

ನುಡಿದಂತೆ ನಡೆದವರು ನಾವು

"ಕ್ರಾಂತಿಕಾರಿ ಬಸವಣ್ಣನವರ ಆಶಯದಂತೆ ನುಡಿದಂತೆ ನಡೆಯುವವರು ನಾವು. ಚುನಾವಣೆಯಲ್ಲಿ ನೀಡಿದ ಭರವಸೆಗಳಲ್ಲಿ ಐದು ಗ್ಯಾರಂಟಿಗಳೂ ಸೇರಿದಂತೆ 200 ಭರವಸೆಗಳನ್ನು ಈಡೇರಿಸಲಾಗಿದೆ. ಮುಂದಿನ 2 ವರ್ಷಗಳ ಆಡಳಿತದಲ್ಲಿ ಉಳಿದ ಎಲ್ಲಾ ಭರವಸೆಗಳನ್ನು ಈಡೇರಿಸುವ ಮೂಲಕ ಸಮಗ್ರ ಕರ್ನಾಟಕದ ಅಭಿವೃದ್ಧಿ ಸಾಧಿಸಿ ತೋರಿಸುತ್ತೇವೆ. –ಸಿದ್ದರಾಮಯ್ಯ

ಕಲ್ಯಾಣ ಕರ್ನಾಟಕವನ್ನೂ ಮೈಸೂರು, ಬೆಂಗಳೂರಂತೆ ಮಾಡಿ!

ಯಾದಗಿರಿ: ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಪ್ರದೇಶವನ್ನು ಮೈಸೂರು ಮತ್ತು ಬೆಂಗಳೂರಂತೆ ಪರಿವರ್ತಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಒತ್ತಾಯಿಸಿದರು.



ಮಲ್ಲಿಕಾರ್ಜುನ ಖರ್ಗೆ

ಈ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಮಂಜೂರು ಮಾಡಬೇಕಾಗಿದೆ ಎಂದು ಪ್ರತಿಪಾದಿಸಿದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರೂ ಆದ ಖರ್ಗೆ, ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ಸಹಕರಿಸುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿ ಬೆಂಗಳೂರನ್ನು ಸಿಂಗಾಪುರದಂತೆ ಪರಿವರ್ತಿಸುವ ಬಗ್ಗೆ ಮಾತನಾಡುತ್ತಿದ್ದರು. ನೀವು ಈಗ ಅದನ್ನು ಮಾಡಬಹುದು. ಕಲ್ಯಾಣ ಕರ್ನಾಟಕ ಪ್ರದೇಶವು ಮೈಸೂರು ಮತ್ತು ಬೆಂಗಳೂರಿನಂತೆ ರೂಪಾಂತರಗೊಂಡರೆ ನಮಗೆ ಸಾಕು. ಸಿದ್ದರಾಮಯ್ಯ ಅವರ ಮೈಸೂರು ಮತ್ತು ಡಿ.ಕೆ.ಶಿವಕುಮಾರ್ ಅವರ ಬೆಂಗಳೂರಿನಂತೆ ಮೊದಲು ಕಲ್ಯಾಣ ಕರ್ನಾಟಕ ಆಗಲಿ. ನಂತರ ಸಿಂಗಾಪುರವನ್ನು ನೋಡೋಣ' ಎಂದರು.


ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನೀವು (ಸರ್ಕಾರ) ಇದರ ಬಗ್ಗೆ ಗಮನಹರಿಸಬೇಕೆಂದು ನಾನು ವಿನಂತಿಸುತ್ತೇನೆ. ವಿಶೇಷವಾಗಿ ಈ ಪ್ರದೇಶದಲ್ಲಿ ಖಾಲಿ ಇರುವ ಶಿಕ್ಷಕ ಹುದ್ದೆಗಳು ಸೇರಿದಂತೆ ನಾನಾ ಬಾಕಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಖಚಿತಪಡಿಸಿಕೊಳ್ಳಿ. ಅಗತ್ಯ ಹಣವನ್ನು ಸಹ ಮಂಜೂರು ಮಾಡಿ ಎಂದರು. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆರೋಗ್ಯ ಮೂಲ ಸೌಕರ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಆರೋಗ್ಯ ಆವಿಷ್ಕಾರ ಯೋಜನೆಯಡಿ 440 ಕೋಟಿ ರೂ. ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಖರ್ಗೆ ಮಾತನಾಡಿದರು. ▶ 6ನೇ ಪುಟಕ್ಕೆ

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ ಹುದ್ದೆಗಳನ್ನು, ವಿಶೇಷವಾಗಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಆರ್ಥಿಕ ಅಡೆತಡೆಗಳಿಲ್ಲ ಎಂದು ಕಾನೂನು ಹೇಳುತ್ತದೆ. ಭಾರತೀಯ ಸಂವಿಧಾನದ 371ಎ ವಿಧಿಯು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುತ್ತದೆ. ಇದು ಅಲ್ಲಿನ ಸಾಮಾಜಿಕ–ಆರ್ಥಿಕ, ಅಭಿವೃದ್ಧಿಯಲ್ಲಿ ಹಿಂದುಳಿದಿರುವಿಕೆಯನ್ನು ಪರಿಹರಿಸುವ ಗುರಿ ಹೊಂದಿದೆ.

ವರ್ಷಾಂತ್ಯಕ್ಕೆ ಸಿದ್ದರಾಮಯ್ಯನ ಅಧಿಕಾರ ಹೋಗೋದು ನಿಶ್ಚಿತ

- ಎಂಎಲ್‌ಸಿ ಹೆಚ್.ವಿಶ್ವನಾಥ್ ಭವಿಷ್ಯ
- ಡಿ.ಕೆ.ಶಿವಕುಮಾರ್ ಇಲ್ಲ ಮಲ್ಲಿಕಾರ್ಜುನ ಖರ್ಗೆ ಸಿಎಂ ಆಗ್ತಾರೆ!
- ಅಧಿಕಾರ ಇಲ್ಲದಿರುವಾಗ ಜಾತಿಗಣತಿ ಹೇಗೆ ಮಾಡಿಸುತ್ತಾರೆ
- ಅಭಿವೃದ್ಧಿ ಸರದಾರ ಅರಸು ಎಲ್ಲಿ! ಭ್ರಷ್ಟತೆ ಅಧಿಪತಿ ಸಿದ್ದರಾಮಯ್ಯ ಎಲ್ಲಿ!!

ಮೈಸೂರು, ಜೂ.14(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ವರ್ಷಾಂತ್ಯಕ್ಕೆ ಅಧಿಕಾರ ಕಳೆದುಕೊಳ್ಳುವುದು ನಿಶ್ಚಿತ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಭವಿಷ್ಯ ನುಡಿದಿದ್ದಾರೆ.



ಹೆಚ್.ವಿಶ್ವನಾಥ್

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನವೆಂಬರ್ ಅಥವಾ ಡಿಸೆಂಬರ್ ವೇಳೆಗೆ ಸಿದ್ದರಾಮಯ್ಯ ಮಾಜಿ ಸಿಎಂ ಆಗುತ್ತಾರೆ. ಹಾಗಾಗಿ ಇವರು ಜಾತಿಗಣತಿ ವರದಿ ಜಾರಿ ಮಾಡುವುದಾದರೂ ಹೇಗೆ ಎಂದು ಪ್ರಶ್ನಿಸಿದರು. ಕಳೆದ ಹತ್ತು ವರ್ಷಗಳ ಹಿಂದೆ ಜಾತಿಗಣತಿಗಾಗಿ ಕಾಂತರಾಜು ಆಯೋಗ ರಚನೆ ಮಾಡಲಾಗಿತ್ತು. ಒಂದೂವರೆ ಲಕ್ಷ ಶಿಕ್ಷಕರು ಜಾತಿಗಣತಿಗಾಗಿ ಶ್ರಮಿಸಿದ್ದರು. 180 ಕೋಟಿ ರೂ. ವೆಚ್ಚವಾಯಿತು. ಕಾಂತರಾಜು ವರದಿ ಜಾರಿ ಮಾಡಲು ಬಹಳಷ್ಟು ಅವಕಾಶ ಇತ್ತು. ಆದರೆ ಹಾವಾಡಿಗ ಬುಟ್ಟಿಯಿಂದ ಹಾವು ಬಿಡುತ್ತೇನೆ...ಬಿಡುತ್ತೇನೆ ಎಂದು ಹೆದರಿಸಿದಂತೆ ಜಾತಿಗಣತಿ ವರದಿ ▶ 6ನೇ ಪುಟಕ್ಕೆ

ದಸರಾ ಹಣ ತಿಂದು ತೇಗುತ್ತಿದ್ದಾರೆ

ಮೈಸೂರು ದಸರಾ ಹಣವನ್ನು ತಿಂದು ತೇಗುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪಿಸಿದ್ದಾರೆ. ಕಳೆದ ಬಾರಿಯ ದಸರಾದಲ್ಲಿ 49 ಕೋಟಿ ರೂ. ವೆಚ್ಚವಾಗಿದೆ ಎಂದು 8 ತಿಂಗಳ ನಂತರ ಲೆಕ್ಕ ನೀಡಿದ್ದಾರೆ. ಒಟ್ಟಾರೆ ಹಣದಲ್ಲಿ ಯುವ ದಸರಾಗೆ 20 ಕೋಟಿ ರೂ. ಖರ್ಚು ಮಾಡಿದ್ದಾರೆ. ಇಷ್ಟೊಂದು ಹಣ ಖರ್ಚು ಮಾಡುವ ಅಗತ್ಯವಿತ್ತೆ ಎಂದು ಪ್ರಶ್ನಿಸಿದರು. ಮೈಸೂರು ದಸರಾದಲ್ಲಿ ವಿಶಿಷ್ಟ ರೀತಿಯ ಯಾವುದೇ ಕಾರ್ಯಕ್ರಮ ನಡೆಸಿಲ್ಲ. ಆದರೂ 49 ಕೋಟಿ ಖರ್ಚಿನ ಲೆಕ್ಕ ನೀಡಿದ್ದಾರೆ. ಈ ಮೂಲಕ ದಸರಾ ಹಣವನ್ನು ತಿಂದು ತೇಗುತ್ತಿದ್ದಾರೆ. ಇನ್ನು ನಾಲ್ಕೈದು ವರ್ಷಕ್ಕೆ ಈಗ ಆಗಿರುವ 49 ಕೋಟಿ ಖರ್ಚನ್ನು ನೂರು ಕೋಟಿ ರೂಪಾಯಿಗೆ ಏರಿಕೆ ಮಾಡಲಿದ್ದಾರೆ ಎಂದು ವಿಶ್ವನಾಥ್ ಆಪಾದಿಸಿದರು. ಇದೆಲ್ಲದರ ಮಧ್ಯೆ ಮೈಸೂರು ಅರಮನೆ ಮಂಡಳಿಯ ಉಪನಿರ್ದೇಶಕ ಸುಬ್ರಹ್ಮಣ್ಯ ಎಂಬಾತ ಲೂಟಿ ಮಾಡುತ್ತಿದ್ದು, ಎಲ್ಲರಿಗೂ ಹಣ ಕೊಟ್ಟು ರಿಪೇರಿ ಮಾಡಿಕೊಂಡು ಇಟ್ಟುಕೊಂಡಿದ್ದಾರೆ. ▶ 6ನೇ ಪುಟಕ್ಕೆ

ಮೈಸೂರಲ್ಲಿ ಕೋಟ್ಯಾಂತರ ವೆಚ್ಚದಲ್ಲಿ ನಿರ್ಮಿಸಿದ 'ಶೌಚಾಲಯ'ಗಳ ಬಳಕೆಗೆ ಭಾಗ್ಯವಿಲ್ಲ

ಸಾರ್ವಜನಿಕರ ಕೋಟಿ ಕೋಟಿ ತೆರಿಗೆ ಅಪವ್ಯಯಕ್ಕೆ ಇದು ಒಂದು ತಾಜಾ ಉದಾಹರಣೆ



ಮೈಸೂರು,ಜೂ.14(ಎಂಕೆ)–ಸ್ವಚ್ಛ ಭಾರತ್ ಅಭಿಯಾನ ಸೇರಿದಂತೆ ವಿವಿಧ ಯೋಜನೆಗಳಡಿ ಮೈಸೂರು ನಗರದೆಲ್ಲೆಡೆ ಲಕ್ಷಾಂತರ ರೂ. ವೆಚ್ಚದಲ್ಲಿ ನಿರ್ಮಿಸಿರುವ 10ಕ್ಕೂ ಹೆಚ್ಚು ಸಾರ್ವಜನಿಕ ಶೌಚಾಲಯಗಳು ವರ್ಷಗಳಿಂದ ಬಳಕೆಯಾಗದೆ ಪಾಳು ಬಿದ್ದಿವೆ.

ನಗರ ವ್ಯಾಪ್ತಿಯಲ್ಲಿ ಬಯಲು ಬಹಿರ್ದೆಸೆಗೆ ಮುಕ್ತಿ ಹಾಡುವುದು, ಸ್ವಚ್ಛತಾ ನಿರ್ವಹಣೆ ಹಿನ್ನೆಲೆ ಜನ ದಟ್ಟಣೆ ಹೆಚ್ಚಾಗಿರುವ ಸ್ಥಳಗಳಲ್ಲಿ ನಿರ್ಮಿಸಲಾಗಿರುವ ಸಾರ್ವಜನಿಕ ಶೌಚಾಲಯಗಳ ಕಟ್ಟಡದ ಬಾಗಿಲು ಬಂದ್ ಆಗಿದ್ದು, ಉದ್ಘಾಟನೆಯಾಗದೆ ಹಾಳು ಕೊಂಪೆಯಂತಾಗಿವೆ. ವಿಜಯನಗರ ವಾಟರ್ ಟ್ಯಾಂಕ್, ವಿದ್ಯಾರಣ್ಯಪುರಂ ಅಕ್ಕಮಹಾದೇವಿ ರಸ್ತೆ, ಜೆಪಿ ನಗರ, ಕೆಆರ್‌ಎಸ್ ಮುಖ್ಯ ರಸ್ತೆ (ಗೋಕುಲಂ), ಲಕ್ಷ್ಮಿಪುರಂ ಪೊಲೀಸ್ ಠಾಣೆ ಸಮೀಪ (ಆರ್‌ಟಿಓ ಕಚೇರಿ ಎದುರು)ಸೇರಿದಂತೆ ಜನದಟ್ಟಣೆ ಹೆಚ್ಚಾಗಿರುವ ಸ್ಥಳಗಳಲ್ಲಿ ನಿರ್ಮಾಣಗೊಂಡಿರುವ ಸಾರ್ವಜನಿಕರ ಶೌಚಾಲಯಗಳು ಬಳಕೆಯಾಗದೆ ವ್ಯರ್ಥವಾಗಿ ಬಿದ್ದಿವೆ.

ಸ್ವಚ್ಛ ಭಾರತ್, ಎಸ್‌ಎಫ್‌ಸಿ ಸೇರಿದಂತೆ ವಿವಿಧ ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ಬಿಸಿನೀರು ಸ್ನಾನದ ವ್ಯವಸ್ಥೆಯನ್ನೊಳಗೊಂಡ ಸಾರ್ವಜನಿಕ ಶೌಚಾಲಯಗಳು ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ನಿರುಪಯುಕ್ತವಾಗಿವೆ. ಪಾಳು ಬಿದ್ದಿರುವ ಒಂದೊಂದು ಶೌಚಾಲಯಕ್ಕೂ ಸುಮಾರು 40–50 ಲಕ್ಷ ರೂ. ಖರ್ಚು ಮಾಡಿದ್ದು, ಸಾರ್ವಜನಿಕರ ತೆರಿಗೆ ಹಣಕ್ಕೆ ಬೆಲೆಯೇ ಇಲ್ಲದಂತಾಗಿದೆ.

ವಾರ್ಡ್ ನಂ.49ರ ವ್ಯಾಪ್ತಿಯ ಆರ್‌ಟಿಓ ಕಚೇರಿ, ಲಕ್ಷ್ಮಿಪುರಂ ಪೊಲೀಸ್ ಠಾಣೆ ಸೇರಿದಂತೆ ಸುತ್ತಮುತ್ತಲಿನ ಖಾಸಗಿ ಕಚೇರಿಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ ಲಕ್ಷ್ಮಿಪುರಂ ಪೊಲೀಸ್ ಠಾಣೆಯ ಪಕ್ಕದಲ್ಲೇ ಸ್ವಚ್ಛ ಭಾರತ್ ಯೋಜನೆಯಡಿ ಸುಸಜ್ಜಿತ ಶೌಚಾಲಯ ನಿರ್ಮಿಸಿದ್ದರೂ ಬಳಕೆಯಾಗದೆ ವರ್ಷದಿಂದಲೂ ಪಾಳು ಬಿದ್ದಿದೆ. ಅದೇ ರೀತಿ ವಾರ್ಡ್ ನಂ.19ರ ವ್ಯಾಪ್ತಿಯ ಚಾಮರಾಜಪುರಂ ರೈಲ್ವೆ ಸ್ಟೇಷನ್, ಟೆನಿಸ್ ಮೈದಾನ, ಜಿಲ್ಲಾ ನ್ಯಾಯಾಲಯಕ್ಕೆ ಬರುವ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಎಸ್‌ಎಫ್‌ಸಿ ಯೋಜನೆಯಡಿ, ಅದರಲ್ಲೂ ರಸ್ತೆ ಬದಿಯಲ್ಲೇ ಸಾರ್ವಜನಿಕ ಸುಲಭ ಶೌಚಾಲಯ ನಿರ್ಮಿಸಿ, ಬಾಗಿಲು ಬಂದ್ ಮಾಡಲಾಗಿದೆ.

ಹಾಗೆಯೇ ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲೊಂದಾದ ಗೋಕುಲಂ ನಿವಾಸಿಗಳಿಗೆ, ಇಎಸ್‌ಐ ಆಸ್ಪತ್ರೆ, ಟ್ರಾಮಾ ಕೇರ್, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಬರುವ ಜನರ ಅನುಕೂಲತೆಗಾಗಿ ಕೆಆರ್‌ಎಸ್ ಮುಖ್ಯ ರಸ್ತೆಯಲ್ಲೇ ▶ 6ನೇ ಪುಟಕ್ಕೆ

ನಿರ್ಮಾಣಗೊಂಡು ಎರಡು ವರ್ಷವಾಯ್ತು...

"ವಿಜಯನಗರ ವಾಟರ್ ಟ್ಯಾಂಕ್, ವಿಜಯನಗರ ರೈಲ್ವೆ ಬಡಾವಣೆ ಭಾಗದ ಜನರಿಗೆ ಅನುಕೂಲವಾಗುವಂತೆ ಸ್ವಚ್ಛ ಭಾರತ್ ಯೋಜನೆಯಡಿ 48 ಲಕ್ಷ ರೂ. ವೆಚ್ಚದಲ್ಲಿ ವಿಜಯನಗರ ವಾಟರ್ ಟ್ಯಾಂಕ್ ಬಳಿ ಸಾರ್ವಜನಿಕ ಶೌಚಾಲಯ ನಿರ್ಮಿಸಿ 2 ವರ್ಷವಾಯ್ತು. ಟೌನ್‌ಹಾಲ್ ಬಳಿ ಶೌಚಾಲಯ ನಿರ್ಮಾಣಕ್ಕೆ ಮೀಸಲಾಗಿದ್ದ ಅನುದಾನವನ್ನು ಕೌನ್ಸಿಲ್ ಸಭೆಯಲ್ಲಿ ಹೋರಾಟ ಮಾಡಿ ತಂದು ಇಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಲಾಯಿತು. ಆದರೆ, ಇಂದಿಗೂ ಉದ್ಘಾಟನೆಯಾಗಿಲ್ಲ. **– ಕೆ.ವಿ.ಶ್ರೀಧರ್, ಮಾಜಿ ಸದಸ್ಯ, ಮೈಸೂರು ನಗರಪಾಲಿಕೆ**



ಈ ವಾರದಲ್ಲೇ ಉದ್ಘಾಟನೆ...

"ವಿಜಯನಗರ ವಾಟರ್ ಟ್ಯಾಂಕ್ ಬಳಿಯ ಸಾರ್ವಜನಿಕ ಶೌಚಾಲಯವನ್ನು ಈ ವಾರದಲ್ಲೇ ಉದ್ಘಾಟಿಸಲಾಗುವುದು. ಟೆಂಡರ್ ಕರೆದು ವರ್ಕ್ ಆರ್ಡರ್ ನೀಡಲಾಗಿದೆ. ಸಾರ್ವಜನಿಕ ಶೌಚಾಲಯ ನಿರ್ವಹಣೆಗೆ ಟೆಂಡರ್‌ದಾರರು ಮುಂದಾಗದಿರುವುದೇ ಸಮಸ್ಯೆಗೆ ಕಾರಣವಾಗಿದೆ.

–ಅಶ್ವಿನ್, ಕಾರ್ಯಪಾಲಕ ಇಂಜಿನಿಯರ್, ಒಳಚರಂಡಿ ವಿಭಾಗ(ಪಶ್ಚಿಮ)



ನಕ್ಕರೆ ಅದೇ ಸ್ವರ್ಗ

ರಾಮು : ಅದ್ಯಾಕೋ ಗುಂಡಾ ಆಪರೇಷನ್ ಥಿಯೇಟರ್‌ನಿಂದ ಓಡಿ ಬರ್ತಾ ಇದೀಯ?
ಗುಂಡ : 'ಹೆದರಬೇಡಿ, ಇದೊಂದು ಸಣ್ಣ ಆಪರೇಷನ್ ಅಷ್ಟೇ. ಏನೂ ಆಗೊಲ್ಲಾ ಅಂತ ನರ್ಸ್ ಹೇಳ್ತಾ ಇದ್ಲು.
ರಾಮು : ಅದರಲ್ಲಿ ಭಯ ಪಡೋಕೆ ಏನಿದೆ!
ಗುಂಡ : ಅವಳು ಹೇಳ್ತಾ ಇದ್ದಿದ್ದು ಡಾಕ್ಟರ್‌ಗೆ!

ಮೈಸೂರು ಮಿತ್ರ

ಭಾನುವಾರ, 15 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನಂಬಿ ಬದುಕುವುದು ಬೇರೆ... ನಂಬಿಸುತ್ತ ಬದುಕುವುದು ಬೇರೆ... ನಂಬಿ ಬದುಕುವವರಲ್ಲಿ ಪ್ರೀತಿ ಇರುತ್ತದೆ... ನಂಬಿಸುತ್ತ ಬದುಕುವವರಲ್ಲಿ ಸ್ವಾರ್ಥ ಇರುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರೀಲಿ ಕೊಡೆ ಹಿಡಿದರಂತೆ.

ನಿಮ್ಮ ಪತ್ರಗಳು

■ ಕೆಆರ್‌ಎಸ್‌ನಲ್ಲಿ ಭದ್ರತಾ ಲೋಪ ಆತಂಕಕಾರಿ ವಿಷಯ

ಮಾನ್ಯರೆ,

ಶನಿವಾರದಂದು ನಮ್ಮ ಮೆಚ್ಚಿನ 'ಮೈಸೂರು ಮಿತ್ರ'ನಲ್ಲಿ ಪ್ರಕಟವಾಗಿರುವ ಮಂಡ್ಯ ಜಿಲ್ಲೆಯ ಜೀವನಾಡಿ **'ಕೆಆರ್‌ಎಸ್ ಜಲಾಶಯದಲ್ಲಿ ಯಾರು ಎಲ್ಲಿ ಬೇಕಾದರೂ ಹೋಗಬಹುದು; ವಿಡಿಯೋ, ರೀಲ್ಸ್ ಮಾಡಬಹುದು!'** ವರದಿ ಅಕ್ಷರಶಃ, ನೂರಕ್ಕೆ ನೂರರಷ್ಟು ಸತ್ಯ.

ನಾನು ಪ್ರತಿ ಶನಿವಾರ, ನನ್ನ ಸ್ವಗ್ರಾಮವಾದ ಬೂಕನಕೆರೆಗೆ ಕೆಆರ್‌ಎಸ್‌ನ ಕೆಳ ಸೇತುವೆಯ ಮೇಲೆಯೇ ಹೋಗಿ ಬರುತ್ತೇನೆ. ಅಲ್ಲಿ ನಾನು ಗಮನಿಸಿದಂತೆ, ಒಮ್ಮೆಯೂ ಅಣೆಕಟ್ಟೆಯನ್ನು ಕಾಯುವ ಸಿಬ್ಬಂದಿಯ ಸುಳಿವನ್ನೇ ನಾಕಾಣೆ. ನಾರ್ತ್ ಬ್ಯಾಂಕ್ ಗೇಟ್ ಬಳಿ ಭದ್ರತಾ ಸಿಬ್ಬಂದಿಯೊಬ್ಬರು ಯಾವಾಗಲೂ ಮೊಬೈಲ್ ನೋಡುತ್ತಾ ಕುಳಿತಿರುತ್ತಾರೆ.

ಕೆಆರ್‌ಎಸ್ ಜಲಾಶಯದ ಭದ್ರತೆಗಾಗಿ ಹತ್ತಾರು ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುವುದಾಗಿ ಹೇಳುತ್ತದೆ. ಈ ಹಣ ಯಾರ ಜೇಬು ಸೇರುತ್ತಿದೆಯೋ ತಿಳಿದಿಲ್ಲ. ತಮಿಳುನಾಡಿನ ಮೆಟ್ಟೂರು ಜಲಾಶಯದ ಶೇ.ಒಂದರಷ್ಟು ಭದ್ರತೆಯೂ, ನಮ್ಮ ಕೆಆರ್‌ಎಸ್ ಜಲಾಶಯಕ್ಕೆ ಇಲ್ಲ. ಇದು ಮಂಡ್ಯ ಜಿಲ್ಲೆಯ ಜನರು ಆತಂಕಪಡುವ ಸಂಗತಿ. ಸುಮಾರು 25 ವರ್ಷಗಳ ಹಿಂದೆ, ಬಂಗಾರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ತಮಿಳುನಾಡಿನ ಜನರು ಕಾವೇರಿ ನದಿ ನೀರಿ ಗಾಗಿ ಕ್ಯಾತೆ ತೆಗೆದಾಗ, ಕೆಆರ್‌ಎಸ್ ಅನ್ನು ಸಂರಕ್ಷಣೆ ಮಾಡಿಕೊಳ್ಳುವ ಉದ್ದೇಶದಿಂದ ಅಂದಿನಿಂದಲೂ ಭಾರೀ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ಭದ್ರತಾ ಲೋಪವಾಗುತ್ತಿದ್ದು, ರಾಜಾರೋಷವಾಗಿ ಯಾರೂ ಬೇಕಾದರೂ ಇಲ್ಲಿ ಓಡಾಡಬಹುದು. ಅದರಲ್ಲೂ ಶನಿವಾರ, ಭಾನುವಾರ ಮತ್ತು ರಜಾ ದಿನಗಳಲ್ಲಿ ಕೆಲವರು ಕುಡಿದು ಬಾಟಲ್‌ಗಳನ್ನು ಅಲ್ಲಿಯೇ ಬಿಸಾಡುತ್ತಾರೆ. ಅಲ್ಲದೆ ಕೆಲವು ಯುವ ಪ್ರೇಮಿಗಳ ಸ್ವೇಚ್ಛಾಚಾರಕ್ಕೆ ಪ್ರಶಸ್ತ ತಾಣವೂ ಆಗಿದೆ. ಐತಿಹಾಸಿಕ ಜಲಾಶಯ ಹಾಗೂ ಪ್ರಸಿದ್ಧ ಪ್ರವಾಸಿ ತಾಣದ ಮಹತ್ವವನ್ನೇ ಅಧಿಕಾರಿಗಳು, ಜನಪ್ರತಿನಿಧಿಗಳು ಅರಿತಂತಿಲ್ಲ. ಭದ್ರತಾ ಲೋಪದಿಂದ ಏನಾದರೂ ಅವಘಡ ಸಂಭವಿಸಿದರೆ ಯಾರು ಹೊಣೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ 2015–18ರಲ್ಲೇ ಜಾತಿ ಗಣತಿ ವರದಿ ಪಡೆಯಲಿಲ್ಲವೇಕೆ?

ಮಾನ್ಯರೆ,

ಕಾಂತರಾಜ್ ವರದಿಯನ್ನು ಜಾರಿ ಮಾಡಿಯೇ ತೀರುತ್ತೇನೆ ಎಂದು ಹೇಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೊನೆಗೂ ಹೈಕಮಾಂಡ್ ಒತ್ತಡಕ್ಕೆ ಮಣಿದು ಎಚ್.ಕಾಂತರಾಜ್ ವರದಿಯನ್ನು ಅಮಾನ್ಯ ಮಾಡಿ ಮತ್ತೊಮ್ಮೆ ಜಾತಿವಾರು ಸಮೀಕ್ಷೆಗೆ ಮುಂದಾಗಿದ್ದಾರೆ. 10 ವರ್ಷಗಳ ಹಿಂದೆ ಮಾಡಿದ ಸಮೀಕ್ಷೆ 10 ವರ್ಷಗಳಲ್ಲಿ ಬದಲಾವಣೆ ಕಂಡಿದೆ ಎಂಬ ವಾದವನ್ನು ಒಪ್ಪದವರು ಈಗ ಅದನ್ನೇ ನೆಪಮಾಡಿ ಸಮೀಕ್ಷೆಗೆ ಮುಂದಾಗಿದ್ದಾರೆ!

ಜೆಡಿಎಸ್–ಕಾಂಗ್ರೆಸ್ ಸರ್ಕಾರ ಇದ್ದಾಗ ಸಮೀಕ್ಷೆ ವರದಿಯನ್ನು ಪಡೆಯದಂತೆ ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು ಆಗಿನ ಹಿಂದುಳಿದ ವರ್ಗಗಳ ಸಚಿವ ಪುಟ್ಟರಂಗಶೆಟ್ಟಿಯವರಿಗೆ ಬೆದರಿಕೆ ಹಾಕಿದ್ದರು ಎಂದು ಸಿದ್ದರಾಮಯ್ಯನವರು ಹೇಳಿರುವುದು ವರದಿಯಾಗಿದೆ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದುದು 2019ರಲ್ಲಿ. ಎಚ್.ಕಾಂತರಾಜ್ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ 11 ಏಪ್ರಿಲ್ 2015 ರಿಂದ 30.5.2015ರ ವರೆಗೆ ಸಮೀಕ್ಷೆ ನಡೆಸಿ ಪೂರ್ಣಗೊಳಿಸಿತ್ತು. ಸಿದ್ದರಾಮಯ್ಯನವರು 2013 ರಿಂದ 2018ರವರೆಗೂ ಮುಖ್ಯಮಂತ್ರಿಯಾಗಿದ್ದರು. 2015 ರ ಮೇನಲ್ಲೇ ಪೂರ್ಣವಾಗಿದ್ದ ಸಮೀಕ್ಷಾ ವರದಿಯನ್ನು ನಂತರದ 3 ವರ್ಷಗಳ ದೀರ್ಘ ಅವಧಿಯಲ್ಲಿ (ಗೋಣಿ ಚೀಲದಲ್ಲಿ ಭದ್ರವಾಗಿದ್ದ ವರದಿಯನ್ನು) ತಾವೇ ಏಕೆ ಪಡೆದುಕೊಳ್ಳಲಿಲ್ಲ? ಆಗ ಕುರ್ಚಿ ಭದ್ರವಿತ್ತು ಎಂಬ ಕಾರಣದಿಂದ! ಈಗ ಅಧಿಕಾರದಲ್ಲಿ ಭಿನ್ನಮತ ಭುಗಿಲೆದ್ದಾಗ, ಸಾಮಾಜಿಕ ಶೈಕ್ಷಣಿಕ, ಜಾತಿ ಗಣತಿ, ಅಹಿಂದಗಳು ನೆನಪಾಗುವುದು ವಿಪರ್ಯಾಸ. ರಾಜಕಾರಣಿಗಳು ತಮ್ಮ ಮೂಗಿನ ನೇರಕ್ಕೇ ಮಾತನಾಡುವುದನ್ನು ಬಿಟ್ಟು ವಾಸ್ತವ ಜನರಿಗೂ ಗೊತ್ತಿದೆ ಎನ್ನುವುದನ್ನು ಮನದಟ್ಟು ಮಾಡಿಕೊಳ್ಳಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಪ್ಲಾಸ್ಟಿಕ್ ಮುಕ್ತ ಮುಜರಾಯಿ ದೇವಾಲಯಗಳು

ಮಾನ್ಯರೆ,

ಮುಂಬರುವ ಆಗಸ್ಟ್ 15ರಿಂದ ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇವಾಲಯಗಳಲ್ಲಿ ನೀರಿನ ಬಾಟಲ್ ಸಹಿತ ಎಲ್ಲಾ ಬಗೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿರುವುದು ಸ್ವಾಗತಾರ್ಹ. ಅರ್ಚಕರಿಗೆ ನೇರ ವರ್ಗಾವಣೆ ಮೂಲಕ ತಸ್ತಿಕ್ ಹಣ ನೀಡಲು ಕ್ರಮ ಕೈಗೊಂಡಿದ್ದು ಈಗ 25 ಸಾವಿರ ಅರ್ಚಕರ ಪೈಕಿ 14 ಸಾವಿರ ಅರ್ಚಕರು ಮಾಹಿತಿ ನೀಡಿದ್ದು ಉಳಿದವರು ಮಾಹಿತಿ ನೀಡಿದ ತಕ್ಷಣ ಅವರಿಗೂ ಡಿಬಿಟಿ ಮೂಲಕ ತಸ್ತೀಕ್ ಹಣ ನೀಡಲಾಗುವುದು ಎಂದು ಮಾಹಿತಿ ನೀಡಿರುವುದು ಶ್ಲಾಘನೀಯ. ರಾಜ್ಯದಲ್ಲಿ ಪ್ರಸಿದ್ಧಿ ಗಳಿಸಿರುವ ದೇವಾಲಯಗಳನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿ ಭಕ್ತರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ದೇವಾಲಯ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುತ್ತಿರುವುದು ಸೂಕ್ತ ನಿರ್ಧಾರ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಬೀದಿನಾಯಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ. ನಗರದ ಸಾಯಿಬಾಬಾ ದೇವಸ್ಥಾನಕ್ಕೆ ತೆರಳುವ 17ನೇ ಮುಖ್ಯ



ರಸ್ತೆಯಲ್ಲಿ ಬೀದಿನಾಯಿಗಳ ಹಾವಳಿ ವಿಪರೀತವಾಗಿದೆ. ಇವುಗಳು ಗುಂಪಾಗಿ ಬೆಳಗಿನ ಸಮಯದಲ್ಲಿ ವಾಯು ವಿಹಾರಕ್ಕೆ ತೆರಳುವವರನ್ನು ಮತ್ತು ಹಾಲು ಕೊಳ್ಳಲು ತೆರಳುವವರ ಹಿಂದೆ ಬೊಗಳುತ್ತ ಓಡಿ ಬರುತ್ತವೆ. ಇದರಿಂದ ಸಾರ್ವಜನಿಕರು ಗಾಬರಿಯಾಗಿ ಓಡುವ ಭರದಲ್ಲಿ ಬೀಳುವ ಸಂಭವವಿರುತ್ತದೆ. ರಾತ್ರಿ ವೇಳೆಯ ಲ್ಲಿಯೂ ಸಹ ಕೆಲಸ ಮುಗಿಸಿಕೊಂಡು ತೆರಳುವವರಿಗೆ, ದ್ವಿಚಕ್ರ ವಾಹನ ಸವಾರರಿಗೆ, ಆಟೋ ಚಾಲಕರಿಗೆ ಮತ್ತು ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ.

ಆದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಈ ರಸ್ತೆಯಲ್ಲಿನ ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕಬೇಕೆಂದು ಈ ಮೂಲಕ ಮನವಿ.

– ಸರೋಜಮ್ಮ, ನಿವೃತ್ತ ಶಿಕ್ಷಕರು, ಜೆ.ಪಿ.ನಗರ, ಮೈಸೂರು.

ನಾದಲಹರಿ




ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಏಳು–ಬೀಳು ನಡುವೆ ಹೆಣ್ಣಿನ ಬಾಳು...!?

ಆ ಭಗವಂತ ಸೃಷ್ಟಿಸಿದ ಅದ್ಭುತಗಳಲ್ಲಿ ಒಂದು ಹೆಣ್ಣು ಎನ್ನುತ್ತಾರೆ. ಕೆಲವರ ಪಾಲಿಗೆ ಅದು ನಿಜ ಇರಬಹುದು. ಆದರೆ ಕೆಲವರ ಪಾಲಿಗೆ ಅದು ಶಾಪವೇ ಹೌದು. ಮಾನಸಿಕವಾಗಿ ದೃಢವಾದ ಹೆಣ್ಣು ಮತ್ತು ದೈಹಿಕವಾಗಿ ಬಲಾಢ್ಯನಾದ ಗಂಡನ್ನು ಸೃಜಿಸಿದ ಆ ದೇವ ಅದರ ಮುಂದಿನ ಆಗುಹೋಗುಗಳ ಬಗ್ಗೆ ನಿಜವಾಗಿಯೂ ಆಳವಾಗಿ ಯೋಚಿಸಿದ್ದನೋ ಇಲ್ಲವೋ ಹೇಳುವುದು ಕಷ್ಟ. ಇಲ್ಲವಾಗಿದ್ದಲ್ಲಿ ಗಂಡನ್ನು ಆಕರ್ಷಿಸುವಂತಹ ರೂಪವನ್ನು ಅವಳಿಗೇಕೆ ಕೊಡುತ್ತಿದ್ದ. ಆ ರೂಪವೇ ಅವಳಿಗೆ ಶಾಪವೂ ಆಗುವಂತೆ ಏಕೆ ಮಾಡುತ್ತಿದ್ದ.

ಅದೊಂದು ಚಿಕ್ಕ ಊರು. ಇತಿಹಾಸ ಪ್ರಸಿದ್ಧವಾದ ಒಂದು ಜಿಲ್ಲೆಯ ಒಂದು ತಾಲೂಕು. ಅದರ ಸಮೀಪದಲ್ಲಿಯ ಒಂದು ಹಳ್ಳಿಯಲ್ಲಿತ್ತು ಒಂದು ಕುಟುಂಬ. ಅಲ್ಲಿತ್ತು ಸಾಕಷ್ಟು ಹೊಲ ಗದ್ದೆ ಇದ್ದ ಒಂದು ಮನೆತನ. ಹಲವು ಹೆಣ್ಣುಮಕ್ಕಳ ನಂತರ ಹುಟ್ಟಿದ ಒಬ್ಬನೇ ಮಗ ಎಲ್ಲರ ಕಣ್ಮಣಿ. ಹಿರಿಯರು ಮೊದಲ ಮಗಳನ್ನು ತಾಲೂಕಿನ ಒಬ್ಬ ವಕೀಲನಿಗೆ ಲಗ್ನ ಮಾಡಿಕೊಟ್ಟಾಗ, ಅಕ್ಕನೊಡನೆ ಈತನೂ ಅವಳ ಮನೆಗೆ ಹೋದ. ಓದಿನಲ್ಲಿ ಜಾಣ ಎಂದೆನಿಸಿಕೊಂಡಿದ್ದವ ಮುಂದೆ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಪುಣೆಗೂ ಪಯಣಿಸಿದ. ಅಲ್ಲಿಂದ ಹಿಂದಿರುಗಿದವ ಮತ್ತೆ ಅಕ್ಕನ ಮನೆಯಲ್ಲಿಯೇ ಠಿಕಾಣಿ ಊರಿದ. ಅಲ್ಲೇ ಒಂದು ಶಾಲೆಯಲ್ಲಿ ಮಾಸ್ತರಿಕೆಯನ್ನೂ ಮಾಡತೊಡಗಿದ. ಪ್ರತೀ ವರುಷ–ಎರಡು ವರುಷಕ್ಕೆ ಒಂದರಂತೆ ಅಕ್ಕನಿಗೆ ಮಕ್ಕಳು ಆಗತೊಡಗಿದುವು. ತನ್ನ ತವರಿನ ಕುಲದೀಪಕನಾಗಿದ್ದ ಈ ತಮ್ಮ ಎಂದರೆ ಅಕ್ಕನಿಗೆ ಬಹಳ ಪ್ರೀತಿ. ಅಕ್ಕನ ಮಕ್ಕಳ ಜೊತೆಗೆ ಆಟ–ಪಾಠ ಆಡುತ್ತಾ ಅವನಿಗೂ ಹೊತ್ತು ಹೋಗುತ್ತಿತ್ತು. ಜೊತೆಗೆ ತಮ್ಮ ಹಳ್ಳಿಯ ಹೊಲ ಗದ್ದೆಗಳ ಉಸ್ತುವಾರಿಕೆಗೆಂದು ಆಗಾಗ ಹಳ್ಳಿಗೂ ಹೋಗಿ ಬರುತ್ತಿದ್ದ. ಎಲ್ಲ ಅಕ್ಕ ತಂಗಿಯರೂ ಸೇರಿ ತಮ್ಮ ಪಾಲಿನ ಆಸ್ತಿಯೂ ತಮ್ಮನಾದ ಅವನಿಗೇ ಬರಲಿ ಎಂದು ಸಹಿ ಮಾಡಿ ಕೊಟ್ಟುಬಿಟ್ಟಿದ್ದರು. ಹೀಗಾಗಿ ಶ್ರೀಮಂತಿಕೆಯ ಗತ್ತೂ ಅವನಲ್ಲಿ ಮನೆ ಮಾಡಿತ್ತು. ತಂದೆ–ತಾಯಿ ತೀರಿಕೊಂಡು ಬಹಳ ದಿನಗಳೇ ಆಗಿತ್ತು.

ಅಕ್ಕನ ಮೊದಲ ಮಗಳು ನಿಜವಾದ ಅರ್ಥದಲ್ಲಿ ಅವಳು ತನ್ನ ತಂಗಿ ತಮ್ಮಂದಿರಿಗೆ ಹಿರಿಯಕ್ಕನೇ ಆಗಿದ್ದಳು. ಅವರೆಲ್ಲರನ್ನೂ ಸರಿಯಾದ ಮಾರ್ಗದಲ್ಲಿ ನಡೆಸುವಲ್ಲಿ ಅವಳ ಪಾತ್ರ ಹಿರಿದು. ಅದೇ ತಾನೆ ಯೌವನಕ್ಕೆ ಕಾಲಿಡುತ್ತಿದ್ದ ಅವಳು ಅವನ ಕಣ್ಣು ಕುಕ್ಕಲಾರಂಭಿಸಿದ್ದಳು. ಅವಳು ಎಂದಿದ್ದರೂ ತನ್ನವಳೇ ಎಂದು ಅವನ ಒಳ ಮನಸ್ಸು ಹೇಳುತ್ತಿತ್ತು. ನೋಡಲು ಬಹಳ ಸುಂದರಿಯಾಗಿದ್ದ ಅವಳು ಕರಿ ಮುಸುಡಿಯ ತನ್ನನ್ನು ಒಪ್ಪದಿದ್ದರೆ ಎಂದು ಅವನ ಒಳ ಮನಸ್ಸು ಒಂದು ಸಣ್ಣ ಸಂಶಯದ ಎಳೆಯನ್ನು ಆಗಾಗ್ಗೆ ಹೊರಹಾಕುತ್ತಲೇ ಇತ್ತು. ಅದು ಬಲಿತು ಹೊರಗೆ ಬಾರದಂತೆ ಅದುಮಿ ಸುಮ್ಮನಾಗಿಸುತ್ತಿದ್ದ. ತನ್ನ ವಕೀಲಿಕೆಯಲ್ಲಿ ಸದಾ ಮುಳುಗಿರುತ್ತಿದ್ದ ಭಾವನಿಗೆ ಈತನ ಬಗ್ಗೆ ಒಳ್ಳೆಯ ಭಾವನೆಯೇ ಇದ್ದಿತು. ಮಕ್ಕಳ ಲಾಲನೆ–ಪಾಲನೆಯ ಜೊತೆಗೆ ಮನೆಯ ಸಮಸ್ತ



> ❝ ಮಾನಸಿಕವಾಗಿ ದೃಢವಾದ ಹೆಣ್ಣು ಮತ್ತು ದೈಹಿಕವಾಗಿ ಬಲಾಢ್ಯನಾದ ಗಂಡನ್ನು ಸೃಜಿಸಿದ ಆ ದೇವ ಅದರ ಮುಂದಿನ ಆಗುಹೋಗುಗಳ ಬಗ್ಗೆ ನಿಜವಾಗಿಯೂ ಆಳವಾಗಿ ಯೋಚಿಸಿದ್ದನೋ ಇಲ್ಲವೋ ಹೇಳುವುದು ಕಷ್ಟ.

ಜವಾಬ್ದಾರಿಯನ್ನು ಹೆಂಡತಿಯ ಮೇಲೆ ಹೊರೆಸಿದ್ದ ಆತ, ಗಳಿಸುವುದೊಂದೇ ತನ್ನ ಕರ್ತವ್ಯ ಎಂದು ಭಾವಿಸಿದಂತಿತ್ತು. ಆತನ ತಂದೆ, ತಾಯಿ ಮತ್ತು ತಂಗಿಯರ ಹೊಣೆಯೂ ಆತನ ಮೇಲಿದ್ದುದರಿಂದ ಗಳಿಕೆಯ ಕಡೆಗೆ ಗಮನಹರಿಸುವುದು ಅನಿವಾರ್ಯವೂ ಆಗಿತ್ತು. ತುಂಬಿದ ಮನೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುವ ಜಾಣ್ಮೆ ಅಕ್ಕನಲ್ಲಿ ಸಹಜವಾಗಿಯೇ ಇದ್ದಿತು. ಅಂದು ಆತ ಅನಿರೀಕ್ಷಿತವಾಗಿ ಶಾಲೆಯಿಂದ ಮಧ್ಯಾಹ್ನವೇ ಮನೆಗೆ ಬಂದಾಗ ಮನೆಯು ನಿಶ್ಶಬ್ದವಾಗಿದ್ದಿದು ಕಂಡು ಹುಬ್ಬೇರಿಸುವಂತಾಗಿತ್ತು. ಮಕ್ಕಳು ಶಾಲೆಯಲ್ಲಿರುತ್ತಾರೆ. ಅಕ್ಕ ಎಲ್ಲಿ ಎಂದು ಹಣಿಕಿ ಹಾಕಿದಾಗ ಕೋಣೆಯಲ್ಲಿ ಒಬ್ಬಳೇ ಮಲಗಿದ್ದ ಹಿರಿ ಮಗಳು ಕಂಡಳು. ಅಮ್ಮ ಗೆಳತಿಯ ಮನೆಗೆ ಹೋಗಿದ್ದಾಳೆ ಎಂದು ಅವಳು ಹೇಳಿದಾಗ, ಅವನೊಳಗೆ ಅಡಗಿದ್ದ ಧೂರ್ತ ಥಟ್ಟನೆ ಎದ್ದು ನಿಂತಿದ್ದ. ಮುಂದೆ ನಡೆದದ್ದು ನಡೆಯಬಾರದ್ದು. ಅವಳ ಕಣ್ಣೀರು ಅವನನ್ನು ಕರಗಿಸಲೇ ಇಲ್ಲ. ಅವಳನ್ನು ತನ್ನವಳಾಗಿಸಿಕೊಳ್ಳುವ ಆತುರದಲ್ಲಿ ತಪ್ಪು ಮಾಡಿದ್ದ. ಅವಳ ಆಕ್ರಂದನವನ್ನು ಕಿವಿಗೆ ಹಾಕಿಕೊಳ್ಳದೇ ಹದ್ದಿನಂತೆ ಅವಳ ಮೇಲೆ ಎರಗಿದ್ದ.

ಮಗಳನ್ನು ತನ್ನ ತಮ್ಮನಿಗೇ ಕೊಡುವುದೆಂದು ಮನದಲ್ಲಿ ನಿಶ್ಚಯಿಸಿದ್ದ ತಾಯಿಗೆ ಮಗಳು ಬೇಡಿಕೊಂಡಿದ್ದಳು. ಆಯೀ, ಅವನಿಗೆ ಮಾತ್ರ ನನ್ನನ್ನು ಕೊಡಬೇಡಿ ಎಂದು. ತನ್ನ ತವರುಬಳ್ಳಿ ಚೆನ್ನಾಗಿ ಹಬ್ಬಲಿ ಎಂಬ ಆಸೆಯಿದ್ದ ತಾಯಿಯ ಕಣ್ಣಿಗೆ ಮಗಳ ಮಾತುಗಳು ವಯೋಸಹಜವಾದ ನಾಚಿಕೆಯಿಂದ ಬಂದವು ಎಂಬಂತೇ ತೋರಿತು.

ಒಂದೆರಡು ತಿಂಗಳಾದ ನಂತರ ಒಮ್ಮೆ ಮುಂಜಾನೆ ಎದ್ದೊಡನೆಯೇ ವಾಕರಿಸುತ್ತಿದ್ದ ಮಗಳನ್ನು ಕಂಡು ತಾಯಿಯ ಎದೆಯಲ್ಲಿ ಎಂಥದೋ ಅನುಮಾನ ಮೂಡತೊಡಗಿತು. ಮಗಳನ್ನು ಅನುನಯದಿಂದ ಕೇಳಿದಾಗ, ವಿಷಯ ತಿಳಿದ ಅವಳ ಎದೆ ಝಲ್ಲೆಂದಿತು. ಮಗಳು ಅವನನ್ನು ಲಗ್ನವಾಗಲು ಏಕೆ ಒಲ್ಲೆ ಎನ್ನುತ್ತಿದ್ದಳೆಂಬುದು ಸ್ಪಷ್ಟವಾಗಿ ಅರ್ಥವಾಗಿತ್ತು. ಮನೆಯ ಮರ್ಯಾದೆಯ ಪ್ರಶ್ನೆ. ನಿರ್ವಾಹವಿಲ್ಲ. ತರಾತುರಿಯಲ್ಲಿ ಮಗಳ ಲಗ್ನದ ಶಾಸ್ತ್ರವು ಮುಗಿದೇ ಹೋಗಿತ್ತು. ಸಮೀಪದ ಮತ್ತೊಂದು ಸಣ್ಣ ಊರಿನ ಶಾಲೆಯಲ್ಲಿ ನೌಕರಿ ಸಿಕ್ಕ ಆತ ಹೆಂಡತಿಯೊಡನೆ ಹೊರಟುಬಿಟ್ಟ.

ತಾನು ಮಾಡಿದುದು ತಪ್ಪು ಎಂಬುದು ಅವನ ಒಳ ಮನಸಿಗೆ ಅರ್ಥವಾಗಿದ್ದರೂ ಅದನ್ನು ಒಪ್ಪಲು ಅವನ ಬಾಹ್ಯ ಅಹಂ ಸಿದ್ಧವಿರಲಿಲ್ಲ. ತನ್ನ ಪುರುಷ ಪ್ರಾಬಲ್ಯವನ್ನು ಖಚಿತ ಮಾಡಲೋಸುಗವೋ ಎಂಬಂತೆ ಆಕೆಯ ಮೇಲೆ ಅವನ ಆಕ್ರಮಣ ನಿರಂತರವಾಗಿ ನಡೆದೇ ಇತ್ತು. ಬಲವಂತದ ದಾಂಪತ್ಯದಲ್ಲಿ ಹೀಗೇ ಅಲ್ಲವೇ? ಅವನು ಕುಳಿತುಕೋ ಎಂದರೆ ಆಕೆ ಕುಳಿತುಕೊಳ್ಳಬೇಕು. ನಿಲ್ಲು ಎಂದರೆ ನಿಲ್ಲಬೇಕು. ಈ ರೀತಿಯ ದಬ್ಬಾಳಿಕೆಯ ಹಿಂದೆ ಇದ್ದುದು ಆತನ ಮನಸಿನ ಕೀಳರಿಮೆ ಅಷ್ಟೆ. ತನ್ನ ಮನದೊಳಗಣ ತಪ್ಪಿತಸ್ಥ ಭಾವನೆಯನ್ನು ಹತ್ತಿಕ್ಕಲು ಈ ರೀತಿಯ ನಡವಳಿಕೆ ಯನ್ನು ಆತ ಅಸ್ತ್ರ ಮಾಡಿಕೊಂಡಿದ್ದ. ಅದರಿಂದ ಒಂದು ವಿಲಕ್ಷಣ ತೃಪ್ತಿಯನ್ನು ಅವನು ಒಳಗೊಳಗೇ ಅನುಭವಿಸುತ್ತಿದ್ದ. ಹೊರಗಿನ ಸಮಾಜದಲ್ಲಿ ಆತ ಬಹಳ ಒಳ್ಳೆಯ ಹೆಸರನ್ನು ಗಳಿಸಿದ್ದ. ಶಾಲೆಯಲ್ಲಿ ಒಳ್ಳೆಯ ಶಿಕ್ಷಕ ಎಂಬ ಹೆಸರಿತ್ತು. ಸಂಗೀತ, ನೃತ್ಯ, ನಾಟಕ ಎಲ್ಲದರಲ್ಲೂ ಆತನಿಗೆ ಆಸಕ್ತಿ ಇತ್ತು. ಶಾಲೆಯ ಕಾರ್ಯಕ್ರಮಗಳಿಗೆ ಮಕ್ಕಳನ್ನು ತಯಾರು ಮಾಡುವುದರಲ್ಲಿ ಆತ ಸಿದ್ಧಹಸ್ತ. ವ್ಯಾಪಕವಾದ ಓದಿನ ಸಹಕಾರವೂ ಜೊತೆಗೆ ಇತ್ತು. ಹೀಗಾಗಿ ಜನಪ್ರಿಯ ಭಾಷಣಕಾರನೂ ಆಗಿದ್ದ. ಎಲ್ಲವೂ ಸರಿ. ಆದರೆ ಹೆಂಡತಿಯೊಂದಿಗಿನ ಕ್ರೂರ ನಡವಳಿಕೆಯನ್ನು ಹತ್ತಿಕ್ಕಲಾರದಾದ. ಹೆಂಡತಿಗೆ ತನ್ನ ತಂದೆ, ತಮ್ಮ, ತಂಗಿಯರೆಂದರೆ ಪ್ರಾಣ ಎಂಬುದನ್ನು ಅರಿತಿದ್ದ ಅವನು, ಅವಳ ಮನಸ್ಸಿನಲ್ಲಿ ಅವರೆಲ್ಲರ ಬಗ್ಗೆ ಕೋಪ ಹುಟ್ಟುವಂತೆ ಮಾಡಿ, ಅವರಿಂದ ದೂರ ಇರುವಂತೆ ಮಾಡಬೇಕೆಂದು ಹವಣಿಸಿದ. ಹೀಗಾಗಿ ಅವಳ ತವರಿನವರ ಪ್ರತೀ ನಡವಳಿಕೆಯಲ್ಲೂ ತಪ್ಪನ್ನು ಹೆಕ್ಕಿ ಹೆಕ್ಕಿ ತೆಗೆದು, ಹೌದು. ಅದು ತಪ್ಪು. ಎಂದು ಅವಳ ಬಾಯಿಂದ ಬರಿಸುವವರೆಗೆ ಬಿಡುತ್ತಿರಲಿಲ್ಲ. ತಂದೆ, ತಾಯಿಗಳಿಗೆ ತನ್ನ ನೋವು ತಿಳಿಯದಿರುವಂತೆ ಮಾಡುವ ಯತ್ನದಲ್ಲಿ ಇದೆಲ್ಲವನ್ನೂ ಸಹಿಸುವ ಶಕ್ತಿಯನ್ನು ಆಕೆ ಪಡೆದುಕೊಂಡಳು.

ಹೀಗೇ ಅವರ ಅರ್ಥಹೀನ ಬದುಕು ಕೊನೆಗಂಡಿತು. ಒಂದರ್ಥದಲ್ಲಿ ಅವಳ ಸೌಂದರ್ಯವೇ ಅವಳ ಶತ್ರು ಆಯಿತು ಎಂದು ಅನಿಸುವುದಿಲ್ಲವೇ?.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ವಿರೋಧದ ಹಿನ್ನೆಲೆಯಲ್ಲಿ ಮರು ಜಾತಿಗಣತಿ

ಕಾಯಕ ಸಮಾಜಗಳ ಒಕ್ಕೂಟದ ಅಭಿಪ್ರಾಯ

ಮೈಸೂರು, ಜೂ.14(ಜಿಎ)–ಜಾತಿ ಗಣತಿ ಜಾರಿಗೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷದಲ್ಲಿರುವ ಮೇಲ್ಜಾತಿಯವರು ಪಕ್ಷಾತೀತವಾಗಿ ವಿರೋಧಿಸಿದ ಪರಿಣಾಮ ಮರು ಜಾತಿಗಣತಿಗೆ ಮಾಡಲಾಗುತ್ತಿದೆ ಎಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ನಡೆದಿರುವ ಜಾತಿ ಗಣತಿಯ ವಿವರಗಳು ಹಳೆಯದಾಗಿರಬಹುದು, ಮುಂದಿನ ಗಣತಿ ವೇಳೆ ಹೆಚ್ಚು ವಿಶ್ವಾಸಾರ್ಹವಾದ ಜಾತಿವಾರು ಜನಸಂಖ್ಯೆ ಲಭಿಸಬಹುದು. ಆದರೆ ಈ ಕಾರಣಕ್ಕಾಗಿಯೇ ಈಗ ನಡೆದಿರುವ ಜಾತಿ ಗಣತಿಯ ವಿವರಗಳನ್ನು ಕಡೆಗಣಿಸಬೇಕೆಂಬ ಬೇಡಿಕೆ ರಾಜಕೀಯವಾಗಿ ಸೂಕ್ತವೆನಿಸುವುದಿಲ್ಲ ಎಂದರು.

ರಾಜ್ಯ ಹಿಂದುಳಿದ ಆಯೋಗದ ಕಾಯ್ದೆಯಂತೆ ರಾಜ್ಯ ಸರ್ಕಾರಕ್ಕೆ ಜಾತಿಗಣತಿ ನಡೆಸುವ ಅಧಿಕಾರವಿದೆ. ಹಿಂದುಳಿದ ವರ್ಗಗಳ ಪಟ್ಟಿಗೆ ಯಾರನ್ನು ಸೇರಿಸಬೇಕು, ಯಾರನ್ನು ಕೈಬಿಡಬೇಕೆಂಬುದನ್ನು ಈ ಸಮೀಕ್ಷೇ ಆಧಾರದಲ್ಲೇ ಮಾಡಬೇಕು. ಲಿಂಗಾಯಿತರು ತಮ್ಮ ಜನಸಂಖ್ಯೆ ಒಟ್ಟು ಜನಸಂಖ್ಯೆಯ ಶೇ.16ಕ್ಕಿಂತ ಹೆಚ್ಚು ಇರುತ್ತದೆ ಎಂದು ನಿರೀಕ್ಷಿಸಿದ್ದರು. ಒಕ್ಕಲಿಗರು ಸಹಾ ಶೇ.12.1ಕ್ಕಿಂತ ಹೆಚ್ಚು ಎಂದು ತಿಳಿದಿದ್ದರು. ಆದರೆ ಲಿಂಗಾಯತರು ಶೇ.11, ಒಕ್ಕಲಿಗರು ಶೇ. 10 ರಷ್ಟು ಮಾತ್ರ ಇದ್ದಾರೆಂದು ಈಗ ನಿಖರವಾಗಿ ತಿಳಿಸಲಾಗಿದೆ. ಹೀಗಾಗಿ ಈ ಎರಡೂ ಮೇಲ್ಜಾತಿಗಳು ಈ ಅಂಕಿ ಅಂಶಗಳನ್ನು ಒಪ್ಪುತ್ತಿಲ್ಲ. ಇನ್ನೊಂದು ಪ್ರಬಲ ಜಾತಿಯವರಾದ ಬ್ರಾಹ್ಮಣರು ಕೂಡ ಇಂತಹುದೇ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಹಿಂದುಳಿದ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಹೇಳುವ ಪ್ರಕಾರ ಗಣತಿಯಲ್ಲಿ ಲೋಪವಾಗಿಲ್ಲ. ಆದರೂ ಇವರುಗಳ ವಿರೋಧದ ನಡುವೆ ಜಾರಿಗೆ ತರುವ ಇಚ್ಛಾಸಕ್ತಿ ಸರ್ಕಾರ ಪ್ರದರ್ಶಿಸಬೇಕೆಂದು ಆಗ್ರಹಿಸಿದರು. ಮರು ಜಾತಿ ಸಮೀಕ್ಷೆಗೆ 90 ದಿನಗಳ ಗಡುವು ನೀಡಿರುವುದು ಸ್ವಾಗತಾರ್ಹ. ಈ ನಿಟ್ಟಿನಲ್ಲಿ ಕಾಯಕ ಸಮಾಜಗಳು ಸಿಎಂ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಲ್ಲುತ್ತವೆ. ಇದೇ ವೇಳೆ ಎಷ್ಟೋ ಹಳ್ಳಿಗಳಲ್ಲಿ ಹಿಂದುಳಿದ ವರ್ಗಗಳು ದಲಿತ ಸಮುದಾಯವನ್ನು ತಮ್ಮ ಪ್ರತಿಸ್ಪರ್ಧಿಗಳೆಂದು ಕಾಣುತ್ತಿವೆ. ಇದು ತಪ್ಪಬೇಕು ಎಂದು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ನಂಜಪ್ಪ, ಕೆಂಪಶೆಟ್ಟಿ, ಕೆ.ಜೆ.ಶಿವರಾಜ್, ರಮೇಶ್ ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ್‌ಗೆ ಖಾದ್ರಿ ಶಾಮಣ್ಣ ಪ್ರಶಸ್ತಿ ಪ್ರದಾನ

ಬೆಂಗಳೂರು, ಜೂ.14(ಕೆಎಂಶಿ)–



ಪ್ರಜಾಪ್ರಭುತ್ವದಲ್ಲಿ ಜಾಗೃತವಾಗಿರುವುದು ಎಷ್ಟು ಮುಖ್ಯವೋ ಜನ ಸಮುದಾಯದ ಪರ ಕೆಲಸ ಮಾಡುವುದು ಅಷ್ಟೇ ಮುಖ್ಯ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಅವರಿಗೆ ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಪತ್ರಿಕೋದ್ಯಮ ಜನ ಸಮುದಾಯದ ಪರ ಕೆಲಸ ಮಾಡುತ್ತದೆ ಎಂಬ ವಿಶ್ವಾಸವಿದೆ ಎಂದರು.

ಪತ್ರಕರ್ತರು ಮತ್ತು ರಾಜಕಾರಣಿಗಳ ನಡುವೆ ಅವಿನಾಭಾವ ಸಂಬಂಧ ಇರುತ್ತದೆ. ರಾಜಕೀಯ ಸುದ್ದಿ ಇಲ್ಲದೆ ಪತ್ರಿಕೆಗೆ ಆಕರ್ಷಣೆ ಇರುವುದಿಲ್ಲ, ಅದೇ ರೀತಿ ಸುದ್ದಿ ಪತ್ರಿಕೆಯಲ್ಲಿ ಬರದಿದ್ದರೇ ರಾಜಕಾರಣಿಗಳಿಗೂ ಅಸ್ತಿತ್ವವೇ ಇರುವುದಿಲ್ಲ. ರಾಜಕಾರಣಿಗಳನ್ನು ಹುರಿದುಂಬಿಸುವ ಕೆಲಸವನ್ನು ಪತ್ರಕರ್ತರು ಮಾಡುತ್ತಾರೆ. ಒಳ್ಳೆಯ ಕೆಲಸ ಮಾಡಿದರೆ ಗುರುತಿಸುತ್ತಾರೆ ಎಂದರು.

ಅರ್ಜಿ ಆಹ್ವಾನ

ಮೈಸೂರು, ಜೂ. 14– ಬೆಂಗಳೂರಿನ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯು ಗೋಪಾಲ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನದಲ್ಲಿ ತಾತ್ಕಾಲಿಕವಾಗಿ ಸಂಶೋಧನಾ ಸಹಾಯಕರಾಗಿ ಕಾರ್ಯನಿರ್ವಹಿಸಲು ಮೈಸೂರು ವಿವಿ ಮಹಾರಾಜ ಕಾಲೇಜಿನ ಸಮಾಜ ಶಾಸ್ತ್ರ ವಿಭಾಗವು ಅರ್ಜಿಗಳನ್ನು ಆಹ್ವಾನಿಸಿದೆ. ಸಂಶೋಧಕ ಸಹಾಯಕರ ಹುದ್ದೆಗೆ (2) ಸಮಾಜಶಾಸ್ತ್ರ, ಮಾನವಶಾಸ್ತ್ರ ವಿಷಯದಲ್ಲಿ ಎಂ.ಎ., ಎಂ.ಫಿಲ್, ಪಿಎಚ್.ಡಿ, 1 ವರ್ಷದ ಕ್ಷೇತ್ರ ಕಾರ್ಯ ಅನುಭವವಿರಬೇಕು. ಟೈಪಿಸ್ಟ್ ಹುದ್ದೆಗೆ ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಡಿಸಿಎ ಮತ್ತು 1 ವರ್ಷದ ಅನುಭವ ಕಡ್ಡಾಯ. ಮಾಹಿತಿಗೆ ಮೊ. 9986713964.

ಜೆಕೆ ಟೈರ್ಸ್ ಆಡಳಿತ ವರ್ಗದಿಂದ ಬದಲಿ ಕಾರ್ಮಿಕರಿಗೆ ದೈಹಿಕ, ಮಾನಸಿಕ ಕಿರುಕುಳ

ಜೆ.ಕೆ.ಟೈರ್ಸ್‌ನ ಬದಲಿ, ದಿನಗೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಆರೋಪ


ಮೈಸೂರು, ಜೂ.14(ಜಿಎ)–ಮೈಸೂರಿನ ಜೆ.ಕೆ.ಟೈರ್ಸ್ ಆಡಳಿತ ವರ್ಗ ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿದ್ದು, ಕಾರ್ಮಿಕ ನ್ಯಾಯಾಲಯದ ತೀರ್ಪನ್ನು ಕಡೆಗಣಿಸಿ ಬದಲಿ ಕಾರ್ಮಿಕರಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದೆ ಎಂದು ಜೆ.ಕೆ.ಟೈರ್ಸ್‌ನ ಬದಲಿ ಮತ್ತು ದಿನಗೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಇಂದಿರೇಶ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಖಾನೆಯ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಸುಮಾರು ಐದು ವರ್ಷ ಹೋರಾಟ ಮಾಡಿ ನ್ಯಾಯಾಲಯದ ಆದೇಶದಂತೆ ಮತ್ತೆ ನಿಯುಕ್ತಿಗೊಂಡ ಬದಲಿ ಕೆಲಸಗಾರರನ್ನು ಶೋಷಿಸಲಾಗುತ್ತಿದೆ. ಕಾರ್ಮಿಕ ಸಂಘಟನೆ ರಚಿಸಿದ ಒಂದೇ ಕಾರಣಕ್ಕೆ ಸಮಾಲೋಚನೆ ಹೆಸರಿನಲ್ಲಿ ಕೆಲಸದಿಂದ ತೆಗೆಯಲಾಗಿತ್ತು. ಕಾರ್ಮಿಕ ನ್ಯಾಯಾಲಯ ಇದು ಕಾನೂನು ಬಾಹಿರ ಎಂದು ತಿಳಿಸಿದ ನಂತರ ಮತ್ತೆ ಕೆಲಸಕ್ಕೆ ನಿಯುಕ್ತಿಗೊಳಿಸಲಾಗಿತ್ತು. ಆದರೆ ಈ ಬದಲಿ ಕಾರ್ಮಿಕರಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಲಾಗುತ್ತಿದೆ ಎಂದು ದೂರಿದರು.

ಇವರಿಗೆ ದೈಹಿಕ ಸಾಮರ್ಥ್ಯ ಮೀರಿದ ಕೆಲಸ ನೀಡಲಾಗುತ್ತಿದೆ. 50 ವರ್ಷ ಮೇಲ್ಪಟ್ಟವರಿಗೂ ಸುಮಾರು 50ರಿಂದ 60 ಕೆಜಿ ತೂಕದ ಟೈರ್‌ಗಳನ್ನು 4 ಅಡಿಗೂ ಹೆಚ್ಚು ಎತ್ತರದವರೆಗೆ ಎತ್ತುವಂತಹ ಕೆಲಸ ನೀಡಲಾಗುತ್ತಿದೆ. ಇವರು ತಾವಾಗಿಯೇ ಕೆಲಸ ಬಿಟ್ಟು ಹೋಗಲೆಂಬ ಹುನ್ನಾರ ಇದಾಗಿದೆ. ಹೀಗಾಗಿ ಈ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಕಾರ್ಮಿಕ ಇಲಾಖೆ, ಕಾರ್ಮಿಕ ನ್ಯಾಯಾಲಯದ ಮತ್ತು ಮಾನವ ಹಕ್ಕು ಆಯೋಗ ಮಧ್ಯ ಪ್ರವೇಶಿಸಿ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ನೇಮಕ

ಮೈಸೂರು, ಜೂ.14–ಮೈಸೂರು



ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರನ್ನಾಗಿ ಶಕ್ತಿ ನಗರದ ಶಿವಶಂಕರ ಮೂರ್ತಿ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ನಗರದಲ್ಲಿದೆ ಪಾರ್ಥೇನಿಯಂ ಪಾರ್ಕ್!



ಮೈಸೂರಿನ ಕುವೆಂಪುನಗರದ 'ವಾರ್ಡ್ ನಂ.47 ಉದ್ಯಾನವನ'ದಲ್ಲಿ ಯಥೇಚ್ಛವಾಗಿ ಬೆಳೆದಿರುವ ಪಾರ್ಥೇನಿಯಂ ಕಾಡು!

ಮೈಸೂರು,ಜೂ.14(ಪಿಎಂ)–ನಗರದಲ್ಲೊಂದು ಪಾರ್ಥೇನಿಯಂ ಪಾರ್ಕ್ ತಲೆ ಎತ್ತಿದೆ! ಹೌದು, ಈ ಪಾರ್ಕ್ ಹೆಸರಿಗಷ್ಟೇ ಉದ್ಯಾನವನ. ಇಲ್ಲಿ ಯಥೇಚ್ಛವಾಗಿ ಬೆಳೆದು ನಿಂತಿದೆ ಅಲರ್ಜಿಕಾರಕ ಪಾರ್ಥೇನಿಯಂ ಕಳೆ ಸಸ್ಯ. ಇಲ್ಲಿ ಹುಡುಕಿದರೂ ಒಂದು ಅಲಂ ಕಾರಿಕ ಸಸ್ಯ ಕಾಣ ಸಿಗದು, ಬದಲಿಗೆ ಪ್ಲಾಸ್ಟಿಕ್ ಬಾಟಲಿ ಸೇರಿದಂತೆ ತರಾವರಿ ತ್ಯಾಜ್ಯ ಕಣ್ಣಿಗೆ ರಾಚುತ್ತವೆ.

ಮೈಸೂರಿನ ಕುವೆಂಪುನಗರದ 'ವಾರ್ಡ್ ನಂ.47 ಉದ್ಯಾನವನ'ದ ದುಸ್ಥಿತಿ ಇದು. ಮಾರುತಿ ಟೆಂಪಲ್ ರಸ್ತೆಯಲ್ಲಿರುವ ಈ ಪಾರ್ಕ್‌ನಲ್ಲಿ ಮನುಷ್ಯರು ಮತ್ತು ಪ್ರಾಣಿಗಳಿಗೆ ಚರ್ಮದ ಅಲರ್ಜಿ ಉಂಟು ಮಾಡುವ ಪಾರ್ಥೇನಿಯಂ ಕಳೆಸಸ್ಯ ಎಲ್ಲೆಂದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆದಿದೆ. ಒಂದು ಅಲಂಕಾರಿಕ ಸಸ್ಯವೂ ಇಲ್ಲದ ಈ ಉದ್ಯಾನವನ ಹೆಸರಿಗಷ್ಟೇ ಪಾರ್ಕ್ ಎಂದು ಕರೆಸಿಕೊಳ್ಳುತ್ತಿದೆ. ಇದರ ಹೊರತಾಗಿ ಪಾರ್ಕ್‌ನ ಯಾವುದೇ ಸ್ವರೂಪ ಇದಕ್ಕೆ ಸಿಕ್ಕಿಲ್ಲ.

ಈ ಪಾರ್ಕ್‌ನಲ್ಲಿ ಎರಡು ಭಾಗದಲ್ಲಿ ವ್ಯಾಯಾಮ ಉಪಕರಣಗಳನ್ನು ಅಳವಡಿಸಿದ್ದು, ಅವುಗಳ ಬುಡದಲ್ಲಿ ಗಿಡಗಂಟಿಗಳು ಬೆಳೆಯುತ್ತಿರುವುದನ್ನು ನೋಡಿದರೆ ಅವುಗಳನ್ನು ಯಾರು ಬಳಕೆ ಮಾಡುತ್ತಿಲ್ಲ ಎಂಬುದನ್ನು ಸುಲಭವಾಗಿಯೇ ಊಹಿಸ ಬಹುದು. ಸುಸ್ಥಿತಿಯಲ್ಲಿರುವ ಈ ಉಪಕರಣ ಗಳ ಅಂಗಳದಲ್ಲಿ ಸಸ್ಯಗಳ ಎಲೆ ಸೇರಿದಂತೆ ವಿವಿಧ ತ್ಯಾಜ್ಯ ಸೇರುವಂತಾಗುತ್ತಿದೆ.

ಮಳೆ ಹಿನ್ನೆಲೆಯಲ್ಲಿ ಹೇರಳವಾಗಿ ಬೆಳೆದಿರುವ ಪಾರ್ಥೇನಿಯಂ ಸಸ್ಯಗಳ ನಡುವೆ ಹಾವು ಸೇರಿದಂತೆ ವಿಷಕಾರಿ ಕೀಟಗಳು ಸೇರಿಕೊಳ್ಳುವ ಸಾಧ್ಯತೆ ಇದ್ದೇ ಇದೆ. ಇಲ್ಲಿ ಪ್ರತಿನಿತ್ಯ ಮಕ್ಕಳು ಕ್ರಿಕೆಟ್ ಸೇರಿದಂತೆ ಇನ್ನಿತರ ಆಟಗಳನ್ನು ಆಡುತ್ತಿದ್ದು, ಚಿಕ್ಕ ಮಕ್ಕಳ ಆಟಿಕೆ ಸಲಕರಣೆಗಳು ಇವೆ.

ಹೀಗಿರುವಾಗ ಈ ಪಾರ್ಕ್ ಅನ್ನು ಸುಸ್ಥಿತಿಯಲ್ಲಿ ಇಡುವುದು ಅತ್ಯಗತ್ಯವಿದ್ದು, ಮಕ್ಕಳು ಸೇರುವ ಈ ಪಾರ್ಕ್ ಅನ್ನು ಸುರಕ್ಷಿತವೂ ಹಾಗೂ ಸುಸ್ಥಿತಿಯಲ್ಲಿಡುವುದು ಬೇಡವೇ? ಎಂದು ಸ್ಥಳೀಯರು ಕಿಡಿಕಾರಿದ್ದಾರೆ. ಈ ಪಾರ್ಕ್ ಅನ್ನು ಒಮ್ಮೆ ನೋಡಿದರೆ ಅದರ ದುಸ್ಥಿತಿ ಗೋಚರಿಸ ಲಿದ್ದು, ಇದರ ಸೂಕ್ತ ನಿರ್ವಹಣೆಯನ್ನು ಮೈಸೂರು ಪಾಲಿಕೆ ಮರೆತಿದೆ ಎಂಬುದು ಸ್ಪಷ್ಟವಾಗುತ್ತದೆ.



ಪ್ಲಾಸ್ಟಿಕ್ ಬಾಟಲಿ ಸೇರಿದಂತೆ ವಿವಿಧ ತ್ಯಾಜ್ಯ ಬಿದ್ದಿರುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಮುಂದುವರೆದ ರಸ್ತೆಬದಿ ಕಸ ಹಾಕುವ ಕೆಟ್ಟ ಚಾಳಿ!

● ಪಾಲಿಕೆ ದಂಡಕ್ಕೂ ಡೋಂಟ್‌ಕೇರ್ ಮನಸ್ಥಿತಿ ● ಕಟ್ಟುನಿಟ್ಟಿನ ಕ್ರಮದ ನಡುವೆ ಅನೇಕ ಸ್ಥಳಗಳಲ್ಲಿ ಕಸದ ರಾಶಿ



ಮೈಸೂರಿನ ಕೆಜಿ ಕೊಪ್ಪಲಿನ ಪೈಲ್ವಾನ್ ಬಸವಯ್ಯನವರ ವೃತ್ತದ ಸಮೀಪ ರಸ್ತೆಬದಿಯಲ್ಲಿ ತ್ಯಾಜ್ಯ ರಾಶಿಯಾಗಿ ಬಿದ್ದಿರುವುದು.



ಮೈಸೂರಿನ ಹೆಬ್ಬಾಳು ಎರಡನೇ ಹಂತದ ಸುಬ್ರಹ್ಮಣ್ಯನಗರದ 9ನೇ ಅಡ್ಡ ರಸ್ತೆಯ ಬದಿಯಲ್ಲಿ ಅಪಾರ ಪ್ರಮಾಣದಲ್ಲಿ ತ್ಯಾಜ್ಯ ಸುರಿದಿರುವುದು.

ಮೈಸೂರು,ಜೂ.14(ಪಿಎಂ)– ಮೈಸೂರು ನಗರದ ಹಲವೆಡೆ ರಸ್ತೆಬದಿಯಲ್ಲಿ ತ್ಯಾಜ್ಯದ ರಾಶಿ ಬೀಳುವುದು ನಿಂತಿಲ್ಲ. ಮೈಸೂರು ಮಹಾನಗರ ಪಾಲಿಕೆಯ ಕಟ್ಟುನಿಟ್ಟಿನ ಕ್ರಮದಿಂದ ಸಾಕಷ್ಟು ಸುಧಾರಣೆ ಆಗಿದೆ ಎನ್ನಬಹುದಾದರೂ ಹಲವಡೆ ರಸ್ತೆಬದಿಯಲ್ಲಿ ಭಾರೀ ಪ್ರಮಾಣದಲ್ಲಿ ತ್ಯಾಜ್ಯ ಹಾಕಲಾಗುತ್ತಿದೆ.

ದಂಡ ವಿಧಿಸುವ ಎಚ್ಚರಿಕೆಯ ಫಲಕ ವಿದ್ದರೂ ಕಸ ಸುರಿಯುವ ಪ್ರವೃತ್ತಿ ಮುಂದುವರೆದಿದೆ. ಕಸವನ್ನು ಪಾಲಿಕೆಯ ಕಸ ಸಂಗ್ರಹಿಸುವ ವಾಹನಗಳಿಗೆ ಮಾತ್ರವೇ ನೀಡಬೇಕೆಂಬ ಪಾಲಿಕೆಯ ಸಂದೇಶಕ್ಕೂ ಜಗ್ಗದ ಕೆಲ ನಾಗರಿಕರು, ತಮ್ಮ ಮನೆಯ ತ್ಯಾಜ್ಯಗಳನ್ನು ರಸ್ತೆಬದಿಯಲ್ಲಿ ತಂದು ಸುರಿಯುವ ಪ್ರವೃತ್ತಿ ಮುಂದುವರೆಸಿದ್ದಾರೆ.

ರಸ್ತೆಬದಿಯಲ್ಲಿ ಕಸ ಹಾಕುವ ಸ್ಥಳಗಳಲ್ಲಿ ನಗರ ಪಾಲಿಕೆ ಎಚ್ಚರಿಕೆ ನೀಡುವ ಸಂದೇಶದ ಫಲಕ ಅಳವಡಿಸಿದ್ದು, ಅನೇಕ ಕಡೆಗಳಲ್ಲಿ ದಂಡ ವಿಧಿಸುವ ಇಂತಹ ಎಚ್ಚರಿಕೆ ಸಂದೇಶದ ಫಲಕ ಇದ್ದರೂ ಅಲ್ಲೇ ಕಸ ಹಾಕುವ ಪ್ರವೃತ್ತಿ ಮುಂದುವರೆದಿರುವುದು ಮಾತ್ರ ವಿಪರ್ಯಾಸ. ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ಬೀದಿಯಲ್ಲಿ ಬಿದ್ದಿರುವ ಕಸದ ರಾಶಿಯು ಮಳೆಗೆ ನೆನೆದು ದುರ್ವಾಸನೆ ಉಂಟು ಮಾಡುತ್ತಿದೆ. ಹಸಿ ಮತ್ತು ಒಣ ಕಸವನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿ ಬಿಸಾಡಿದ್ದು, ಇದರಿಂದ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ.

ಕಂಟೈನರ್ ವ್ಯವಸ್ಥೆ ಮತ್ತೆ ಅಗತ್ಯವೇ?

ರಸ್ತೆಬದಿಯಲ್ಲಿ ತ್ಯಾಜ್ಯ ಹಾಕುವುದನ್ನು ತಪ್ಪಿಸಲು ಈ ಹಿಂದೆ ಮೈಸೂರು ನಗರದಲ್ಲಿ ಕಸದ ಕಂಟೈನರ್ ವ್ಯವಸ್ಥೆ ಇದ್ದಿತು. ಕಬ್ಬಿಣದ ಕಂಟೈನರ್‌ಗಳನ್ನು ವಾರ್ಡ್‌ಗಳಲ್ಲಿ ಆಯ್ದ ಸ್ಥಳಗಳಲ್ಲಿ ಇಡುತ್ತಿದ್ದ ಈ ವ್ಯವಸ್ಥೆಯನ್ನು ಸುಮಾರು ನಾಲ್ಕೈದು ವರ್ಷಗಳ ಹಿಂದೆಯೇ ಕೈಬಿಡಲಾಗಿದೆ. ಆಗ ಕಂಟೈನರ್ ಎತ್ತಿಕೊಂಡು ಹೋಗಲು ವಾಹನ ವ್ಯವಸ್ಥೆ ಸಹ ಇತ್ತು. ಇದೀಗ ರಸ್ತೆಬದಿಯಲ್ಲಿ ಕಸ ಸುರಿಯುವ ಪ್ರವೃತ್ತಿ ತಪ್ಪಿಸಲು ಕಂಟೈನರ್ ವ್ಯವಸ್ಥೆಯೇ ಸೂಕ್ತವೇ ಎಂಬ ಪ್ರಶ್ನೆ ಉದ್ಭವಿಸಿದೆ. ಮನೆ ಮನೆ ಕಸ ಸಂಗ್ರಹದ ಜೊತೆಗೆ ಕಂಟೈನರ್ ವ್ಯವಸ್ಥೆ ಕಲ್ಪಿಸಿದರೆ ರಸ್ತೆಬದಿ ಬೀಳುವ ಕಸಕ್ಕೆ ಕಡಿವಾಣ ಹಾಕಬಹುದೇನೋ ಎಂಬುದು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯವಾಗಿದೆ.


ಕೆಜಿ ಕೊಪ್ಪಲಿನ ಪೈಲ್ವಾನ್ ಬಸವಯ್ಯನವರ ವೃತ್ತದ ಸಮೀಪ (ಚಾಮರಾಜ ಪುರಂ ರೈಲು ನಿಲ್ದಾಣದ ಸಮೀಪ) ಶನಿವಾರ ಸಂಜೆ ರಸ್ತೆಬದಿಯಲ್ಲಿ ತರಾವರಿ ತ್ಯಾಜ್ಯ ರಾಶಿಯಾಗಿ ಬಿದ್ದಿರುವುದು ಕಂಡುಬಂದಿತು. ಈ ತ್ಯಾಜ್ಯ ರಾಶಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಹೆಚ್ಚಿನ ಪ್ರಮಾಣದಲ್ಲಿ ಬಿದಿದೆ. ದುರಂತವೆಂದರೆ ಅಲ್ಲಿ ಪಾಲಿಕೆಯು 'ಇದು ಕಸ ಹಾಕುವ ಸ್ಥಳವಲ್ಲ' ಎಂಬ ಶೀರ್ಷಿಕೆ ಒಳಗೊಂಡ ದಂಡ ವಿಧಿಸುವ ಎಚ್ಚರಿಕೆ ಫಲಕ ಸಹ ಹಾಕಿದೆ. ಅದಾಗ್ಯೂ ಇಲ್ಲಿ ಕಸ ಸುರಿಯಲಾಗಿದೆ.

ಭಾರೀ ಪ್ರಮಾಣದಲ್ಲಿ ಬಿದ್ದಿರುವ ತ್ಯಾಜ್ಯ: ಹೆಬ್ಬಾಳು ಎರಡನೇ ಹಂತದ ಸುಬ್ರಹ್ಮಣ್ಯನಗರದ 9ನೇ ಅಡ್ಡ ರಸ್ತೆಯ ಬದಿಯಲ್ಲಿ ಅಪಾರ ಪ್ರಮಾಣದಲ್ಲಿ ತ್ಯಾಜ್ಯ ಸುರಿಯಲಾಗಿದೆ. ಇಲ್ಲಿನ ಖಾಲಿ ನಿವೇಶನ ಒಳಗೊಂಡಂತೆ ತರಾವರಿ ತ್ಯಾಜ್ಯ ಬಿದ್ದಿದೆ ಪ್ಲಾಸ್ಟಿಕ್ ಕವರ್‌ನೊಳಗೆ ಕಸ ತುಂಬಿ ಬಿಸಾಡಿರುವುದು ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿದ್ದು, ಬಳಸಿರುವ ದಿಂಬು, ಬೆಡ್‌ಸಿಟ್, ಚಾಪೆ ಸೇರಿದಂತೆ ತರಾವರಿ ತ್ಯಾಜ್ಯ ಇಲ್ಲಿ ಬಿದ್ದಿದೆ. ಇದರ ಸಮೀಪದಲ್ಲೇ ಪ್ಲಾಸ್ಟಿಕ್ ತ್ಯಾಜ್ಯ ಭಾರೀ ಪ್ರಮಾಣದಲ್ಲಿ ಗುಡ್ಡೆ ಹಿಡಿದಿದೆ. ಮಳೆ ಹಿನ್ನೆಲೆಯಲ್ಲಿ ನೀರಿನಲ್ಲಿ ನೆನೆದು ಇಲ್ಲಿನ ತ್ಯಾಜ್ಯದಿಂದ ಗಬ್ಬು ವಾಸನೆ ಹೊರಹೊಮ್ಮುತ್ತಿದೆ.

ಜೊತೆಗೆ ಇಲ್ಲಿಗೆ ದಾಳಿ ಮಾಡುವ ಬಿಡಾಡಿ ದನ, ಬೀದಿ ನಾಯಿಗಳು ಕಸವನ್ನು ಚೆಲ್ಲಾಪಿಲ್ಲಿಯಾಗಿಸುತ್ತಿವೆ. ಇದರ ಪರಿಣಾಮ ಈ ಸ್ಥಳದ ಸುತ್ತಮುತ್ತಲಿಗೂ ಒಂದಿಷ್ಟು ತ್ಯಾಜ್ಯ ಬೀಳುವಂತಾಗುತ್ತಿದೆ. ಆಹಾರಕ್ಕಾಗಿ ತ್ಯಾಜ್ಯಗಳ ನಡುವೆ ಹುಡುಕಾಡುವ ಬೀದಿ ನಾಯಿಗಳು ಅಷ್ಟಕ್ಕೆ ಸುಮ್ಮನಾಗದೇ ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿದುವ ಆಹಾರ ತ್ಯಾಜ್ಯವನ್ನು ಹೆಕ್ಕಿ ತೆಗೆದು ಮತ್ತೊಂದೆಡೆಗೆ ಕೊಂಡೊಯ್ದು ಅರೆಬರೆ ತಿಂದು ಹಾದಿಬೀದಿಯಲ್ಲಿ ಬಿಟ್ಟು ಹೋಗುವ ಮೂಲಕ ವಾತಾವರಣವನ್ನು ಮತ್ತಷ್ಟು ಅನೈರ್ಮಲ್ಯಗೊಳಿಸುವಂತಾಗಿದೆ. ಈ ಸ್ಥಳವನ್ನು ನೋಡಿದರೆ ಇದೇನು ತ್ಯಾಜ್ಯ ವಿಲೇವಾರಿ ಮಾಡುವ ಘಟಕವೇ ಎಂಬಂತೆ ಬಾಸವಾಗುತ್ತದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ತರಾವರಿ ತ್ಯಾಜ್ಯ ಇಲ್ಲಿ ರಾಶಿಯಾಗಿ ಬಿದ್ದಿದೆ.

ಹೆಬ್ಬಾಳ್ 1ನೇ ಹಂತದ ಎಬಿಐ ಬ್ಯಾಂಕ್ ರಸ್ತೆಬದಿಯಲ್ಲಿ (4ನೇ ಮುಖ್ಯರಸ್ತೆ ಸಮೀಪ) ಸಹ ತ್ಯಾಜ್ಯ ಸುರಿಯಲಾಗಿದೆ. ಇಲ್ಲಿ ಸಹ ಹಸಿ ಹಾಗೂ ಒಣ ಕಸ ಮಿಶ್ರಣಗೊಂಡು ರಾಶಿಯಾಗಿ ಬಿದ್ದಿದ್ದು, ಬಳಕೆ ಮಾಡಿದ ಹಾಸಿಗೆ, ದಿಂಬು ಸಹ ಇಲ್ಲಿಗೆ ಹಾಕಲಾಗಿದೆ. ಇಲ್ಲಿಯೂ ಪ್ಲಾಸ್ಟಿಕ್ ತ್ಯಾಜ್ಯವೇ ಭಾರೀ ಪ್ರಮಾಣದಲ್ಲಿ ಬಿದ್ದಿದ್ದು, ತರಾವರಿ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಕವರ್‌ನೊಳಗೆ ಹಾಕಿ ಬಿಸಾಡಲಾಗಿದೆ. ಇಂತಹ ಸನ್ನಿವೇಶ ನಗರದ ಇನ್ನು ಹಲವು ಕಡೆಗಳಲ್ಲಿಯೂ ಇದೆ.

ವಾಲ್ಮೀಕಿ ಭವನಕ್ಕೆ ಜಮೀನು ಹಸ್ತಾಂತರ



ಮೈಸೂರು ನಗರದ ಸರ್ವೆ ನಂ.92ರಲ್ಲಿ 12 ಗುಂಟೆ ಜಮೀ ನಿನಲ್ಲಿ ಮಹರ್ಷಿ ವಾಲ್ಮೀಕಿ ಭವನ ನಿರ್ಮಿಸಲು ತಾಲೂಕು ಆಡಳಿತ ಪರಿಶಿಷ್ಟ ವರ್ಗಗಳ ಇಲಾಖೆಗೆ ಸಂಬಂಧಿಸಿದ ದಾಖಲೆಗಳನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ಅರುಣ್ ಪ್ರಭು ಬಿ., ರಾಜಸ್ವ ನಿರೀಕ್ಷಕರು ಹೇಮಂತ್ ಕುಮಾರ್, ಗ್ರಾಮ ಲೆಕ್ಕಿಗರಾದ ನಾಗೇಶ್, ಯೋಗೇಶ್ ಎಸ್., ಕರ್ನಾಟಕ ವೀರ ಕೇಸರಿ ಪಡೆಯ ಅಧ್ಯಕ್ಷರಾದ ಮಧುವನ ಚಂದ್ರು ಮಹದೇವು, ಸಿದ್ದರಾಜು ಹಾಜರಿದ್ದರು.

ವಿಮಾನ ಸಂಖ್ಯೆ 'AI 171' ಕೈಬಿಡಲು ಏರ್ ಇಂಡಿಯಾ ನಿರ್ಧಾರ

ಮುಂಬೈ: ಗುಜರಾತ್ ನ ಅಹಮದಾಬಾದ್‌ನಲ್ಲಿ ಗುರುವಾರ ಬೋಯಿಂಗ್ ಡ್ರೀಮ್‌ಲೈನರ್ 787–8 ವಿಮಾನ ಪತನವಾಗಿ 241 ಜನ ಸಾವನ್ನಪ್ಪಿದ ನಂತರ ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಸಂಖ್ಯೆ '171' ಅನ್ನು ಕೈಬಿಡಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಟೇಕ್ ಆಫ್ ಆದ ಕೆಲವೇ ನಿಮಿಷಗಳಲ್ಲಿ ಪತನಗೊಂಡ ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನವು ಅಹಮದಾಬಾದ್‌ನಿಂದ ಲಂಡನ್ ಗ್ಯಾಟ್ವಿಕ್ ಮಾರ್ಗದಲ್ಲಿ 'AI 171' ವಿಮಾನವನ್ನು ನಿರ್ವಹಿಸುತ್ತಿತ್ತು. ಮಾರಕ ವಿಮಾನ ಅಪಘಾತಗಳ ನಂತರ ವಿಮಾನಯಾನ ಸಂಸ್ಥೆಗಳು ನಿರ್ದಿಷ್ಟ ವಿಮಾನ ಸಂಖ್ಯೆಯನ್ನು ಬಳಸುವುದನ್ನು ನಿಲ್ಲಿಸುವುದು ಸಾಮಾನ್ಯ ಎಂದು ಶನಿವಾರ ಮೂಲಗಳು ತಿಳಿಸಿವೆ.

ಜೂನ್ 17 ರಿಂದ, ಅಹಮದಾಬಾದ್–ಲಂಡನ್ ಗ್ಯಾಟ್ವಿಕ್‌ನ ವಿಮಾನ ಸಂಖ್ಯೆ 'AI 171' ಬದಲಿಗೆ 'AI 159' ಆಗಿರುತ್ತದೆ. ಬುಕಿಂಗ್ ವ್ಯವಸ್ಥೆಯಲ್ಲಿ ಅಗತ್ಯ ಬದಲಾವಣೆಗಳನ್ನು ಶುಕ್ರವಾರ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಏರ್ ಇಂಡಿಯಾ ಎಕ್ಸ್‌ಪ್ರೆಸ್ ತನ್ನ ವಿಮಾನ ಸಂಖ್ಯೆ 'IX 171' ಅನ್ನು ತೆಗೆದು ಹಾಕಲು ನಿರ್ಧರಿಸಿದೆ ಎಂದು ಮತ್ತೊಂದು ಮೂಲ ತಿಳಿಸಿದೆ.

ಮೈಸೂರು ಮಿತ್ರ ಭಾನುವಾರ 15 ಜೂನ್ 2025

ಶ್ರೇಷ್ಠ ಭಾರತ ನಿರ್ಮಾಣಕ್ಕೆ ಕೈಜೋಡಿಸಿ

ಸಾಂಸ್ಕೃತಿಕ ಚಿಂತಕ ಪ್ರೊ.ಜಯಪ್ರಕಾಶ್‌ಗೌಡ, ಸಮಾಜ ಸೇವಕಿ ನಿಶ್ಕಲ್‌ಗೌಡ, ಸಮಾಜ ಸೇವಕ ಪ್ರತಾಪ್ ಮಧುಕರ್ ಕಾಮತ್‌ಗೆ ಮಂಡ್ಯ ವಿವಿಯಿಂದ ಗೌರವ ಡಾಕ್ಟರೇಟ್ ಪ್ರದಾನ



ಸಾಂಸ್ಕೃತಿಕ ಚಿಂತಕ ಪ್ರೊ.ಜಯಪ್ರಕಾಶ್‌ಗೌಡ, ಸಮಾಜ ಸೇವಕಿ ನಿಶ್ಕಲ್‌ಗೌಡ ಮತ್ತು ಸಮಾಜ ಸೇವಕ ಪ್ರತಾಪ್ ಮಧುಕರ್ ಕಾಮತ್ ಸೇರಿದಂತೆ ಮೂವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮಂಡ್ಯ ವಿವಿಯ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಮಂಡ್ಯ, ಜೂ.14– ಒಂದೇ ಭಾರತ, ಶ್ರೇಷ್ಠ ಭಾರತ ಮತ್ತು ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ, ಮೇಡ್ ಇನ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ ಗುರಿಗಳನ್ನು ಸಾಧಿಸಲು ಕೊಡುಗೆ ನೀಡಿ ಮತ್ತು ದೇಶವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಪ್ರಯತ್ನಿಸಿ ಎಂದು ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕರೆ ನೀಡಿದರು.

ಶನಿವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಮಂಡ್ಯ ವಿಶ್ವವಿದ್ಯಾಲಯದ 3ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. "ಈ ಘಟಿಕೋತ್ಸವ ಸಮಾರಂಭದಲ್ಲಿ ಪದವಿ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು ಮತ್ತು ಈ ವಿಶೇಷ ದಿನ, ಇದು ನಿಮ್ಮ ಜೀವನದ ಅತ್ಯಂತ ಅಮೂಲ್ಯ ಕ್ಷಣಗಳಲ್ಲಿ ಒಂದಾಗಿದೆ. ನಿಮ್ಮ ಜೀವನವನ್ನು ರೂಪಿಸುವಲ್ಲಿ ಗಣನೀಯ ಕೊಡುಗೆ ನೀಡಿದ ಈ ವಿಶ್ವವಿದ್ಯಾಲಯದ ಎಲ್ಲಾ ಶಿಕ್ಷಕರು, ಆಡಳಿತ ಸಿಬ್ಬಂದಿ ಮತ್ತು ಪೋಷಕರನ್ನು ಗೌರವಿಸಿ ಎಂದರು.

ಜೀವನದ ಯಶಸ್ಸಿನಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ, ಶಿಕ್ಷಣವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಉಪಯುಕ್ತವಾಗಿದೆ. ಶಿಕ್ಷಣವು ಕೌಶಲ್ಯಗಳನ್ನು ಹೆಚ್ಚಿಸುತ್ತದೆ ಮತ್ತು ನಾವು ಆಸಕ್ತಿ ಹೊಂದಿರುವ ಕ್ಷೇತ್ರದಲ್ಲಿ ಕೌಶಲ್ಯಪೂರ್ಣರಾಗುವ ಮೂಲಕ ನಾವು ಉತ್ತಮ ಯಶಸ್ಸನ್ನು ಸಾಧಿಸಬಹುದು. ನಿಮ್ಮ ಶಿಕ್ಷಣದ ಜ್ಞಾನವನ್ನು ಯಾರೂ ಕದಿಯಲು ಸಾಧ್ಯವಿಲ್ಲ. ಜೀವನ ಪೂರ್ತಿ ಕಲಿಕೆ ನಿರಂತರವಾಗಿರಲಿ. ಇದು ನಿಮ್ಮ ಯಶಸ್ಸಿಗೆ ಹಾದಿಯಾಗಲಿದೆ ಎಂದು ಹೇಳಿದರು.

ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆ, ಪರಿಸರ ಮಾಲಿನ್ಯದಂತಹ ಜಾಗತಿಕ ಸವಾಲುಗಳ ಹೆಚ್ಚಾಗುತ್ತಿವೆ. ಈ ಜಾಗತಿಕ ಸವಾಲುಗಳು ಪರಿಹಾರಕ್ಕೆ ಕೊಡುಗೆ ನೀಡಬೇಕು. ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಮುಂದಾಗಬೇಕು ಹಾಗೂ ಹಾಗೂ ಸಮಾಜಕ್ಕಾಗಿ ನಿಸ್ವಾರ್ಥ ಸೇವೆ ಮಾಡಬೇಕು ಎಂದು ತಿಳಿಸಿದರು.


ಪ್ರಾಚೀನ ಕಾಲದಲ್ಲಿ, ನಮ್ಮ ಶಿಕ್ಷಣ ವ್ಯವಸ್ಥೆ, ನಮ್ಮ ಜ್ಞಾನ, ವಿಜ್ಞಾನ ಕೊಡುಗೆಯೊಂದಿಗೆ, ಭಾರತವು ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಕೇಂದ್ರವಾಗಿತ್ತು ಮತ್ತು ಬಲವಾದ ಆರ್ಥಿಕತೆಯಿಂದಾಗಿ ಆರ್ಥಿಕವಾಗಿ ಸಮೃದ್ಧವಾಗಿತ್ತು ಎಂಬ ಕಾರಣಕ್ಕಾಗಿ ನಮ್ಮ ಭಾರತವನ್ನು "ವಿಶ್ವ ಗುರು" ಮತ್ತು "ಸೋನೆ ಕಿ ಚಿಡಿಯಾ" ಎಂದು ಕರೆಯಲಾಗುತ್ತಿತ್ತು ಎಂದು ಎಲ್ಲರಿಗೂ ತಿಳಿದಿದೆ. ಪ್ರಾಚೀನ ಭಾರತೀಯ ಖಗೋಳ ಶಾಸ್ತ್ರಜ್ಞರು ಬ್ರಹ್ಮಾಂಡದ ವೈಜ್ಞಾನಿಕ ತತ್ವಗಳನ್ನು ಅರ್ಥಮಾಡಿಕೊಂಡರು. ಭಾರತೀಯ ಖಗೋಳಶಾಸ್ತ್ರದ ಬೇರುಗಳು ವೇದಗಳಲ್ಲಿ ಕಂಡುಬರುತ್ತವೆ. ಋಗ್ವೇದ, ಯಜುರ್ವೇದ, ಅಥರ್ವವೇದ ಮತ್ತು ಸಾಮವೇದಗಳಲ್ಲಿ ಖಗೋಳ ಘಟನೆಗಳನ್ನು ಉಲ್ಲೇಖಿಸಲಾಗಿದೆ. ಖಗೋಳಶಾಸ್ತ್ರದಿಂದ ಭೂವಿಜ್ಞಾನ, ಗಣಿತ, ವೈದ್ಯಕೀಯ ಮತ್ತು ಇತರ ಹಲವು ಕ್ಷೇತ್ರಗಳಲ್ಲಿ ಭಾರತೀಯರು ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ. ಗಣಿತಶಾಸ್ತ್ರದಲ್ಲಿ, ಶೂನ್ಯ ಮತ್ತು ದಶಮಾಂಶ ಸಂಖ್ಯೆಗಳನ್ನು ಭಾರತೀಯ ಗಣಿತಜ್ಞರು ಮತ್ತು ಖಗೋಳಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ ಎಂದು ಹೇಳಿದರು.

ಪ್ರಸ್ತುತ ಜಗತ್ತು ವೇಗವಾಗಿ ಬದಲಾಗುತ್ತಿದೆ. ಕೃತಕ ಬುದ್ಧಿಮತ್ತೆ, ಡೇಟಾ ವಿಜ್ಞಾನ, ಸುಸ್ಥಿರ ಅಭಿವೃದ್ಧಿ ಮತ್ತು ಉದ್ಯಮಶೀಲತೆಯಂತಹ ಕ್ಷೇತ್ರಗಳು ನಮ್ಮ ಜೀವನದ ಮೇಲೆ ಪ್ರಭಾವ ಬೀರುತ್ತಿವೆ. ನೀವು ಯಾವಾಗಲೂ ಇತ್ತೀಚಿನ ತಂತ್ರಜ್ಞಾನಗಳು ಮತ್ತು ಆಲೋಚನೆಗಳೊಂದಿಗೆ ನಿಮ್ಮನ್ನು ನವೀಕರಿಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನಿವೃತ್ತ ಪ್ರಾಧ್ಯಾಪಕ, ಸಾಹಿತಿ ಮತ್ತು ಸಂಘಟಕರೂ ಆದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ಹಾಗೂ ಪರಿಸರ ಸಂರಕ್ಷಕಿ, ಸಮಾಜ ಸೇವಕಿ ಎಚ್.ಎಸ್.ನಿಶ್ಕಲ್‌ಗೌಡ ಹಾಗೂ ಸಮಾಜ ಸೇವಕ ಪ್ರತಾಪ್ ಮಧುಕರ್ ಕಾಮತ್, ಮಂಡ್ಯ ವಿವಿಯ 3ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ಜೊತೆಗೆ 50 ಸ್ನಾತಕ, 27 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರ‍್ಯಾಂಕ್ ಪ್ರದಾನ ಮಾಡಲಾಯಿತು, 34 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು. ಒಟ್ಟಾರೆ 815 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವೇದಿಕೆಯಲ್ಲಿ ಪಶ್ಚಿಮ ಬಂಗಾಳದ ಕೋಲ್ಕತ್ತಾದ ಎನ್‌ಎಸ್‌ಎಚ್‌ಎಂ ಜ್ಞಾನ ಕ್ಯಾಂಪಸ್‌ನ ನಿರ್ದೇಶಕ ಪ್ರೊ.ಸೌಮೇಂದ್ರ ನಾಥ್ ಬಂಡೋಪಾಧ್ಯಾಯ, ಕುಲಪತಿ ಪ್ರೊ.ಕೆ.ಶಿವಚಿತಪ್ಪ, ಇತರ ಗಣ್ಯರು ಉಪಸ್ಥಿತರಿದ್ದರು.

ಕೆಆರ್‌ಎಸ್ ಕ್ರಸ್ಟ್ ಗೇಟ್ ಬಳಿ ರೀಲ್ಸ್ ಮಾಡಿದ್ದ ಇಬ್ಬರ ಬಂಧನ, ಬಿಡುಗಡೆ



ಶ್ರೀರಂಗಪಟ್ಟಣ, ಜೂ.14–ಕೆಆರ್‌ಎಸ್ ಜಲಾಶಯದ ನಿಷೇಧಿತ ಪ್ರದೇಶಕ್ಕೆ ಅಕ್ರಮವಾಗಿ ನುಗ್ಗಿ ಸೆಲ್ಫಿ ವಿಡಿಯೋ ಮಾಡುವ ಮೂಲಕ ಪುಂಡಾಟ ನಡೆಸಿದ್ದ ಮೂವರು ಯುವಕರ ಪೈಕಿ ಇಬ್ಬರನ್ನು ಕೆಆರ್‌ಎಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಾಂಡವಪುರ ತಾಲೂಕಿನ ಚಿಕ್ಕಾಡೆ ಗ್ರಾಮದ ಜೀವನ್ ಮತ್ತು ಮೂರ್ತಿ ಬಂಧಿತರು.

ಜೀವನ್ ಮತ್ತು ಮೂರ್ತಿ ಸೇರಿದಂತೆ ಮೂವರು ಕೃಷ್ಣರಾಜ ಸಾಗರದ ನಿಷೇಧಿತ ಪ್ರದೇಶವಾದ ಕ್ರಸ್ಟ್ ಗೇಟ್ ಬಳಿಗೆ ನುಗ್ಗಿ ಸೆಲ್ಫಿ ವಿಡಿಯೋ ಮಾಡಿ ಕೆಆರ್‌ಎಸ್ ಡ್ಯಾಂ ಬಗ್ಗೆ ಮತ್ತು ತಮ್ಮ ಜೊತೆ ಇರುವವರ ಬಗ್ಗೆ ವಿವರಣೆ ನೀಡಿ, ಅದನ್ನು ಸಾಮಾಜಿಕ ಜಾಲ ತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಇದು ಭಾರೀ ವೈರಲ್ ಆಗಿತ್ತು.

ಸೋಷಿಯಲ್ ಮೀಡಿಯಾ ಸೇರಿದಂತೆ ಪತ್ರಿಕೆಗಳು ಮತ್ತು ಖಾಸಗಿ ಸುದ್ದಿವಾಹಿನಿಗಳಲ್ಲಿ ಈ ಬಗ್ಗೆ ವರದಿಗಳು ಪ್ರಕಟವಾಗುತ್ತಿದ್ದಂತೆ ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಫಾರೂಕ್ ಅಭು ಅವರು ಕೆಆರ್‌ಎಸ್ ಪೊಲೀಸ್ ಠಾಣೆಗೆ ದೂರು ನೀಡಿದರು.

ಅತಿಕ್ರಮ ಪ್ರವೇಶ ಪ್ರಕರಣ ದಾಖಲಿಸಿಕೊಂಡ ಕೆಆರ್‌ಎಸ್ ಠಾಣೆ ಪೊಲೀಸರು, ತಕ್ಷಣ ಕಾರ್ಯಪ್ರವೃತ್ತರಾಗಿ ಇಬ್ಬರು ಆರೋಪಿಗಳನ್ನು ಚಿಕ್ಕಾಡೆ ಗ್ರಾಮದಲ್ಲಿ ಬಂಧಿಸಿ, ನಂತರ ಠಾಣಾ ಜಾಮೀನಿನಲ್ಲಿ ಬಿಡುಗಡೆ ಮಾಡಿದ್ದಾರೆ.

ಆರೋಪಿಗಳು ಕೆಆರ್‌ಎಸ್ ನಿಷೇಧಿತ ಪ್ರದೇಶವಾದ ಕ್ರಸ್ಟ್ ಗೇಟ್ ಬಳಿ ಸೇರಿ ವಿಡಿಯೋ ಮಾಡಿ ಪುಂಡಾಟ ನಡೆದಿದ್ದ ಸಚಿತ್ರ ವರದಿಯನ್ನು ಶನಿವಾರ (ಜೂ.14)ದ 'ಮೈಸೂರು ಮಿತ್ರ' ಸಂಚಿಕೆಯ ಮುಖಪುಟದಲ್ಲಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕಿಕ್ಕೇರಿ ಬಳಿ ಗಿಡ ನೆಡದೆ 2 ಲಕ್ಷ ರೂ. ಗುಳುಂ

ಮನರೇಗ ಯೋಜನೆ ದುರುಪಯೋಗ ಪಡಿಸಿಕೊಂಡ ಬಗ್ಗೆ ಕ್ರಮಕ್ಕೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ



ಕಿಕ್ಕೇರಿ ಹೋಬಳಿಯ ಊಗಿನಹಳ್ಳಿ ಗ್ರಾಮದಲ್ಲಿ ಗಿಡ ನೆಡದೆ ಅಕ್ರಮ ಬಿಲ್ ಮಾಡಿಕೊಂಡಿ ರುವುದನ್ನು ವಿರೋಧಿಸಿ ಗ್ರಾಮಸ್ಥರು ಲಕ್ಷ್ಮೀಪುರ ಗ್ರಾಪಂ ಮುಂದೆ ಪ್ರತಿಭಟನೆ ನಡೆಸಿದರು.

ಕಿಕ್ಕೇರಿ: ಹೋಬಳಿಯ ಲಕ್ಷ್ಮೀಪುರ ಗ್ರಾಪಂ ವ್ಯಾಪ್ತಿಯ ಊಗಿನಹಳ್ಳಿ ಗ್ರಾಮದಲ್ಲಿ ಮನರೇಗ ಯೋಜನೆಯಲ್ಲಿ ಯಾವುದೇ ಗಿಡ ನೆಡದೆ ನಕಲಿ ದಾಖಲೆ ಸೃಷ್ಟಿಸಿ 2 ಲಕ್ಷ ರೂ. ಗುಳುಂ ಮಾಡಲಾಗಿದ್ದು ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಪಂ ಕಚೇರಿ ಮುಂದೆ ಗ್ರಾಮಸ್ಥರು ಜಮಾಯಿಸಿ ಈ ಬಗ್ಗೆ ಸೂಕ್ತ ತನಿಖೆ ನಡೆಯಬೇಕು, ಸ್ಥಳಕ್ಕೆ ಮೇಲಾಧಿಕಾರಿಗಳು ಆಗಮಿಸಬೇಕು ಎಂದು ಬಿಗಿ ಪಟ್ಟು ಹಿಡಿದರು.

ಮನರೇಗ ಯೋಜನೆಯಲ್ಲಿ 2024–25ನೇ ಸಾಲಿನಲ್ಲಿ ಜಿಪಂ, ತಾಪಂ ಸಹಯೋಗದಲ್ಲಿ ಕೂಲಿ ಕಾರ್ಮಿಕರಿಂದ ಮಾನವ ಕೆಲಸದಿಂದ 5 ಲಕ್ಷ ರೂ. ವೆಚ್ಚದಲ್ಲಿ ಹೆಬ್ಬೇವು, ಮಹಾಗನಿ, ನೇರಳೆಯ 300 ಗಿಡಗಳನ್ನು ಊಗಿನಹಳ್ಳಿ ಕ್ರಾಸ್‌ನಿಂದ ಊಗಿನಹಳ್ಳಿ ಶಾಲೆಯವರೆಗೆ ನೆಡಬೇಕಿತ್ತು. ದಿನವೊಂದಕ್ಕೆ 349ರೂ. ಕೂಲಿ ನೀಡಿ 1412 ಮಾನವ ದಿನಗಳಲ್ಲಿ ಕೆಲಸ ಮಾಡಬೇಕಿತ್ತು. ಆದರೆ ಯಾವುದೇ ಒಂದು ಗಿಡವನ್ನು ನೆಡದೆ ಗಿಡ ನೆಟ್ಟಿರುವುದಾಗಿ ಬೋಗಸ್ ಮಾಹಿತಿ ನೀಡಿ ಮೊದಲು ಕಂತಿನಲ್ಲಿ 2,04,609 ರೂ.ಗಳನ್ನು ಪಡೆದು ವಂಚಿಸಿದ್ದಾರೆ. ಕೆಲಸ ಮಾಡದ ಜಾಬ್ ಕಾರ್ಡುದಾರ ಹೆಸರಿನಲ್ಲಿ ವ್ಯವಸ್ಥಿತವಾಗಿ ಹಣ ಸಂದಾಯವಾಗಿದೆ ಎಂದು ಗ್ರಾಮಸ್ಥರು ದೂರಿದರು.

ಗಿಡ ನೆಟ್ಟಿರುವುದಾಗಿ ನಾಮಫಲಕವನ್ನು ಊಗಿನಹಳ್ಳಿ ಕಾರಮೆಳೆ ಸಿಂಗಮ್ಮ ಗುಡಿಯ ಬಳಿ ನೆಡಲು ಮುಂದಾಗಿದ್ದಾರೆ. ಕಳೆದೆರಡು ದಿನಗಳ ಹಿಂದೆ ಹಲವು ವ್ಯಕ್ತಿಗಳು ಗಿಡ ನೆಡುತ್ತಿರುವ, ಗುಂಡಿ ತೆಗೆಯುತ್ತಿರುವ ಮಾದರಿಯಲ್ಲಿ ಜಿಪಿಆರ್‌ಎಸ್ ಫೋಟೊ ತೆಗೆದುಕೊಳ್ಳಲು ಯತ್ನಿಸಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗಿಡ ನೆಟ್ಟಿರುವ ಕಾಮಗಾರಿ ಮಾಡಿರುವ ನಾಮಫಲಕ ಅಳವಡಿಸಲು ಮುಂದಾಗಿದ್ದಾರೆ. ವಿಷಯ ತಿಳಿದ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿದಾಗ ಈ ವ್ಯಕ್ತಿಗಳು ಪರಾರಿಯಾಗಿದ್ದಾರೆ ಎಂದು ಆಪಾದಿಸಿದರು.

ಪ್ರತಿಭಟನಾಕಾರರ ಆಕ್ರೋಶಕ್ಕೆ ಯಾವುದೇ ಉತ್ತರ ನೀಡದೆ ಈ ಸಂಬಂಧದ ಮಾಹಿತಿಯ ಕಡತಗಳು ಇಂಜನಿಯರ್ ಬಳಿ ಇದೆ ಎಂದು ಪಿಡಿಒ ಸುರೇಶ್‌ಬಾಬು ತಿಳಿಸಿ ಜಾರಿಕೊಳ್ಳಲು ಯತ್ನಿಸಿದರು. ತಾಲೂಕು ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ತನಿಖಾ ಕ್ರಮ ನಡೆಸಿ ಸೂಕ್ತ ಕ್ರಮ ಜರುಗಿಸುವ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಪರಿಸರ ಪ್ರೇಮಿ ವೆಂಕಟೇಶ್, ದಿಲೀಪ್, ಯೋಗೇಶ್, ರವಿ, ಮೋಹನ್, ಸುರೇಶ್, ಮಹದೇವು, ಶಿವರಾಜು, ಮಹೇಶ್, ಹೇಮಂತ್, ಉಮೇಶ್, ಅನಿಲ್‌ಕುಮಾರ್ ಮತ್ತಿತರರಿದ್ದರು.

ರೈಲಿಗೆ ತಲೆಕೊಟ್ಟು ಯುವಕ ಆತ್ಮಹತ್ಯೆ



ಆಕಾಶ್

ಶ್ರೀರಂಗಪಟ್ಟಣ: ಯುವಕನೋರ್ವ ಚಲಿಸುತ್ತಿದ್ದ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದ ಪಶ್ಚಿಮವಾಹಿನಿ ಬಳಿಯ ರೈಲ್ವೆ ಹಳಿ ಮೇಲೆ ನಡೆದಿದೆ.

ತಾಲೂಕಿನ ಅರಕೆರೆ ಗ್ರಾಮದ ಆಕಾಶ್ (24) ಆತ್ಮಹತ್ಯೆಗೆ ಶರಣಾದ ಯುವಕ. ಈತ ಮೈಸೂರಿನಲ್ಲಿ ರೂಂ ಮಾಡಿಕೊಂಡು ಮಾಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಎಂದು ತಿಳಿದು ಬಂದಿದೆ.

ಕಳೆದ 2–3 ದಿನಗಳಿಂದ ಮನೆಯಿಂದ ನಾಪತ್ತೆ ಆಗಿದ್ದು, ಶನಿವಾರ ಬೆಳಿಗ್ಗೆ ಪಟ್ಟಣದ ಪಶ್ಚಿಮವಾಹಿನಿ ಗೇಟ್ ಬಳಿಯ ರೈಲ್ವೆ ಹಳಿ ಮೇಲೆ ಮೃತದೇಹ ದೊರೆತಿದೆ.

ಈತನ ಸಾವಿಗೆ ಕಾರಣ ತಿಳಿದು ಬಂದಿಲ್ಲ. ಈ ಸಂಬಂಧ ರೈಲ್ವೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಮೈಸೂರಿನ ಕೆಆರ್ ಆಸ್ಪತ್ರೆ ಶವಾಗಾರಕ್ಕೆ ಮೃತ ದೇಹವನ್ನು ರವಾನಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೆರೆಯಲ್ಲಿ ಈಜಲು ಹೋದ ವ್ಯಕ್ತಿ ಸಾವು



ಭಾರತೀನಗರ, ಜೂ.14– ಕೆರೆಯಲ್ಲಿ ಈಜಲು ಹೋದ ವ್ಯಕ್ತಿಯೊಬ್ಬ ದೊಡ್ಡ ಅರಸಿನಕೆರೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಸಂಭವಿಸಿದೆ.

ಗ್ರಾಮದ ನಾಥಿ ತಿಮ್ಮೇಗೌಡರ ಪುತ್ರ ಶ್ಯಾಮ್ (42) ಮೃತ ದುರ್ದೈವಿ. ಈತ ಶನಿವಾರ ಮಧ್ಯಾಹ್ನ ಗ್ರಾಮದ ಕೆರೆಯಲ್ಲಿ ಈಜು ಹೊಡೆಯುತ್ತಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಕೆರೆಯ ಮಧ್ಯ ಭಾಗದಲ್ಲಿ ಮುಳುಗಿದ್ದಾನೆ. ಜೊತೆಗೆ ತೆರಳಿದ್ದ ಸ್ನೇಹಿತರು ಶ್ಯಾಮ್ ಕೆರೆಯ ಮಧ್ಯದಲ್ಲಿ ಮುಳುಗಿದ್ದನ್ನು ನೋಡಿ ಗ್ರಾಮಸ್ಥರಿಗೆ ವಿಷಯ ತಿಳಿಸಿದ್ದಾರೆ.

ತಕ್ಷಣವೇ ಸ್ಥಳಕ್ಕೆ ಆಗಮಿಸಿದ ಗ್ರಾಮಸ್ಥರು ಅಗ್ನಿಶಾಮದಳಕ್ಕೆ ವಿಷಯ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿಗಳು ಶ್ಯಾಮ್ ಶವ ಪತ್ತೆ ಹಚ್ಚಿದ್ದಾರೆ. ಕೆ.ಎಂ. ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜೂ.15ರ ಭಾನುವಾರ ಮೃತದೇಹದ ಪಂಚನಾಮೆಯನ್ನು ಸರ್ಕಾರಿ ಸಮುದಾಯ ಆರೋಗ್ಯಕೇಂದ್ರದಲ್ಲಿ ನಡೆಸಿ ವಾರಸುದಾರರಿಗೆ ಒಪ್ಪಿಸಲಾಗುವುದು ಎಂದು ಕೆ.ಎಂ.ದೊಡ್ಡಿ ಪೊಲೀಸರು ಕುಟುಂಬಸ್ಥರಿಗೆ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಬಾಲ ಗರ್ಭಿಣಿಯರು!

ನಾಲ್ವರು, 16ರಿಂದ 17 ವರ್ಷಕ್ಕೊಳಪಟ್ಟ 23, 17ರಿಂದ 18 ವರ್ಷಕ್ಕೊಳಪಟ್ಟ 107, 18ರಿಂದ 19 ವರ್ಷಕ್ಕೊಳಪಟ್ಟ 814 ಸೇರಿದಂತೆ 948 ಬಾಲಗರ್ಭಿಣಿಯರಿದ್ದಾರೆ. ಕೊಡಗು ಜಿಲ್ಲೆಯಲ್ಲಿ 14ರಿಂದ 15 ವರ್ಷಕ್ಕೊಳಪಟ್ಟ ಓರ್ವ, 15ರಿಂದ 16 ವರ್ಷಕ್ಕೊಳಪಟ್ಟ 11, 16ರಿಂದ 17 ವರ್ಷಕ್ಕೊಳಪಟ್ಟ 10, 17ರಿಂದ 18 ವರ್ಷಕ್ಕೊಳಪಟ್ಟ 79, 18ರಿಂದ 19 ವರ್ಷಕ್ಕೊಳಪಟ್ಟ 318 ಸೇರಿದಂತೆ 424 ಬಾಲಗರ್ಭಿಣಿಯರಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ 14ರಿಂದ 15 ವರ್ಷಕ್ಕೊಳಪಟ್ಟ ಓರ್ವ, 15ರಿಂದ 16 ವರ್ಷಕ್ಕೊಳಪಟ್ಟ ಓರ್ವ, 16ರಿಂದ 17 ವರ್ಷಕ್ಕೊಳ ಪಟ್ಟ 9, 17ರಿಂದ 18 ವರ್ಷಕ್ಕೊಳಪಟ್ಟ 25, 18ರಿಂದ 19 ವರ್ಷಕ್ಕೊಳಪಟ್ಟ 380 ಸೇರಿದಂತೆ 416 ಬಾಲ ಗರ್ಭಿಣಿಯರಿದ್ದಾರೆ.

ಬಾಲಕಿಯರು ಗರ್ಭಿಣಿಯಾದಾಗ ಅನ್ಯಮಾರ್ಗವಿಲ್ಲದೆ ಆಸ್ಪತ್ರೆಗಳಿಗೆ ಬರುವುದರಿಂದ ಆರೋಗ್ಯ ಇಲಾಖೆ ಗಮನಕ್ಕೆ ಈ ಪ್ರಕರಣಗಳು ಸಹಜವಾಗಿ ಬರುತ್ತಿವೆ. ಸದರಿ ಇಲಾಖೆಯು ಬಾಲಗರ್ಭಿಣಿಯರ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನು ಕ್ರಮ ಕೈಗೊಳ್ಳದೆ ಮಾಹಿತಿಯನ್ನಷ್ಟೇ ಪೊಲೀಸ್ ಇಲಾಖೆಗೆ ರವಾನಿಸುತ್ತದೆ. ಆದರೆ ಅಪ್ರಾಪ್ತ ವಯಸ್ಸಿನಲ್ಲಿ ಗರ್ಭ ಧರಿಸುವ ಬಾಲಕಿಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಆರೋಗ್ಯ ಇಲಾಖೆಯು ಬಾಲಗರ್ಭಿಣಿಯರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಿ, ಅವರಿಗೆ ಹೆರಿಗೆಯಾಗುವವರೆಗೂ ಅಗತ್ಯವಿರುವ ಎಲ್ಲಾ ರೀತಿಯ ಆರೋಗ್ಯ ಸೇವೆಗಳನ್ನು ಒದಗಿಸುತ್ತದೆ. ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲೆಯ ಯಾವುದೇ ಆಸ್ಪತ್ರೆಗೆ ಬಾಲಗರ್ಭಿಣಿಯರು ಬಂದರೆ, ಅವರನ್ನು ಮಕ್ಕಳ ಆಸ್ಪತ್ರೆಯಾದ ಚೆಲುವಾಂಬ ಆಸ್ಪತ್ರೆಗೆ ರವಾನಿಸಲಾಗುತ್ತದೆ. ಜೊತೆಗೆ ಪೊಲೀಸ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೂ ಮಾಹಿತಿ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಗಳು ಬಾಲ ಗರ್ಭಿಣಿಯರಿಂದ ಮಾಹಿತಿ ಪಡೆಯುವುದಲ್ಲದೇ ಮುಂದಿನ ಕ್ರಮ ವಹಿಸುತ್ತಾರೆ. ಹೆಚ್.ಡಿ.ಕೋಟೆ, ಹುಣಸೂರು ಮುಂತಾದ ತಾಲೂಕುಗಳಲ್ಲಿರುವ ಹಾಡಿಗಳಲ್ಲಿ ಹೆಚ್ಚಿನ ಬಾಲ್ಯವಿವಾಹಗಳು ನಡೆಯುತ್ತವೆ. ಅವರ ಸಂಪ್ರದಾಯದಂತೆ ಚಿಕ್ಕ ವಯಸ್ಸಿನಲ್ಲೇ ರಕ್ತ ಸಂಬಂಧದಲ್ಲೇ ಮದುವೆ ಮಾಡುವುದು ವಾಡಿಕೆಯಾಗಿ ಬಂದಿದೆ. ಬಾಲ್ಯ ವಿವಾಹ ನಡೆಯುವುದು ಮುಂಚಿತವಾಗಿ ಗೊತ್ತಾದರೆ ಸಂಬಂಧಪಟ್ಟ ಇಲಾಖೆ ಅದನ್ನು ತಡೆಯುತ್ತದೆ. ಆದರೆ ಬಹುತೇಕ ಪ್ರಕರಣಗಳು ಗೊತ್ತಾಗುವುದೇ ಇಲ್ಲ. ಬಾಲಕಿಯರು ಗರ್ಭಿಣಿಯರಾಗಿ ಆಸ್ಪತ್ರೆಗೆ ಬಂದಾಗಲಷ್ಟೇ ಗೊತ್ತಾಗುತ್ತದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿ ಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಆರೋಗ್ಯ ಇಲಾಖೆಯು ಬಾಲ ಗರ್ಭಿಣಿಯರಿಗೆ ಅತ್ಯಾವಶ್ಯಕ ಆರೋಗ್ಯ ಸೇವೆ ನೀಡುವುದರತ್ತ ವಿಶೇಷ ಗಮನ ಹರಿಸುತ್ತದೆ. ಕೆಲವು ಹಳ್ಳಿಗಳಲ್ಲಿ ಬಾಲ್ಯ ವಿವಾಹ ನಡೆಯುವುದು ಗೊತ್ತಾದರೂ ಯಾರೂ ಸಂಬಂಧಪಟ್ಟ ಇಲಾಖೆಗೆ ತಿಳಿಸುವುದಿಲ್ಲ. ಬಾಲಗರ್ಭಿಣಿಯರು ಆಸ್ಪತ್ರೆಗೆ ಬಂದಾಗ ಆರೋಗ್ಯ ಇಲಾಖೆ ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸುವುದೇ ಪ್ರಥಮ ಮಾಹಿತಿಯಾಗಿರುತ್ತದೆ ಎಂದು ತಿಳಿಸಿದ ಈ ಅಧಿಕಾರಿಯು, ಬಾಲ್ಯ ವಿವಾಹವಾಗಿ ಬಾಲಕಿ 20 ವರ್ಷ ಆಗುವವರೆಗೂ ಗರ್ಭಿಣಿಯಾಗದಿದ್ದರೆ ಆರೋಗ್ಯ ಇಲಾಖೆ ಗಮನಕ್ಕೂ ಕೂಡ ಬಾಲ್ಯ ವಿವಾಹದ ಬಗ್ಗೆ ಮಾಹಿತಿ ಲಭ್ಯವಾಗುವುದಿಲ್ಲ. ಕೆಲವು ವಿದ್ಯಾವಂತ ಹಾಗೂ ಶ್ರೀಮಂತ ಮನೆತನಗಳಲ್ಲೇ ಬಾಲ್ಯವಿವಾಹಗಳು ನಡೆಯುತ್ತಿವೆ ಎಂದರು. ಈ ಹಿನ್ನೆಲೆಯಲ್ಲಿ ಬಾಲ್ಯ ವಿವಾಹ ತಡೆಯುವ ಸಲುವಾಗಿ ಆರೋಗ್ಯ ಇಲಾಖೆ ಮಾತ್ರವಲ್ಲದೇ, ಪೊಲೀಸ್ ಇಲಾಖೆ ಹಾಗೂ ನ್ಯಾಯಾಂಗ ಇಲಾಖೆಯೂ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರೂ ಬಾಲ್ಯ ವಿವಾಹ ನಡೆಯುತ್ತಲೇ ಇದೆ ಎಂದು ಅವರು ಹೇಳಿದರು.

ಮೈಸೂರು, ಬೆಂಗಳೂರಂತೆ ಮಾಡಿ!

ಅಭಿವೃದ್ಧಿ ಕಾರ್ಯಗಳಿಗೆ ಹಂಚಿಕೆಯಾದ ಹಣವನ್ನು ಆದಷ್ಟು ಬೇಗ ಬಳಸಿ ಕೊಳ್ಳುವಂತೆ ಮತ್ತು ಅದರ ಆಧಾರದ ಮೇಲೆ ಅಗತ್ಯವಿರುವ ಹೆಚ್ಚಿನ ಹಣವನ್ನು ಪಡೆಯುವಂತೆ ಎಐಸಿಸಿ ಮುಖ್ಯಸ್ಥರು ಆ ಪ್ರದೇಶದ ಸಾರ್ವಜನಿಕ ಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಸೂಚಿಸಿದರು. ಹಣ ಸಿಕ್ಕರೂ, ಅದನ್ನು ಬಳಸಿಕೊಳ್ಳದಿದ್ದರೆ, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುವುದಿಲ್ಲ. ಈ ವರ್ಷ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 5,000 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಅದನ್ನು ಖರ್ಚು ಮಾಡಬೇಕು. ಒದಗಿಸಿದ ಹಣವನ್ನು ಸಮಯಕ್ಕೆ ಸರಿಯಾಗಿ ಖರ್ಚು ಮಾಡುತ್ತಿಲ್ಲ ಎಂದು ಸಿದ್ದರಾಮಯ್ಯ ಮತ್ತು ಇತರ ಸಚಿವರು ದೂರಿದ್ದಾರೆ. ಇದು ಸಂಭವಿಸಬಾರದು, ಸ್ಥಳೀಯ ಶಾಸಕರು, ಸಚಿವರು ಮತ್ತು ಅಧಿಕಾರಿಗಳು ಇದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಅಭಿವೃದ್ಧಿ ಜನರನ್ನು ತಲುಪುವಂತೆ ನೋಡಿಕೊಳ್ಳ ಬೇಕು. ಕಲ್ಯಾಣ ಕರ್ನಾಟಕ ಪ್ರದೇಶವು ಶಿಕ್ಷಣದಲ್ಲಿ ಹಿಂದುಳಿದಿದೆ ಮತ್ತು ಶಿಕ್ಷಕರ ಕೊರತೆಯನ್ನು ಹೊಂದಿದೆ. ಈ ಪ್ರದೇಶದ ಏಳು ಜಿಲ್ಲೆಗಳು ಶೈಕ್ಷಣಿಕ ಸಾಧನೆಯಲ್ಲಿ ಯಾವಾಗಲೂ ಕೊನೆಯ ಸ್ಥಾನದಲ್ಲಿವೆ. ಅಲ್ಲದೆ, ಈ ಪ್ರದೇಶದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಅತ್ಯಗತ್ಯ ಎಂದು ಖರ್ಗೆ ತಿಳಿಸಿದರು.

ಸಿದ್ದರಾಮಯ್ಯನ ಅಧಿಕಾರ ಹೋಗೋದು ನಿಶ್ಚಿತ

ಜಾರಿ ಮಾಡದೆ ಜನರನ್ನು ಸಿದ್ದರಾಮಯ್ಯ ಹೆದರಿಸುತ್ತಿದ್ದರು ಎಂದರು.

ಮೂರು ತಿಂಗಳ ಒಳಗೆ ಜಾತಿಗಣತಿ ವರದಿ ಸಿದ್ಧಪಡಿಸಲಾಗುವುದು ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಆದರೆ ಈಗ ಮತ್ತೆ ಜಾತಿಗಣತಿ ಮಾಡಲು ಒಂದೂವರೆ ಲಕ್ಷ ಶಿಕ್ಷಕರು ಬೇಕಾಗುತ್ತಾರೆ. ಆದರೆ ಈಗಾಗಲೇ ಶಾಲೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಶಿಕ್ಷಕರನ್ನು ಜಾತಿಗಣತಿಗೆ ಬಳಸಿಕೊಳ್ಳಲು ಸಾಧ್ಯವಿಲ್ಲ. ಜಾತಿಗಣತಿಗೆ ಅಂಗನವಾಡಿ ಕಾರ್ಯಕರ್ತರನ್ನು ಬಳಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲ. ಹೀಗಿರು ವಾಗ ಜಾತಿಗಣತಿ ನಡೆಸಲು ಇರುವ ಮಾರ್ಗವೇನು ಎಂದು ವಿಶ್ವನಾಥ್ ಮರು ಪ್ರಶ್ನಿಸಿದರು. ಈ ಮೊದಲು ನಡೆಸಿದ ಜಾತಿಗಣತಿಯ ಎರಡು ವರ್ಷದ ಶ್ರಮ, 180 ಕೋಟಿ ರೂ. ಹಣ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತಾಯಿತು. ಜನರ ತೆರಿಗೆ ಹಣವನ್ನು ಯಾವ ರೀತಿ ದುಂದು ವೆಚ್ಚ ಮಾಡುತ್ತಿದ್ದಾರೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ ಎಂದು ಆಪಾದಿಸಿದರು.

ಧಿಕ್ಕರಿಸಿದ್ದರೆ ಹೀರೋ ಆಗುತ್ತಿದ್ದರು: ಜಾತಿಗಣತಿ ಮಾಡುವಂತೆ ಕಾಂಗ್ರೆಸ್ ಹೈಕಮಾಂಡ್ ನೀಡಿದ ಆದೇಶ ಧಿಕ್ಕರಿಸಿದ್ದರೆ ಸಿದ್ದರಾಮಯ್ಯ ಹೀರೋ ಆಗುತ್ತಿದ್ದರು. ಆದರೆ ಇಡೀ ಸರ್ಕಾರ ಒಂದು ಪಕ್ಷದ ನಾಯಕರ ತಾಳಕ್ಕೆ ಕುಣಿ ಯುತ್ತಿದೆ ಎಂದು ಟೀಕಿಸಿದರು. ನಾನು ದೇವರಾಜ ಅರಸ್ ಮಾದರಿ ಆಡಳಿತ ನೀಡುತ್ತಿರುವೆ ಎಂದು ಸಿದ್ದರಾಮಯ್ಯ ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಾರೆ.

ಆದರೆ ದೇವರಾಜ ಅರಸ್ ಅವರು ಎಲ್ಲರ ವಿರೋಧ ಧಿಕ್ಕರಿಸಿ ಹಾವನೂರು ವರದಿ ಜಾರಿ ಮಾಡಿದರು. ಇದರಿಂದ ಬಹಳಷ್ಟು ಜನರ ಆರ್ಥಿಕ ಸ್ಥಿತಿ ಬದಲಾದ ಕಾರಣ ಮನೆಯಲ್ಲಿ ಅವರ ಫೋಟೋ ಇಟ್ಟು ಪೂಜಿಸುತ್ತಾರೆ. ಅಭಿವೃದ್ಧಿ ಪರರಾದ ದೇವರಾಜ ಅರಸು ಎಲ್ಲಿ, ಭ್ರಷ್ಟಾಚಾರದ ಅಧಿಪತಿ ಸಿದ್ದರಾಮಯ್ಯ ನೀವೆಲ್ಲಿ ಎಂದು ವ್ಯಂಗ್ಯವಾಗಿ ನುಡಿದರು.

ಮಧ್ಯಾಹ್ನ 3.30 ಗಂಟೆಗೆ ಕಾಲ್ತುಳಿತ ದುರಂತ ನಡೆದರೆ; ಸಿದ್ದರಾಮಯ್ಯರ ಗಮನಕ್ಕೆ ಬಂದಿದ್ದು ಸಂಜೆ 5.30 ಗಂಟೆಗೆ!!

"ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತವಾಗಿರುವುದು ಮಧ್ಯಾಹ್ನ 3.30 ಗಂಟೆಗೆ ಆದರೆ ನನಗೆ ಸಂಜೆ 5.30 ಗಂಟೆಗೆ ವಿಚಾರ ತಿಳಿಯಿತು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಆಡಳಿತದ ಮೇಲೆ ಅವರಿಗೆ ಹಿಡಿತ ಇಲ್ಲ ಎಂಬುದನ್ನು ತೋರಿಸುತ್ತದೆ. ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಆಗಲಿ ಎಂದು ಹಾರೈಸಿದ್ದೆ, ಆದರೆ ಆರ್‌ಸಿಬಿ ವಿಜಯೋತ್ಸವದ ವೇಳೆ ಆತ ಎಲ್ಲವನ್ನು ಹದಗೆಟಿಸಿಬಿಟ್ಟರು. ಆರ್‌ಸಿಬಿಗೂ ಕರ್ನಾಟಕಕ್ಕೂ ಯಾವುದೇ ಸಂಬಂಧವಿಲ್ಲ. ಆರ್ ಸಿಬಿಯಲ್ಲಿ ಕರ್ನಾಟಕದ ಒಬ್ಬ ಆಟಗಾರ ಕೂಡ ಇಲ್ಲ. ಈ ಪ್ರಕರಣದಲ್ಲಿ ತಪ್ಪು ಮುಚ್ಚಿ ಹಾಕಲು ತಮ್ಮ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು ವಜಾ ಮಾಡಿ, ಹಿರಿಯ ಪೊಲೀಸ್ ಅಧಿಕಾರಿಗಳ ಅಮಾನತು ಮಾಡಿ, ಎಡಿಜಿಪಿ ಮಟ್ಟದ ಅಧಿಕಾರಿಗಳನ್ನು ವರ್ಗಾವರ್ಗಿ ಮಾಡಿದ್ದಾರೆ. ಗುಪ್ತಚರ ಮುಖ್ಯಸ್ಥ ಹೇಮಂತ್ ನಿಂಬಾಳ್ಕರ್ ಕಾಲ್ತುಳಿತ ಪ್ರಕರಣಕ್ಕೆ ಕಾರಣಕರ್ತ. ಆದರೆ ಇವರ ಪತ್ನಿ ಅಂಜಲಿ ನಿಂಬಾಳ್ಕರ್ ಪ್ರಭಾವ ಇದ್ದ ಕಾರಣ ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ವಿದೇಶಕ್ಕೆ ಹೋಗಲು ಅವಕಾಶ ನೀಡಿದ್ದಾರೆ. ಡಿಪಿಎಆರ್ ಕಾರ್ಯದರ್ಶಿ ಸತ್ಯವತಿ ವಿರುದ್ಧ ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ.

–ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ದಸರಾ ಹಣ ತಿಂದು ತೇಗುತ್ತಿದ್ದಾರೆ

ಮೈಸೂರು ಅರಮನೆ ಮಂಡಳಿ ಸರ್ಕಾರಕ್ಕೆ ಸೇರಿಲ್ಲ ಎನ್ನುತ್ತಾರೆ. ರಾಜ್ಯ ಮುಖ್ಯ ಕಾರ್ಯದರ್ಶಿ ಹಾಗೂ ಜಿಲ್ಲಾಧಿಕಾರಿಗೂ ಸುಬ್ರಹ್ಮಣ್ಯ ಕೇರ್ ಮಾಡಲ್ಲ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪಗೆ ವಿವರಣೆ ನೀಡಿದರೆ, ಆತನನ್ನು ಅಲ್ಲಿಂದ ತೆಗೆಯುವುದು ಕಷ್ಟ ಎಂದು ಕೈ ಚೆಲ್ಲಿ ಕೂರುತ್ತಾರೆ. ಇದು ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಯಾವುದೇ ಹಿಡಿತವಿಲ್ಲ ಎಂಬುದನ್ನು ತೋರಿಸುತ್ತದೆ ಎಂದರು.

ರಾಜ್ಯದ ಮುಖ್ಯ ಕಾರ್ಯದರ್ಶಿಯೂ 2 ಸಾವಿರ ಪಡೆಯಬಹುದು: ಗ್ಯಾರಂಟಿ ಯೋಜನೆಯಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಯಾವುದೇ ಮಾನ ದಂಡವಿಲ್ಲದ ಈ ಯೋಜನೆಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿ ಕೂಡ ಎರಡು ಸಾವಿರ ಪಡೆಯಬಹುದು ಎಂದು ದೂರಿದರು. ದಸರಾ ವೇಳೆ ಕಾಡಿನಿಂದ ನಾಡಿಗೆ ಆನೆಗಳನ್ನು ಕಾಲ್ನಡಿಗೆಯಲ್ಲಿ ಕರೆ ತನ್ನಿ. ಇದರಿಂದ ಸುತ್ತ ಮುತ್ತಲ ಊರಿನಲ್ಲಿ ಸಂಭ್ರಮ ಕಾಣಬಹುದು ಎಂದು ಸರ್ಕಾರಕ್ಕೆ ಒತ್ತಾಯ ಮಾಡಿದರೂ ಕೇಳುವ ಸೌಜನ್ಯ ಯಾರಿಗೂ ಇಲ್ಲ ಎಂದು ವಿಶ್ವನಾಥ್ ದೂರಿದರು.

ಭ್ರಷ್ಟಾಚಾರದ ಹಣೆಪಟ್ಟಿ ಕಟ್ಟಿಕೊಂಡಿರುವ ಸಿದ್ದರಾಮಯ್ಯ ಅವರನ್ನು ದೇವರಾಜ ಅರಸು ಅವರಿಗೆ ಹೋಲಿಕೆ ಮಾಡಲು ಸಾಧ್ಯವೇ ಇಲ್ಲ. ಹಗರಣಗಳ ಸರದಾರ ಎಂಬ ಬಿರುದು ಸಿದ್ದರಾಮಯ್ಯ ಅವರಿಗೆ ಸಿಕ್ಕಿದ್ದು, ಚರಿತ್ರೆಯಲ್ಲಿ ಇದು ದಾಖಲಾಗಿದೆ ಎಂದರು. ವರ್ಷಾಂತ್ಯಕ್ಕೆ ಸಿದ್ದರಾಮಯ್ಯ ಅಧಿಕಾರ ಕಳೆದುಕೊಳ್ಳುವ ಕಾರಣ ಜಾತಿಗಣತಿ ವರದಿ ಜಾರಿ ಮಾಡುವುದಾದರೂ ಹೇಗೆ ಎಂದು ಪ್ರಶ್ನಿಸಿದ ವಿಶ್ವನಾಥ್, ಡಿ.ಕೆ.ಶಿವಕುಮಾರ್ ಅಥವಾ ಮಲ್ಲಿಕಾರ್ಜುನ ಖರ್ಗೆ ಮುಂದಿನ ಮುಖ್ಯಮಂತ್ರಿ ಆಗುತ್ತಾರೆ ಎಂದು ಭವಿಷ್ಯ ನುಡಿದರು. ಸಿದ್ದರಾಮಯ್ಯ ಅಹಿಂದ ವರ್ಗಕ್ಕೂ ಉಪಕಾರ ಮಾಡಿಲ್ಲ, ಕುರುಬ ಸಮುದಾಯಕ್ಕೂ ಯಾವುದೇ ಅನುಕೂಲ ಮಾಡಿಕೊಟ್ಟಿಲ್ಲ ಎಂದು ಆರೋಪಿಸಿದರು.

ನಾಳೆಯಿಂದ ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತ

ವಿಚಾರಣೆಯನ್ನು ಜೂನ್ 24ಕ್ಕೆ ಮುಂದೂಡಲಾಯಿತು. ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, ಮುಂದಿನ ವಿಚಾರಣೆಯವರೆಗೆ ಬೈಕ್ ಟ್ಯಾಕ್ಸಿ ಸೇವೆಯನ್ನು ಬಳಸಲು ಅನುಮತಿ ನೀಡುವಂತೆ ಕೋರಿದರು. ಬೈಕ್ ಟ್ಯಾಕ್ಸಿಗಳಿಗೆ ನಿಯಮಗಳನ್ನು ರೂಪಿಸಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂದು ಸರ್ಕಾರವನ್ನು ಪ್ರಶ್ನಿಸಿದ ದ್ವಿಸದಸ್ಯ ಪೀಠವು, ಹೊಸ ನಿಯಮಗಳನ್ನು ರೂಪಿಸದ ಕಾರಣ ತಡೆಯಾಜ್ಞೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದೆ. ನ್ಯಾಯಾಲಯವು ವಿಚಾರಣೆಯನ್ನು 10 ದಿನಗಳ ವರೆಗೆ ಮುಂದೂಡಿದೆ.

ಏಪ್ರಿಲ್ 2ರಂದು ಹೊರಡಿಸಿದ ತನ್ನ ಆದೇಶದಲ್ಲಿ, ನ್ಯಾಯಾಲಯವು ಎಲ್ಲ ಬೈಕ್ ಟ್ಯಾಕ್ಸಿ ಸೇವೆಗಳನ್ನು ಆರು ವಾರಗಳ ಒಳಗೆ ನಿಲ್ಲಿಸುವಂತೆ ಆದೇಶಿಸಿತ್ತು. ಬೈಕ್ ಟ್ಯಾಕ್ಸಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ನೀಡಲಾಗಿದ್ದ ಆರು ವಾರಗಳ ಗಡುವು ಮೇ ತಿಂಗಳಲ್ಲಿ ಮುಕ್ತಾಯಗೊಳ್ಳಬೇಕಿತ್ತು. ಆದಾಗ್ಯೂ, ರಾಪಿಡೊ, ಓಲಾ ಮತ್ತು ಉಬರ್ ಸೇರಿದಂತೆ ಬೈಕ್ ಟ್ಯಾಕ್ಸಿ ನಿರ್ವಾಹಕರು ವಿಸ್ತರಣೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿದರು.

ಈ ವಿನಂತಿಯನ್ನು ಪರಿಗಣಿಸಿದ ನ್ಯಾಯಾಧೀಶರು, ಅಂತಿಮ ವಾಗಿ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಗಡುವನ್ನು ಜೂನ್ 15ರವರೆಗೆ ವಿಸ್ತರಿಸಿದರು.

'ಶೌಚಾಲಯ'ಗಳ ಬಳಕೆಗೆ ಭಾಗ್ಯವಿಲ್ಲ



(ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಪಕ್ಕದಲ್ಲಿ) ಸುಸಜ್ಜಿತ ಶೌಚಾಲಯ ನಿರ್ಮಿಸಿದ್ದರೂ ಸಾರ್ವಜನಿಕರಿಗೆ ಸದ್ಬಳಕೆಯಾಗದೆ ಪಾಳು ಬಿದ್ದಿದ್ದು, ಶೌಚಾಲಯದ ಸುತ್ತಲೂ ಗಿಡ–ಗಂಟಿಗಳು ಬೆಳೆದು ಹಾಳು ಕೊಂಪೆಯಂತಾಗಿದೆ.

ಉದ್ಘಾಟನೆಗೂ ಮುನ್ನವೇ ಕಿಟಕಿ ಗಾಜು ಪುಡಿ ಪುಡಿ...!: ವಾರ್ಡ್ ನಂ.20ರ ವ್ಯಾಪ್ತಿಯ ವಿಜಯನಗರ ವಾಟರ್ ಟ್ಯಾಂಕ್ ಸಮೀಪದಲ್ಲಿ ನೂರಾರು ಕಾರ್ಮಿಕರಿಗೆ ಹಾಗೂ ಕರ್ನಾಟಕ ಬ್ಯಾಂಕ್, ಉಪ ನೋಂದಣಾಧಿಕಾರಿಗಳ ಕಚೇರಿಗೆ ಭೇಟಿ ನೀಡುವವರ ಅನುಕೂಲವಾಗುವಂತೆ ಸ್ವಚ್ಛ ಭಾರತ್ ಯೋಜನೆಯಡಿ ಸುಮಾರು 48 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸಾರ್ವಜನಿಕ ಶೌಚಾಲಯ ಉದ್ಘಾಟನೆಗೂ ಮುನ್ನವೇ ಹಾನಿಯಾಗಿದ್ದು, ಕಟ್ಟಡದ ಕಿಟಕಿ ಗಾಜು ಪುಡಿ ಪುಡಿಯಾಗಿದೆ.

ಕೆ.ಆರ್.ಕ್ಷೇತ್ರದಲ್ಲಿ ಉದ್ಘಾಟನೆಯಾಗದ 3 ಸಾರ್ವಜನಿಕ ಶೌಚಾಲಯಗಳು: ಶೌಚಾಲಯ ನಿರ್ವಹಣೆಗೆ ಟೆಂಡರ್‌ದಾರರು ಮುಂದಾಗದಿರುವುದು ಸೇರಿದಂತೆ ಕೆಲ ಸಮಸ್ಯೆಗಳಿಂದ ವಿದ್ಯಾರಣ್ಯಪುರಂ ಅಕ್ಕಮಹಾದೇವಿ ರಸ್ತೆಯಲ್ಲಿ ನಿರ್ಮಿಸಿರುವ ಸಾರ್ವಜನಿಕ ಶೌಚಾಲಯ ಸೇರಿದಂತೆ ಕೆ.ಆರ್ ಕ್ಷೇತ್ರ ವ್ಯಾಪ್ತಿಯಲ್ಲಿ 3 ಶೌಚಾಲಯಗಳು ಉದ್ಘಾಟನೆಯಾಗಿದೆ ಪಾಳು ಬಿದ್ದಿವೆ.

ಮೈಸೂರಿಗೆ ಇನ್ನೆಲ್ಲಿ ಸ್ವಚ್ಛ ನಗರಿ ಪಟ್ಟ: ಸ್ವಚ್ಛ ನಗರಿ ಪಟ್ಟ ಕಳೆದುಕೊಂಡಿರುವ ಮೈಸೂರಿನಲ್ಲಿ ಸ್ವಚ್ಛತಾ ನಿರ್ವಹಣೆ, ಬಯಲು ಬಹಿರ್ದೆಸೆಗೆ ಮುಕ್ತಿ ನೀಡುವ ಸದುದ್ದೇಶದೊಂದಿಗೆ ನಿರ್ಮಿಸಲಾಗಿರುವ ಸಾರ್ವಜನಿಕ ಶೌಚಾಲಯಗಳು ಬಂದ್ ಆಗಿರುವುದರಿಂದ ರಸ್ತೆ ಬದಿಯಲ್ಲೇ ಮಲ–ಮೂತ್ರ ವಿಸರ್ಜನೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ದುರ್ವಾಸನೆ ಹೆಚ್ಚಾಗುತ್ತಿದೆ. ಇದೇ ರೀತಿಯಾದರೆ ಮೈಸೂರಿಗೆ ಇನ್ನೆಲ್ಲಿ ಸ್ವಚ್ಛ ನಗರಿ ಪಟ್ಟ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಕಿಡಿಕಾರಿದ್ದಾರೆ.





"ಹಾಳಾಗಿರುವ ಶೌಚಾಲಯಗಳ ದುರಸ್ಥಿಗೊಳಿಸಲಾಗುತ್ತಿದೆ. ಹೊಸ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಗೆ ಟೆಂಡರ್ ಕರೆಯಲಾಗಿದ್ದು, ಸದ್ಯದಲ್ಲಿಯೇ ಎಲ್ಲಾ ಶೌಚಾಲಯಗಳು ಸಾರ್ವಜನಿಕರ ಬಳಕೆಗೆ ಮುಕ್ತವಾಗಲಿವೆ.

–ಶಿಲ್ಪ, ಕಾರ್ಯಪಾಲಕ ಇಂಜಿನಿಯರ್, ಒಳಚರಂಡಿ ವಿಭಾಗ(ಪೂರ್ವ)

"ಲಕ್ಷ್ಮಿಪುರಂ ಠಾಣೆ ಪಕ್ಕದಲ್ಲಿರುವ ಸಾರ್ವಜನಿಕರ ಶೌಚಾಲಯವನ್ನು ಯುಜಿಡಿ ಸಮಸ್ಯೆಯಿಂದಾಗಿ ಬಂದ್ ಮಾಡಲಾಗಿದೆ. ಯುಜಿಡಿ ಸಮಸ್ಯೆ ಬಗೆಹರಿಸಿದರಷ್ಟೇ ನಿರ್ವಹಣೆ ಮಾಡಲು ಸಾಧ್ಯ. ಈ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. – ಟೆಂಡರ್‌ದಾರರು

ಮೈಸೂರು ಮಿತ್ರ ಭಾನುವಾರ 15 ಜೂನ್ 2025

ರಕ್ತದಾನ ಮಾಡಿ ಜೀವದಾನಿಗಳಾಗಿ

ಮಾಜಿ ಮೇಯರ್ ಸಂದೇಶ್‌ಸ್ವಾಮಿ ಕರೆ



ಸ್ವಯಂಪ್ರೇರಿತ ರಕ್ತದಾನಿಗಳಾದ ಯತಿರಾಜ್, ಸೈಯದ್ ನಜಮುದ್ದೀನ್, ನಾಗೇಂದ್ರ, ಬಾಲಚಂದ್ರ, ಅಕ್ಷಯ್ ಭಾರದ್ವಾಜ್, ಕೌಶಿಕ್ ಬಾರದ್ವಾಜ್, ಭರತ್, ರೇವಣ್ಣ, ಪ್ರೇಮ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ. 14– ಭಯೋತ್ಪಾದನೆ, ಹಿಂಸೆ, ಅಮಾನವೀಯತೆ ಹೆಸರಿನಲ್ಲಿ ರಕ್ತ ಹರಿಸುವ ಬದಲು ಸಾವು–ಬದುಕಿನ ನಡುವೆ ಹೋರಾಡುವವರಿಗೆ ರಕ್ತ ನೀಡುವುದು ನಿಜವಾದ ಮಾನವೀಯತೆ ಎಂದು ಮಾಜಿ ಮೇಯರ್ ಸಂದೇಶ ಸ್ವಾಮಿ ಹೇಳಿದರು.

ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ 25ಕ್ಕೂ ಹೆಚ್ಚು ಬಾರಿ ಸ್ವಯಂಪ್ರೇರಿತ ರಕ್ತದಾನ ಮಾಡಿದ ರಕ್ತದಾನಿಗಳಾದ ಯತಿರಾಜ್, ಸೈಯದ್ ನಜಮುದ್ದೀನ್, ನಾಗೇಂದ್ರ, ಬಾಲಚಂದ್ರ, ಅಕ್ಷಯ್ ಭಾರದ್ವಾಜ್, ಕೌಶಿಕ್ ಬಾರದ್ವಾಜ್, ಭರತ್, ರೇವಣ್ಣ, ಪ್ರೇಮ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ದಾನ ಮಾಡುವ ಪರಂಪರೆ ಮೊದಲಿನಿಂದ ಇದ್ದರೂ ರಕ್ತದಾನಕ್ಕೆ ತನ್ನದೇ ಆದ ಮಹತ್ವ ಇದೆ. ನೀರು, ಪೆಟ್ರೋಲ್, ಡೀಸೆಲ್ ಹೀಗೆ ಯಾವ ವಸ್ತುವನ್ನಾದರೂ ದುಡ್ಡು ಕೊಟ್ಟು ಕೊಂಡುಕೊಳ್ಳಬಹುದು. ರಕ್ತವನ್ನು ಮಾತ್ರ ಹಾಗೆ ಕೊಂಡುಕೊಳ್ಳಲು ಆಗುವುದಿಲ್ಲ. ಪ್ರತಿಯೊಬ್ಬರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡುವುದರಿಂದ ಜೀವದಾನಿಗಳಾಗಬಹುದು ಎಂದರು.

ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ರಕ್ತ ಅತ್ಯವಶ್ಯಕವಾಗಬೇಕಾಗುತ್ತದೆ. ದ್ವೇಷ, ಜನಾಂಗೀಯ ಘರ್ಷಣೆಯಿಂದ ರಕ್ತಹರಿದರೆ ಯಾವ ಪ್ರಯೋಜನವೂ ಇಲ್ಲ. ದೌರ್ಜನ್ಯದಿಂದ ರಕ್ತ ಹರಿಸುವುದು ಅನಾಗರಿಕತನ. ಜೀವದ ಬೆಲೆಯನ್ನು ಎಲ್ಲರೂ ಅರ್ಥಮಾಡಿಕೊಂಡು ತುರ್ತು ಸಂದರ್ಭಗಳಲ್ಲಿ ರಕ್ತದಾನ ಮಾಡಬೇಕು. ರಕ್ತದಾನದಿಂದ ನಿಶ್ಯಕ್ತರಾಗುತ್ತೇವೆ ಎಂಬುದು ತಪ್ಪು ಕಲ್ಪನೆ ಎಂದರು.

ಡಿವೈಎಸ್‌ಪಿ ಕಿರಣ್‌ಕುಮಾರ್ ಮಾತನಾಡಿ, ಒಂದು ಯೂನಿಟ್ ರಕ್ತದಿಂದ 3 ಜೀವವನ್ನು ಉಳಿಸಬಹುದು. ಎಲ್ಲರೂ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿ. ರಕ್ತವನ್ನು ಇನ್ನಿತರ ವಸ್ತುಗಳಂತೆ ಕೃತಕವಾಗಿ ತಯಾರಿಸಲಾಗದು. ಈ ನಿಟ್ಟಿನಲ್ಲಿ ನಡೆದ ಸಂಶೋಧನೆಗಳೂ ಫಲ ನೀಡಿಲ್ಲ. ನೆಗೆಟಿವ್ ಗ್ರೂಪ್ ರಕ್ತ ಸಿಗುವುದು ತುಂಬಾ ಅಪರೂಪವಾಗಿದ್ದು, ಇಂತಹವರು ದಾನ ಮಾಡುವುದು ಅತ್ಯಗತ್ಯವಾಗಿದೆ ಎಂದು ಹೇಳಿದರು.

ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷೆ ಹೇಮಾ ನಂದೀಶ್, ಇನ್ಸ್‌ಪೆಕ್ಟರ್ ಶಬೀರ್ ಹುಸೇನ್, ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಬ್ಲಡ್ ಆನ್‌ಕಾಲ್ ಕ್ಲಬ್ ಮೈಸೂರು ದೇವೇಂದ್ರ ಪರಿಹಾರಿಯ, ಸಮಾಜ ಸೇವಕರಾದ ರಮೇಶ್, ಸೂರಜ್, ಸದಾಶಿವ್ ಹಾಗೂ ಇನ್ನಿತರರು ಹಾಜರಿದ್ದರು.

ಸಾಧಕರಿಗೆ 'ಬಸವರತ್ನ' ಪ್ರಶಸ್ತಿ ಪ್ರದಾನ



ಶ್ರೀ ನಟರಾಜ ಸಭಾ ಭವನದಲ್ಲಿ ಸಾಧಕರಿಗೆ ಬಸವ ಜಯಂತಿ ಪ್ರಯುಕ್ತ 'ಬಸವರತ್ನ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಮೈಸೂರು, ಜೂ. 14(ಆರ್‌ಕೆ)– ಮೈಸೂರು ಶರಣ ಮಂಡಳಿ ಹಾಗೂ ಶ್ರೀ ನಟರಾಜ ಪ್ರತಿಷ್ಠಾನ ಜಂಟಿಯಾಗಿ ಹೊಸಮಠದ ಶ್ರೀ ನಟರಾಜ ಸಭಾ ಭವನದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ 7 ಮಂದಿ ಸಾಧಕರಿಗೆ ಬಸವ ಜಯಂತಿ ಪ್ರಯುಕ್ತ 'ಬಸವರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಖ್ಯಾತ ಸಾಹಿತಿ ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ), ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ. ಶಿವಸ್ವಾಮಿ, ಕರ್ನಾಟಕ ರಾಜ್ಯ ಮಹಾಮಂಡಲದ ಅಧ್ಯಕ್ಷ ಎಸ್. ಚಂದ್ರಶೇಖರ್, ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಶಿಕ್ಷಣ ಕ್ಷೇತ್ರದ ಟಿ.ಜಿ.ಆದಿಶೇಷನ್‌ಗೌಡ, ಸಮಾಜ ಸೇವಕ ರೊ. ಕೆ. ಮಂಜುನಾಥ್ ಹಾಗೂ ಸೇವಾ ಕ್ಷೇತ್ರದ ಡಾ.ದತ್ತೇಶ್ ಕುಮಾರ್ ಪ್ರಶಸ್ತಿ ಸ್ವೀಕರಿಸಿದವರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಿಪಿಕೆ ಅವರು, ಯಾವುದೇ ವ್ಯಕ್ತಿ ಪ್ರಶಸ್ತಿ ಸ್ವೀಕರಿಸುವಾಗ ಅಹಂಕಾರ ಪಡಬಾರದು ಹಾಗೆಯೇ ತನಗೆ ಬಂದ ಪ್ರಶಸ್ತಿಯನ್ನು ತಿರಸ್ಕರಿಸುವುದು ಇನ್ನೂ ದೊಡ್ಡ ಅಹಂಕಾರ. 12ನೇ ಶತಮಾನದಲ್ಲಿ ಬಸವಣ್ಣ ಅವರು ಕ್ರಾಂತಿ ಮಾಡಿದರು. ಸರ್ವೋದಯಕ್ಕಾಗಿ ಅಂದಿನ ಬಸವಾದಿ ಶರಣರು ದುಡಿದಿದ್ದಾರೆ ಎಂದ ಅವರು, ಇಂದು ನಾವೆಲ್ಲರೂ ಅವರ ಆಶಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದುವರಿಯಬೇಕಿದೆ ಎಂದು ಹೇಳಿದರು.

ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು ಹಾಗೂ ನೊಣವಿನಕೆರೆಯ ಶ್ರೀ ಕಾಡುಸಿದ್ದೇಶ್ವರ ಮಠದ ಶ್ರೀ ಅಭಿನವ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾಡಾ ಅಧ್ಯಕ್ಷ ಮರಿಸ್ವಾಮಿ, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ, ಮೈಸೂರು ಶರಣ ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಕಾರ್ಯಾಧ್ಯಕ್ಷ ಎ.ಸಿ. ಜಗದೀಶ್, ಪ್ರಧಾನ ಕಾರ್ಯದರ್ಶಿ ಬಿ. ಮಹದೇವಸ್ವಾಮಿ, ಕನ್ನಡ ಉಪನ್ಯಾಸಕಿ ಬಿ.ರಾಧಾ, ಉಪನ್ಯಾಸಕಿ ಹೆಚ್.ಬಿ. ವಿಮಲ ಜ್ಯೋತಿ, ಕಾಲೇಜು ಪ್ರಾಂಶುಪಾಲರಾದ ಸುನಿತಾ ರಾಣಿ, ಚೂಡಾಮಣಿ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬ್ರಾಹ್ಮಣ ಮಹಾಸಭಾಗೆ 2 ಲಕ್ಷ ರೂ. ದೇಣಿಗೆ



ಉದ್ಯಮಿ ದಿಲೀಪ್‌ಕುಮಾರ್ ಬ್ರಾಹ್ಮಣ ಮಹಾಸಭಾಗೆ 2 ಲಕ್ಷ ರೂ. ದೇಣಿಗೆ ನೀಡಿದರು.

ಮೈಸೂರು, ಜೂ. 14– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರೂ ಆದ ಉದ್ಯಮಿ ದಿಲೀಪ್ ಕುಮಾರ್ ಅವರು ಬ್ರಾಹ್ಮಣ ಮಹಾಸಭಾಗೆ ಎರಡು ಲಕ್ಷ ರೂ.ಗಳನ್ನು ಕಾರ್ಪಸ್ ನಿಧಿಗಾಗಿ ಮಹಾಸಭಾ ರಾಜ್ಯಾಧ್ಯಕ್ಷ ರಘನಾಥ್ ಅವರಿಗೆ ಚೆಕ್ ಮೂಲಕ ದೇಣಿಗೆ ನೀಡಿದರು.

ರಾಜ್ಯದೆಲ್ಲೆಡೆ ಬ್ರಾಹ್ಮಣರು ಮಹಾಸಭಾ ಸದಸ್ಯತ್ವ ಪಡೆದುಕೊಳ್ಳಲು ಸಂಘಟನಾ ಪರ್ವ ಅಭಿಯಾನ ಪ್ರಾರಂಭವಾಗಿದ್ದು, ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರು ಸಹ ಸದಸ್ಯರಾಗಲಿ ಎಂದು 50 ಸದಸ್ಯತ್ವದ ಶುಲ್ಕ 25 ಸಾವಿರ ರೂ.ಗಳನ್ನು ಸಹ ಗಾಯತ್ರಿ ಭವನ ಕಚೇರಿಯಲ್ಲಿ ಹಸ್ತಾಂತರಿಸಿದರು. ಇದೇ ಸಂದರ್ಭದಲ್ಲಿ ರಾಜ್ಯ ಹಿರಿಯ ಉಪಾಧ್ಯಕ್ಷ ಆರ್. ಲಕ್ಷ್ಮಿ ಕಾಂತ್ ಸೇರಿದಂತೆ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಈ.ಚೇತನ್ ಅವರಿಗೆ ಹುಟ್ಟುಹಬ್ಬದ ಶುಭಾಶಯ...



ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಈ.ಚೇತನ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕುವೆಂಪುನಗರ ನಾಗರಿಕ ವೇದಿಕೆ ವತಿಯಿಂದ ಕೆ.ಬ್ಲಾಕಿನ ಕಾಲಭೈರವೇಶ್ವರ ದೇವಸ್ಥಾನದಲ್ಲಿ ಅವರನ್ನು ಅಭಿನಂದಿಸಿ, ಶುಭಾಶಯ ಕೋರಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ನಗರಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ, ವಿಜಯ್‌ಕುಮಾರ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್‌ಗೌಡ, ಬಸವರಾಜು, ಜೋಗಪ್ಪ, ಶಿವಣ್ಣ, ಪ್ರದೀಪ್(ದೇವು), ಕೆ ಬ್ಲಾಕ್ ಹುಲಿಕೆರೆ ಬೋರೇಗೌಡ, ಶ್ರೀನಿವಾಸ್, ಉದ್ಯಮಿ ಮಣಿ, ಕೊಪ್ಪಲ್ ದೀಪು, ಈಶ್ವರ್, ಶಿವಕುಮಾರ್, ಮುಡಾ ಮಾದಪ್ಪ, ಗಜಪ್ಪನ ಕೃಷ್ಣಪ್ಪ, ಭೀಮಣ್ಣ, ಗಂಗೆ ಮರಿಯಪ್ಪ, ನಾಗಣ್ಣ ಇನ್ನಿತರರು ಉಪಸ್ಥಿತರಿದ್ದರು.

ಡಬ್ಲ್ಯುಟಿಸಿ ಫೈನಲ್: ನಾಲ್ಕೇ ದಿನಗಳಲ್ಲಿ ಮುಕ್ತಾಯ; ದ.ಆಫ್ರಿಕಾಗೆ 27 ವರ್ಷದ ನಂತರ ಟ್ರೋಫಿ



ಟ್ರೋಫಿಯೊಂದಿಗೆ ಸಂಭ್ರಮಿಸುತ್ತಿರುವ ದಕ್ಷಿಣ ಆಫ್ರಿಕಾ ತಂಡ

ಲಂಡನ್: ಈ ಬಾರಿಯ ವಿಶ್ವ ಟೆಸ್ಟ್ ಚಾಂಪಿಯನ್ಸ್ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಬಲಿಷ್ಠ ಆಸ್ಟ್ರೇಲಿಯಾವನ್ನು ಮಣಿಸುವ ಮೂಲಕ ದಕ್ಷಿಣ ಆಫ್ರಿಕಾ ತಂಡ ಮೊಟ್ಟ ಮೊದಲ ಬಾರಿಗೆ ಚಾಂಪಿಯನ್ ಪಟ್ಟಕ್ಕೇರಿದೆ. ಅಷ್ಟೇ ಅಲ್ಲ, ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ಟೂರ್ನಿಗಳಲ್ಲಿ ಬರೋಬ್ಬರಿ 27 ವರ್ಷಗಳ ನಂತರ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ.

ಐತಿಹಾಸಿಕ ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 74 ರನ್‌ಗಳ ಹಿನ್ನಡೆ ಅನುಭವಿಸಿದರೂ, ನಂತರ ಮೈಕೊಡವಿ ಎದ್ದ ಆಫ್ರಿಕಾ ಪಡೆ ದಾಖಲೆಯ ಮೊತ್ತ ಬೆನ್ನತ್ತಿ ಗೆದ್ದಿದೆ.

ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ 212 ರನ್ ಗಳಿಸಿತ್ತು. ಇದಕ್ಕುತ್ತರವಾಗಿ ಆಫ್ರಿಕಾ ಪಡೆ 138 ರನ್‌ಗೆ ಸರ್ವಪತನ ಕಂಡಿತ್ತು. ಉತ್ತಮ ಮುನ್ನಡೆಯೊಂದಿಗೆ ಮತ್ತೆ ಬ್ಯಾಟಿಂಗ್ ಮಾಡಿದ ಆಸಿಸ್, ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ (43 ರನ್) ಹಾಗೂ ಬಾಲಂಗೋಚಿ ಬ್ಯಾಟರ್ ಮಿಚೆಲ್ ಸ್ಟಾರ್ಕ್ (ಅಜೇಯ 58 ರನ್) ನೆರವಿನಿಂದ 2ನೇ ಇನಿಂಗ್ಸ್‌ನಲ್ಲಿ 207 ರನ್ ಗಳಿಸಿತ್ತು.

ಮೊದಲ ಇನ್ನಿಂಗ್ಸ್‌ಸಲ್ಲಿ ಹಿನ್ನಡೆ ಅನುಭವಿಸಿದ್ದ ಆಫ್ರಿಕನ್ನರಿಗೆ 282ರನ್‌ಗಳ ಕಠಿಣ ಗುರಿ ಎದುರಾಗಿತ್ತು. ಮರ್ಕರಂ 136 ರನ್ ಗಳಿಸಿದರೆ, ತೆಂಬಾ ಬವುಮಾ 66 ರನ್ ಗಳಿಸಿದರು. ಹೀಗಾಗಿ 83.4 ಓವರ್‌ಗಳಲ್ಲಿ 5ವಿಕೆಟ್‌ಗೆ 285 ರನ್ ಗಳಿಸಿದ ಆಫ್ರಿಕಾ, ಇನ್ನೂ ಒಂದು ದಿನ ಬಾಕಿ ಇರುವಂತೆಯೇ ಪ್ಯಾಕ್ ಕಮಿನ್ಸ್ ಬಳಗವನ್ನು ಮಣಿಸಿತು. ಐಸಿಸಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ದಕ್ಷಿಣ ಆಫ್ರಿಕಾಗೆ ಒಲಿದ ಎರಡನೇ ಪ್ರಶಸ್ತಿಯಾಗಿದೆ. ಈ ತಂಡ 1998ರಲ್ಲಿ ಚಾಂಪಿಯನ್ಸ್ ಟ್ರೋಫಿಯನ್ನು ಎತ್ತಿ ಹಿಡಿದಿತ್ತು.

ಸತತ 7 ಟೆಸ್ಟ್ ಗೆಲುವು: ನಾಯಕ ಟೆಂಬಾ ಬವುಮಾ ಅವರ ನಾಯಕತ್ವದಲ್ಲಿ ತಂಡವು ಸತತ ಏಳು ಟೆಸ್ಟ್ ಪಂದ್ಯಗಳನ್ನು ಗೆದ್ದು 2025 ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್‌ಗೆ ತಲುಪಿತು. ಆದರೆ ಈ ಬಾರಿಯೂ ದಕ್ಷಿಣ ಆಫ್ರಿಕಾ ದೊಡ್ಡ ಪಂದ್ಯದಲ್ಲಿ ಎಡವುತ್ತದೆ ಎಂದು ಎಲ್ಲರೂ ಹೇಳುತ್ತಿದ್ದರು. ಮುಂದಿರುವ ಆಸ್ಟ್ರೇಲಿಯಾ ತಂಡವನ್ನು ನೋಡಿದಾಗ, ಎಲ್ಲರಿಗೂ ಹಾಗೆ ಅನಿಸುತ್ತಿತ್ತು. ಏಕೆಂದರೆ ಐಸಿಸಿ ಪಂದ್ಯಾವಳಿಗಳಲ್ಲಿ ಆಸ್ಟ್ರೇಲಿಯಾವನ್ನು ಸೋಲಿಸುವುದು ತುಂಬಾ ಕಷ್ಟ, ಆದರೆ ಪ್ರಶಸ್ತಿ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತನ್ನ ಆಟವನ್ನು ಆಡಿದ ರೀತಿ ಎಲ್ಲರನ್ನೂ ಬೆರಗುಗೊಳಿಸಿತು. ದಕ್ಷಿಣ ಆಫ್ರಿಕಾ ಚೋಕರ್ಸ್ ಕಳಂಕವನ್ನು ತೊಳೆದು ಈ ದೀರ್ಘ ಸ್ವರೂಪದ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮಾರ್ಕ್ರಮ್ ಶತಕದ ವೈಭವ: ನಾಲ್ಕು ದಿನಗಳ ಪಂದ್ಯವನ್ನು 213/2 ಸ್ಕೋರ್‌ನೊಂದಿಗೆ ಆರಂಭಿಸಿದ ದಕ್ಷಿಣ ಆಫ್ರಿಕಾ, 85 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 283 ರನ್ ಗಳಿಸುವ ಮೂಲಕ ಜಯ ಸಾಧಿಸಿತು. ಮಾರ್ಕ್ರಮ್ (207 ಎಸೆತಗಳಲ್ಲಿ 14 ಬೌಂಡರಿಗಳೊಂದಿಗೆ 136) ಶತಕದೊಂದಿಗೆ ಸಫಾರಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಟೆಂಬಾ ಬವುಮಾ (134 ಎಸೆತಗಳಲ್ಲಿ 5 ಬೌಂಡರಿಗಳೊಂದಿಗೆ 66) ಮತ್ತು ಡೇವಿಡ್ ಬೆಡಿಂಗ್ಹ್ಯಾಮ್ (49 ಎಸೆತಗಳಲ್ಲಿ 4 ಬೌಂಡರಿಗಳೊಂದಿಗೆ 21 ನಾಟ್ ಔಟ್) ಅವರಿಗೆ ಬೆಂಬಲ ನೀಡಿದರು. ಆಸ್ಟ್ರೇಲಿಯಾದ ಬೌಲರ್‌ಗಳಲ್ಲಿ ಮಿಚೆಲ್ ಸ್ಟಾರ್ಕ್ ಮೂರು ವಿಕೆಟ್ ಪಡೆದರು. ಪ್ಯಾಟ್ ಕಮ್ಮಿನ್ಸ್ ಮತ್ತು ಜೋಶ್ ಹ್ಯಾಜಲ್‌ವುಡ್ ತಲಾ ಒಂದು ವಿಕೆಟ್ ಪಡೆದರು.

ಏರ್ ಇಂಡಿಯಾ ವಿಮಾನ ಅಪಘಾತ

11 ಮೃತರ ಡಿಎನ್‌ಎ ಮಾದರಿಗಳು ಹೊಂದಿಕೆ, ಶೀಘ್ರದಲ್ಲೇ ಶವಗಳ ಹಸ್ತಾಂತರ!

ಅಹಮದಾಬಾದ್: ಅಹಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದ ಮೃತಪಟ್ಟ 11 ಜನರ ಡಿಎನ್‌ಎ ಮತ್ತು ಅವರ ಕುಟುಂಬ ಸದಸ್ಯರ ಡಿಎನ್‌ಎ ಹೊಂದಿಕೆಯಾಗಿದೆ ಎಂದು ಬಿ.ಜೆ. ವೈದ್ಯಕೀಯ ಕಾಲೇಜಿನ ಹಿರಿಯ ಅಧಿಕಾರಿಯೊಬ್ಬರು ದೃಢಪಡಿಸಿದ್ದಾರೆ.

ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯ್ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟ ಸ್ವಲ್ಪ ಸಮಯದ ನಂತರ ಏರ್ ಇಂಡಿಯಾದ ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನ ಜೂನ್ 12ರಂದು ಅಪಘಾತಕ್ಕೀಡಾಯಿತು. ಈ ವಿಮಾನದಲ್ಲಿ 230 ಪ್ರಯಾಣಿಕರು ಮತ್ತು 12 ಸಿಬ್ಬಂದಿ ಇದ್ದು ಅಪಘಾತದಲ್ಲಿ 241 ಜನರು ಪ್ರಾಣ ಕಳೆದುಕೊಂಡಿದ್ದರು. ಆದರೆ ಅದೃಷ್ಟವಶಾತ್ ಒಬ್ಬ ಪ್ರಯಾಣಿಕ ಮಾತ್ರ ಬದುಕುಳಿದಿದ್ದರು. ಅಪಘಾತದ ತನಿಖೆಗಾಗಿ ಸರ್ಕಾರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.

ಸಿವಿಲ್ ಆಸ್ಪತ್ರೆಯ ಹೆಚ್ಚುವರಿ ವೈದ್ಯಕೀಯ ಅಧೀಕ್ಷಕ ಡಾ. ರಜನೀಶ್ ಪಟೇಲ್ ಮಾತನಾಡಿ, ಇಲ್ಲಿಯವರೆಗೆ 11 ಮೃತರ ಡಿಎನ್‌ಎ ಮಾದರಿಗಳು ಹೊಂದಿಕೆಯಾಗುತ್ತವೆ. ಒಬ್ಬ ಮೃತರ ದೇಹವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗಿದೆ. ಇಂದು ಇನ್ನೂ ಎರಡು ಶವಗಳನ್ನು ಹಸ್ತಾಂತರಿಸಲಾಗುವುದು. ಇದು ನಿಧಾನ ಪ್ರಕ್ರಿಯೆ ಮತ್ತು ಇದನ್ನು ಎಚ್ಚರಿಕೆಯಿಂದ ಮಾಡಬೇಕಾಗಿದೆ. ಇಂದು ವಿಮಾನದ ಹಿಂಭಾಗದಿಂದ ಮತ್ತೊಂದು ಶವವನ್ನು ನಾವು ಹೊರತೆಗೆದಿದ್ದೇವೆ. ಬದುಕುಳಿದ ಏಕೈಕ ವ್ಯಕ್ತಿ ಆರೋಗ್ಯವಾಗಿದ್ದು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಡಾ. ಪಟೇಲ್ ಮತ್ತಷ್ಟು ತಿಳಿಸಿದರು.

ವಿಡಿಯೊ ಚಿತ್ರೀಕರಿಸಿದ ಯುವಕನಿಂದ ಹೇಳಿಕೆ ದಾಖಲು

ಅಹಮದಾಬಾದ್: ಏರ್ ಇಂಡಿಯಾ ವಿಮಾನ ಪತನದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ, ವಿವಿಧ ಊಹಾಪೋಹಗಳಿಗೆ ಕಾರಣವಾಗಿದ್ದ ಬೆನ್ನಲ್ಲೇ ಆ ವಿಡಿಯೊ ಚಿತ್ರೀಕರಿಸಿದ್ದ 17 ವರ್ಷದ ಯುವಕ ಆರ್ಯನ್, ಅಹಮದಾಬಾದ್ ಪೊಲೀಸರ ಮುಂದೆ ಸಾಕ್ಷಿದಾರನಾಗಿ ಹೇಳಿಕೆ ದಾಖಲಿಸಿದ್ದಾನೆ. ವಿಮಾನ ಹಾರುತ್ತಿರುವುದನ್ನು ಮನೆಯ ಮಹಡಿಯಲ್ಲಿ ನಿಂತು ಆರ್ಯನ್ ಚಿತ್ರೀಕರಿಸುತ್ತಿದ್ದ ವೇಳೆಯಲ್ಲೇ ವಿಮಾನ ಪತನಗೊಂಡಿದೆ. ಈ ವಿಡಿಯೊ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ ವಿವಿಧ ಊಹಾಪೋಹಗಳು ಸೃಷ್ಟಿಯಾಗಿದ್ದವು. ಅಲ್ಲದೇ, ಪೊಲೀಸರು ಆರ್ಯನ್‌ನನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ ಎಂದೂ ಹೇಳಲಾಗಿತ್ತು.

ಈ ಹಿನ್ನೆಲೆಯಲ್ಲಿ ಪೊಲೀಸರು ಮಾಹಿತಿ ನೀಡಿ, ಯಾರನ್ನೂ ಬಂಧಿಸಲಾಗಿಲ್ಲ ಯುವಕ ಆರ್ಯನ್ ತನ್ನ ತಂದೆಯ ಜತೆ ಬಂದು ಸಾಕ್ಷಿದಾರನಾಗಿ ಹೇಳಿಕೆ ನೀಡಿದ್ದಾನೆ ಎಂದಿದ್ದಾರೆ.

ಕಾಂತಾರ ಚಾಪ್ಟರ್–1 ಶೂಟಿಂಗ್ ವೇಳೆ ಮತ್ತೊಂದು ಅವಘಡ

ರಿಷಬ್ ಶೆಟ್ಟಿ ಸೇರಿ 30 ಮಂದಿ ಅಪಾಯದಿಂದ ಪಾರು

ಶಿವಮೊಗ್ಗ, ಜೂ.14– ಕಾಂತಾರ ಚಾಪ್ಟರ್–1 ಚಿತ್ರೀಕರಣದ ವೇಳೆ ಮತ್ತೊಂದು ಅವಘಡ ಸಂಭವಿಸಿದೆ ಮಾಸ್ತಿಕಟ್ಟೆಯ ಮಾಣಿ ಜಲಾಶಯದಲ್ಲಿ ಶೂಟಿಂಗ್ ದೋಣಿಯೇ ಮುಗುಚಿಹೋಗಿದೆ. ಕ್ಯಾಮೆರಾಮೆನ್, ನಟ ರಿಷಬ್ ಶೆಟ್ಟಿ ಸೇರಿದಂತೆ 30 ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ದೋಣಿ ಮಗುಚಿದ ಬಳಿಕ ಕಲಾವಿದರು ಹಾಗೂ ತಂತ್ರಜ್ಞರು ಈಜುತ್ತಲೇ ದಡ ಸೇರಿಕೊಂಡಿದ್ದಾರೆ. ಕಳೆದ ವಾರ ವಿಜು ವಿ.ಕೆ. ನಿಧನದ ಬಳಿಕ ಸಿನಿಮಾದ ಕೊನೆಯ ಹಂತದ ಶೂಟಿಂಗ್ ಮುಂದುವರಿದ್ದು, ಮಾಣಿ ಜಲಾಶಯದ ಬಳಿ 15 ದಿನಗಳ ಕಾಲ ಶೂಟಿಂಗ್ ಮಾಡಲು ಯೋಜನೆ ರೂಪಿಸಲಾಗಿತ್ತು. ಆದರೆ, ಈಗ ಕ್ಯಾಮೆರಾ ಸೇರಿದಂತೆ ಬೋಟ್‌ನಲ್ಲಿದ್ದ ಎಲ್ಲಾ ಪ್ರಾಪರ್ಟೀಸ್ ನೀರು ಪಾಲಾಗಿದೆ.

ಮೊದಲು ಹಾಸನದಲ್ಲಿ ನಡೆದ ಶೂಟಿಂಗ್‌ನಲ್ಲಿ ಬೆಂಕಿ ಹಾಕಿದ್ದಕ್ಕೆ ಮರಗಳಿಗೆ ಹಾನಿಯಾಗಿತ್ತು. ಆ ನಂತರ ಕಾಂತಾರ ಚಿತ್ರತಂಡದ ವಿರುದ್ಧ ಅಕ್ರಮವಾಗಿ ಮರ ಕಡಿದು, ಸ್ಫೋಟಕ ಬಳಸಿ, ನಿಯಮ ಉಲ್ಲಂಘನೆ ಮಾಡಿದ ಆರೋಪ ಕೇಳಿಬಂದಿತು.

ಬಳಿಕ ಚಿತ್ರತಂಡದ ಕಲಾವಿದರನ್ನು ಕರೆದೊಯ್ಯುತ್ತಿದ್ದ ಬಸ್ ಕೊಲ್ಲೂರಿನಲ್ಲಿ ಅಪಘಾತವಾಗಿ ಬಸ್‌ನಲ್ಲಿದ್ದ ಜ್ಯೂನಿಯರ್ ಆರ್ಟಿಸ್ಟ್ ಗಾಯಗೊಂಡಿದ್ದರು. ನಂತರ ಸೌಪರ್ಣಿಕಾ ನದಿಯಲ್ಲಿ ಈಜಲು ಹೋಗಿ ಸಹ ಕಲಾವಿದ ಕಪಿಲ್ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರೆ, ಮದುವೆ ಸಮಾರಂಭದಲ್ಲಿ ಭಾಗಿಯಾಗಿದ್ದ ನಟ ರಾಕೇಶ್ ಪೂಜಾರಿ ಹೃದಯಾಘಾತದಿಂದ ಸಾವು ಕಂಡಿದ್ದರು. ಈಗ ವಾರದ ಹಿಂದೆ ಕೇರಳದ ಕಲಾವಿದ ವಿ.ಕೆ ವಿಜು ಹೃದಯಾಘಾತದಿಂದ ಸಾವನ್ನಪ್ಪಿರುವುದು ಚಿತ್ರತಂಡವನ್ನು ಚಿಂತೆಗೀಡಾಗುವಂತೆ ಮಾಡಿತ್ತು. ಈಗ ಇಡ ಸಿನಿಮಾ ತಂಡದ ಪ್ರಮುಖರು ಇದ್ದ ದೋಣಿ ಮುಗುಚಿ ಬಿದ್ದಿರುವ ಘಟನೆ ನಡೆದಿದೆ.

ಬೆಂಗಳೂರು ಕಾಲ್ತುಳಿತದಂತಹ ಘಟನೆ ತಪ್ಪಿಸಲು ಮಾರ್ಗಸೂಚಿ; ಮೂವರು ಸದಸ್ಯರ ಸಮಿತಿ ರಚಿಸಿದ ಬಿಸಿಸಿಐ



ನವದೆಹಲಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭ್ರಮಾಚರಣೆ ಸಂದರ್ಭದಲ್ಲಿ ನಡೆದ ಕಾಲ್ತುಳಿತದಂತಹ ಘಟನೆಗಳನ್ನು ತಡೆಯುವ ಉದ್ದೇಶದಿಂದ ಮಾರ್ಗಸೂಚಿಗಳನ್ನು ರೂಪಿಸಲು ಬಿಸಿಸಿಐ ಶನಿವಾರ ಕಾರ್ಯದರ್ಶಿ ದೇವಜಿತ್ ಸೈಕಿಯಾ ನೇತೃತ್ವದಲ್ಲಿ ಮೂವರ ಸದಸ್ಯರ ಸಮಿತಿಯನ್ನು ರಚಿಸಿದೆ.

ಸೈಕಿಯಾ ಅಲ್ಲದೇ, ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಮತ್ತು ಖಜಾಂಚಿ ಪ್ರಭತೇಜ್ ಸಿಂಗ್ ಭಾಟಿಯಾ ಸಮಿತಿಯ ಇತರ ಸದಸ್ಯರಾಗಿದ್ದಾರೆ. ಇದು 15 ದಿನಗಳಲ್ಲಿ ಮಾರ್ಗಸೂಚಿಗಳನ್ನು ರೂಪಿಸುತ್ತದೆ.

ಬೆಂಗಳೂರಿನಲ್ಲಿ ನಡೆದ ಸಂಭ್ರಮಾಚರಣೆ ಸಂದರ್ಭದಲ್ಲಿ ಸಂಭವಿಸಿದ ಘಟನೆಯ ಹಿನ್ನೆಲೆಯಲ್ಲಿ ಭವಿಷ್ಯದಲ್ಲಿ ಇಂತಹ ಘಟನೆ ತಡೆಯುವ ಉದ್ದೇಶದಿಂದ ಸಮಗ್ರ ಮಾರ್ಗಸೂಚಿಗಳನ್ನು ರೂಪಿಸಲು ಸಮಿತಿಯನ್ನು ರಚಿಸಲು ಉನ್ನತ ಸಮಿತಿ ನಿರ್ಧರಿಸಿದೆ ಎಂದು ಬಿಸಿಸಿಐ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದೆ.


ಜೂನ್ 4 ರಂದು ಆರ್‌ಸಿಬಿ ಆಯೋಜಿಸಿದ್ದ ಸಂಭ್ರಮಾಚರಣೆಯಲ್ಲಿ ಭಾಗವಹಿಸಲು ಸುಮಾರು 2.5 ಲಕ್ಷ ಜನರು ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜಮಾಯಿಸಿದ್ದಾಗ ಉಂಟಾದ ಕಾಲ್ತುಳಿತದಿಂದಾಗಿ 11 ಅಭಿಮಾನಿಗಳು ಸಾವನ್ನಪ್ಪಿದರು ಮತ್ತು 56 ಮಂದಿ ಗಾಯಗೊಂಡಿದ್ದರು.

ಆರ್‌ಸಿಬಿ ಮತ್ತು ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ವಿರುದ್ಧ ಎಫ್‌ಐಆರ್ ದಾಖಲಾಗಿರುವುದರಿಂದ ಕರ್ನಾಟಕ ಹೈಕೋರ್ಟ್ ಈ ವಿಷಯದ ಬಗ್ಗೆ ತನಿಖೆ ನಡೆಸಲು ನಿವೃತ್ತ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ಆಯೋಗವನ್ನು ರಚಿಸಿದೆ.

ದೇಶ - ವಿದೇಶ


ಇಸ್ರೇಲ್ ಮೇಲೆ ಇರಾನ್ ಮಾರಕ ಕ್ಷಿಪಣಿ ದಾಳಿ; ಮೂವರು ಸಾವು

ಟೆಹ್ರಾನ್: ಇರಾನ್ ಇಂದು (ಶನಿವಾರ) ಮುಂಜಾನೆ ಇಸ್ರೇಲ್ ಮೇಲೆ ಪ್ರತೀಕಾರದ ಕ್ಷಿಪಣಿ ದಾಳಿಗಳನ್ನು ನಡೆಸಿತು. ಇರಾನ್ ನಡೆಸಿದ ತೀವ್ರವಾದ ದಾಳಿಗೆ ಮೂವರು ಮೃತಪಟ್ಟಿದ್ದು, ಡಜನ್‌ಗಟ್ಟಲೆ ಜನರು ಗಾಯಗೊಂಡರು ಎಂದು ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.



ಇರಾನ್‌ನಿಂದ ಬಂದ ದಾಳಿಗಳಲ್ಲಿ ಡಜನ್‌ಗಟ್ಟಲೆ ಕ್ಷಿಪಣಿಗಳನ್ನು ಹಾರಿಸಲಾಗಿದೆ ಎಂದು ಇಸ್ರೇಲಿ ಸೇನೆ ತಿಳಿಸಿದೆ. ಟೆಲ್ ಅವೀವ್‌ನ ಮಧ್ಯಭಾಗದಲ್ಲಿರುವ ಗಗನಚುಂಬಿ ಕಟ್ಟಡಗಳ ಮೇಲೆ ಹೊಗೆ ಆವರಿಸುತ್ತಿತ್ತು ಎಂದು ಎಎಫ್‌ಪಿ ಪತ್ರಕರ್ತರೊಬ್ಬರು ವರದಿ ಮಾಡಿದ್ದಾರೆ. ಇರಾನ್‌ನ ಕ್ರಾಂತಿಕಾರಿ ಗಾರ್ಡ್ ಇಸ್ರೇಲ್‌ನಲ್ಲಿ ಡಜನ್‌ಗಟ್ಟಲೆ ಗುರಿಗಳ ಮೇಲೆ ದಾಳಿ ಮಾಡಿದೆ ಎಂದು ಹೇಳಲಾಗಿದೆ. ಇರಾನಿನ ಕ್ಷಿಪಣಿ ದಾಳಿಯ ನಂತರ ತನ್ನ ತಂಡಗಳು ಪ್ರತಿಕ್ರಿಯಿಸುತ್ತಿವೆ. ಇದರಲ್ಲಿ ಬಹುಮಹಡಿ ಕಟ್ಟಡದಲ್ಲಿ ಸಿಲುಕಿರುವ ಜನರನ್ನು ರಕ್ಷಿಸುವ ಕೆಲಸವೂ ಸೇರಿದೆ ಎಂದು ಇಸ್ರೇಲ್‌ನ ಅಗ್ನಿಶಾಮಕ ಸೇವೆ ತಿಳಿಸಿದೆ. ಟೆಲ್ ಅವೀವ್‌ನ ಡೌನ್‌ಟೌನ್‌ನಲ್ಲಿರುವ ಗಗನಚುಂಬಿ ಕಟ್ಟಡಗಳ ಮೇಲೆ ಹೊಗೆ ಬರುತ್ತಿದೆ ಎಂದು ಎಎಫ್‌ಪಿ ಪತ್ರಕರ್ತೆ ವರದಿ ಮಾಡಿದ್ದಾರೆ, ಇರಾನ್‌ನ ಕ್ರಾಂತಿಕಾರಿ ಗಾರ್ಡ್ ಇಸ್ರೇಲ್‌ನಲ್ಲಿ ಡಜನ್‌ಗಟ್ಟಲೆ ಗುರಿಗಳ ಮೇಲೆ ದಾಳಿ ಮಾಡಿದೆ.

ಏರ್ ಇಂಡಿಯಾ ಅಪಘಾತದ ಹಿಂದೆ ಟರ್ಕಿ ಕೈವಾಡ



ಅಹಮದಾಬಾದ್: ಅಹಮದಾಬಾದ್ ವಿಮಾನ ಅಪಘಾತದಲ್ಲಿ ವಿದೇಶಿ ಪಿತೂರಿ ಇದೆ. ಭಾರತದ ವಾಯುಯಾನ ಕ್ಷೇತ್ರದಲ್ಲಿ ವಿದೇಶಿ ಭಾಗಿಯಾಗಿರುವ ಬಗ್ಗೆ ಯೋಗ ಗುರು ಬಾಬಾ ರಾಮದೇವ್ ಕಳವಳ ವ್ಯಕ್ತಪಡಿಸಿದರು. ವರದಿಗಾರರೊಂದಿಗೆ ಮಾತನಾಡಿದ ಅವರು, ವಿಮಾನದ ನಿರ್ವಹಣೆ ಮತ್ತು ಸೇವೆಗೆ ಟರ್ಕಿಶ್ ಏಜೆನ್ಸಿಯೊಂದು ಕಾರಣ ಎಂಬ ಅನುಮಾನವನ್ನು ವ್ಯಕ್ತಪಡಿಸಿದರು. ಅಪಘಾತವು ಸಂಪೂರ್ಣವಾಗಿ ಆಕಸ್ಮಿಕವಲ್ಲ ಎಂದು ಸುಳಿವು ನೀಡಿದರು. ಟರ್ಕಿಶ್ ಕಂಪನಿ ಟರ್ಕಿಶ್ ಟೆಕ್ನಿಕ್ ಜಾಗತಿಕ ವಿಮಾನಯಾನ ಸೇವಾ ಪೂರೈಕೆದಾರ. ಏರ್ ಇಂಡಿಯಾ ಮತ್ತು ಇಂಡಿಗೊ ಸೇರಿದಂತೆ ಭಾರತದ ಕೆಲವು ವಿಮಾನಯಾನ ಸಂಸ್ಥೆಗಳು ಸಹ ಈ ಕಂಪನಿಯ ಕ್ಲೈಂಟ್‌ಗಳಾಗಿವೆ. ಏರ್ ಇಂಡಿಯಾದ ವಿಷಯದಲ್ಲಿ, ಬೋಯಿಂಗ್ 777 ವಿಮಾನಗಳ ನಿರ್ವಹಣೆಗಾಗಿ ವಿಮಾನಯಾನ ಸಂಸ್ಥೆಯು ತನ್ನ ವಿಮಾನಗಳನ್ನು ಟರ್ಕಿಶ್ ಟೆಕ್ನಿಕ್‌ಗೆ ಕಳುಹಿಸುತ್ತಿತ್ತು. ಏರ್ ಇಂಡಿಯಾ ವಿಮಾನಗಳ ನಿರ್ವಹಣೆಯನ್ನು ಟರ್ಕಿಶ್ ಕಂಪನಿ ಹಾಗೂ ಭಾರತದ ಏರ್ ಇಂಡಿಯಾ ಎಂಜಿನಿಯರಿಂಗ್ ಸರ್ವೀಸಸ್ ಲಿಮಿಟೆಡ್ ಮತ್ತು ಇತರ ಕೆಲವು ದೇಶಗಳಿಂದ ಪಡೆಯುತ್ತಿತ್ತು. ಇಂಡೋ–ಪಾಕಿಸ್ತಾನ ಮಿಲಿಟರಿ ಸಂಘರ್ಷದ ಸಮಯದಲ್ಲಿ, ಟರ್ಕಿ ಪಾಕಿಸ್ತಾನವನ್ನು ಬೆಂಬಲಿಸಿತ್ತು.

ದೇಶದೊಳಗೆ ಅನುಮಾನಾಸ್ಪದ ಚಟುವಟಿಕೆ ಕಂಡರೆ ಸೇನೆಗೆ ತಿಳಿಸುವಂತೆ ಕೋರಿದ ಇರಾನ್

ಟೆಹರಾನ್: ಮಧ್ಯಪ್ರಾಚ್ಯ ದೇಶಗಳಲ್ಲಿ ಮತ್ತೆ ಯುದ್ಧದ ಕಾರ್ಮೋಡ ಕವಿದಿದೆ. ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಉಭಯ ದೇಶಗಳು ಸತತ ದಾಳಿ, ಪ್ರತಿದಾಳಿ ನಡೆಸುತ್ತಿವೆ.



ಇಸ್ರೇಲ್‌ನ ಗುಪ್ತಚರ ದಳ ಮೊಸಾದ್ ಇರಾನ್‌ನೊಳಗೆ ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಣೆ ಮಾಡುವ ಮೂಲಕ ಭಾರಿ ದಾಳಿ ಮಾಡಲು ಯೋಜನೆ ರೂಪಿಸಿದೆ ಎನ್ನುವ ಗುಪ್ತಚರ ವರದಿಗಳ ಆಧಾರದ ಮೇಲೆ ಅನುಮಾನಾಸ್ಪದ ಚಟುವಟಿಕೆಗಳು ಕಂಡರೆ ತಿಳಿಸುವಂತೆ ಇರಾನ್ ಸೇನೆಯು ತನ್ನ ಜನರಲ್ಲಿ ಮನವಿ ಮಾಡಿದೆ.

ದೇಶದ ಭದ್ರತೆಯನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಯಾವುದೇ ರೀತಿಯ ಅನುಮಾನಾಸ್ಪದ ಚಟುವಟಿಕೆ ಅಥವಾ ಟ್ರಕ್, ವ್ಯಾನ್ ಹಾಗೂ ಕಾರ್ಗೋ ವಾಹನಗಳ ಸಂಚಾರವು ಸಂದೇಹ ಬರುವಂತೆ ಕಂಡರೆ ತಕ್ಷಣವೇ ಗುಪ್ತಚರ ಸಚಿವಾಲಯದ ಪ್ರಧಾನ ಕಚೇರಿಗೆ ಅಥವಾ ಐಆರ್‌ಜಿಸಿ ಗುಪ್ತಚರ ಸಂಸ್ಥೆಗೆ ಮಾಹಿತಿ ನೀಡುವಂತೆ ಸೇನೆಯು ಕೋರಿಕೊಂಡಿದೆ.

ರೈಲಿನಲ್ಲಿ ಯುವತಿಗೆ ಮರ್ಮಾಂಗ ತೋರಿಸಿ ವಿಕೃತಿ: ವೃದ್ಧನಿಗೆ ಚಪ್ಪಲಿ ಸೇವೆ

ತ್ರಿಪುರಾ: ರೈಲಿನ ಸಾಮಾನ್ಯ ಬೋಗಿಯಲ್ಲಿ ಕುಳಿತಿದ್ದ 15 ವರ್ಷದ ಬಾಲಕಿಗೆ ತನ್ನ ಮರ್ಮಾಂಗ ತೋರಿಸಿ ವೃದ್ಧ ವ್ಯಕ್ತಿಯೋರ್ವ ವಿಕೃತಿ ಮೆರೆದಿರುವ ಘಟನೆ ತ್ರಿಪುರಾದಲ್ಲಿ ನಡೆದಿದೆ. ಅಗರ್ತಲಾ ಮತ್ತು ಫಿರೋಜ್‌ಪುರದ ನಡುವೆ ಚಲಿಸುವ ತ್ರಿಪುರ ಸುಂದರಿ ಎಕ್ಸ್‌ಪ್ರೆಸ್‌ನಲ್ಲಿ ಈ ಘಟನೆ ನಡೆದಿದ್ದು ನಂತರ ಬಾಲಕಿ ತನ್ನ ಚಪ್ಪಲಿಯಿಂದ ವ್ಯಕ್ತಿಗೆ ಥಳಿಸಿದ್ದಾಳೆ.



ಘಟನೆ ಸಂಬಂಧ ತ್ರಿಪುರಾದ ಧರ್ಮನಗರ ಪಟ್ಟಣದಲ್ಲಿ ಸರ್ಕಾರಿ ರೈಲ್ವೆ ಪೊಲೀಸರು ಅಮರ್‌ಪುರದ ನಿವಾಸಿ ಮೊಹಮ್ಮದ್ ಇಬ್ರಾಹಿಂ ಎಂಬ ವ್ಯಕ್ತಿಯನ್ನು ಬಂಧಿಸಿದ್ದಾರೆ. ಅಂಬಾಸ್ಸಾ ನಿಲ್ದಾಣದಲ್ಲಿ ರೈಲಿನಿಂದ ಹಲವು ಪ್ರಯಾಣಿಕರು ಇಳಿದು ಹೋಗಿದ್ದರು. ರೈಲು ಸುರಂಗದ ಮೂಲಕ ಹಾದುಹೋಗುತ್ತಿದ್ದಾಗ ಈ ಪರಿಸ್ಥಿತಿಯನ್ನು ಬಳಸಿಕೊಂಡ ಇಬ್ರಾಹಿಂ ಬಾಲಕಿಯ ಮುಂದೆ ಕುಳಿತು ತನ್ನ ಮರ್ಮಾಂಗವನ್ನು ಪ್ರದರ್ಶಿಸಿದ್ದಾನೆ. ಮೊಹಮ್ಮದ್ ಇಬ್ರಾಹಿಂನ ನೀಚ ಕೃತ್ಯದ ವೀಡಿಯೊವನ್ನು ಸಂತ್ರಸ್ತೆ ರೆಕಾರ್ಡ್ ಮಾಡಿಕೊಂಡಿದ್ದಾಳೆ. ಈ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ವಿಷಯವು ಇತರ ಪ್ರಯಾಣಿಕರ ಗಮನಕ್ಕೆ ಬಂದಿದ್ದು ಆರೋಪಿಗೆ ಹಿಡಿದು ಪದೇ ಪದೆ ಕಪಾಳಮೋಕ್ಷ ಮಾಡಿದ್ದಾರೆ. ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ನೀಡಿದ್ದಕ್ಕಾಗಿ ಮಹಿಳೆಯೊಬ್ಬರು ಇಬ್ರಾಹಿಂಗೆ ಚಪ್ಪಲಿಯಿಂದ ಹೊಡೆಯುತ್ತಿರುವುದು ಕಂಡುಬಂದಿದೆ.

98 ಕೆಜಿ ಚಿನ್ನದ ಕಮೋಡ್ ಕದ್ದವರು 5 ವರ್ಷದ ನಂತರ ಜೈಲುಪಾಲು

ಲಂಡನ್: ಲಂಡನ್‌ನಲ್ಲಿರುವ ವಿನ್‌ಸ್ಟನ್ ಚರ್ಚಿಲ್ ಜನ್ಮಸ್ಥಳದಲ್ಲಿ ಪ್ರದರ್ಶನಕ್ಕೆ ಇಡಲಾಗಿದ್ದ 18 ಕ್ಯಾರೆಟ್ ಚಿನ್ನದ ಕಮೋಡ್ ಅನ್ನು ಕದ್ದಿದ್ದ ಇಬ್ಬರು ಕಳ್ಳರಿಗೆ ನ್ಯಾಯಾಲಯ ಜೈಲು ಶಿಕ್ಷೆ ಪ್ರಕಟಿಸಿದೆ. ಇಟಲಿಯ ಕಲಾವಿದ ಮರಿಝಿಯೊ ಕ್ಯಾಟೆಲನ್ ಎಂಬುವವರು ಸಿದ್ಧಪಡಿಸಿದ್ದ 'ಅಮೆರಿಕ' ಎಂಬ ಹೆಸರಿನ ಈ ಚಿನ್ನದ ಶೌಚಾಲಯವು ಸಂಪೂರ್ಣ ಕಾರ್ಯನಿರ್ವಹಿಸು ವಂತೆ ಸಿದ್ಧಪಡಿಸಲಾಗಿತ್ತು. ಇಂಗ್ಲೆಂಡ್‌ನ ದಕ್ಷಿಣ ಭಾಗದಲ್ಲಿ ರುವ ಚರ್ಚಿಲ್ ಕುಟುಂಬಕ್ಕೆ ಸೇರಿದ ಬ್ಲೆನ್‌ಹೀಮ್ ಅರಮನೆಯಲ್ಲಿ ಇದನ್ನು ಇಡಲಾಗಿತ್ತು. ಯುನೆಸ್ಕೊ ಪಾರಂಪರಿಕ ತಾಣ ಸ್ಥಾನಮಾನ ಪಡೆದಿದ್ದ ಈ ಸ್ಥಳವು ಪ್ರವಾಸಿಗರ ಮೆಚ್ಚಿನ ಸ್ಥಳಗಳಲ್ಲಿ ಒಂದಾಗಿತ್ತು. 2019ರ ಸೆಪ್ಟೆಂಬರ್ 14ರ ಸಂಜೆ ಬಂದ ಐವರು ತಂಡವು, ಅರಮನೆಯ ಕಿಟಕಿ ಹಾಗೂ ಬಾಗಿಲು ಒಡೆದು ಒಳಗೆ ಪ್ರವೇಶಿಸಿ ಚಿನ್ನದ ಕಮೋಡ್ ಅನ್ನು ಹೊತ್ತೊಯ್ದಿದಿತ್ತು.




ಆರೋಪಿ ಜೇಮ್ಸ್ ಶೀನ್ (40) ತನ್ನ ತಪ್ಪನ್ನು ನ್ಯಾಯಾಧೀಶರ ಮುಂದೆ ಒಪ್ಪಿಕೊಂಡಿದ್ದಾನೆ. ಮೈಕಲ್ ಜೋನ್ಸ್ (39) ತಪ್ಪು ಕೂಡಾ ಸಾಬೀತಾಗಿದೆ. ಈ ಹಿಂದೆಯೂ ಇವರು ಹಲವು ಕಳ್ಳತನ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಪಟ್ಟಿದ್ದಾರೆ. ಹಿಂದಿನ 20 ವರ್ಷ ಹಾಗೂ ಈಗಿನ 4 ವರ್ಷಗಳ ಜೈಲುಶಿಕ್ಷೆಯನ್ನು ನ್ಯಾಯಾಲಯ ವಿಧಿಸಿದೆ.

ಹಾರಂಗಿಯಿಂದ 4 ಸಾವಿರ ಕ್ಯುಸೆಕ್ ನೀರು ಬಿಡುಗಡೆ

ಮಡಿಕೇರಿ/ಕುಶಾಲನಗರ ಜೂ.14– ಹಾರಂಗಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಒಳ ಹರಿವು ಹೆಚ್ಚಾಗಿದ್ದು, ಜಲಾಶಯ ಬಹುತೇಕ ಭರ್ತಿಯಾಗುವ ಹಂತಕ್ಕೆ ತಲುಪಿದೆ. ಈ ನಡುವೆ ಮುಂಜಾಗ್ರತಾ ಕ್ರಮವಾಗಿ ಬೆಳಿಗ್ಗೆ 11.30ರ ವೇಳೆ ಒಟ್ಟು 4 ಸಾವಿರ ಕ್ಯುಸೆಕ್ ಪ್ರಮಾಣದ ನೀರನ್ನು ನದಿ ಪಾತ್ರಕ್ಕೆ ಬಿಡುಗಡೆ ಮಾಡಲಾಗಿದೆ.

ಕ್ರೆಸ್ಟ್ ಗೇಟ್ ಮೂಲಕ ನೀರು ಹರಿಸುವ ಮುನ್ನ ಜಲಾಶಯಕ್ಕೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಲಾಯಿತು. ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದರು. ಬಳಿಕ 3 ಬಾರಿ ಮುನ್ನೆಚ್ಚರಿಕಾ ಸೈರನ್ ಮೊಳಗಿಸಿ ಕ್ರೆಸ್ಟ್ ಗೇಟ್ ಮೂಲಕ 2 ಸಾವಿರ ಹಾಗೂ ವಿದ್ಯುತ್ ಉತ್ಪಾದನಾ ನಾಲೆಯ ಮೂಲಕ 2 ಸಾವಿರ ಕ್ಯುಸೆಕ್ ನೀರನ್ನು ಹರಿಯ ಬಿಡಲಾಯಿತು. ಮುಂಭಾಗದ ಸಂಪರ್ಕ ಸೇತುವೆಯಲ್ಲಿ ಸ್ಥಳೀಯರು ಮತ್ತು ಪ್ರವಾಸಿಗರು ಜಲಾಶಯದಿಂದ ನೀರು ಹರಿಸುವ ರಮಣೀಯ ದೃಶ್ಯವನ್ನು ಕಣ್ತುಂಬಿಕೊಂಡರು. ಮೇ ತಿಂಗಳ ಕೊನೆಯ ವಾರ ಸುರಿದ ಕುಂಭ ದ್ರೋಣ ಮಳೆಯಲ್ಲಿ ಹಾರಂಗಿ ಜಲಾಶಯ ಬಹುತೇಕ ಭರ್ತಿಯಾಗಿದ್ದು, ಜೂನ್ ತಿಂಗಳ ಮೊದಲ ವಾರದಲ್ಲಿ ಎಸ್ಕೇಪ್ ಗೇಟ್ ಮೂಲಕ ನದಿಗೆ 2 ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಗಿತ್ತು.



ಹಾರಂಗಿಯಿಂದ 4 ಸಾವಿರ ಕ್ಯುಸೆಕ್ ನೀರನ್ನು ನದಿ ಪಾತ್ರಕ್ಕೆ ಇಂದು ಬಿಡುಗಡೆ ಮಾಡಲಾಗಿದೆ.

ಇದೀಗ 2ನೇ ಬಾರಿಗೆ ಜಲಾಶಯದಿಂದ ನದಿ ಪಾತ್ರಕ್ಕೆ ನೀರನ್ನು ಹರಿಸಲಾಗುತ್ತಿದ್ದು, ಜಲಾಶಯ ಸಂಪೂರ್ಣ ಭರ್ತಿಯಾಗಲು ಕೇವಲ 8 ಅಡಿಗಳಷ್ಟು ಮಾತ್ರವೇ ಬಾಕಿ ಇದೆ

ಮುನ್ನೆಚ್ಚರಿಕೆ ವಹಿಸಿ : ಜಲಾನಯನ ಪ್ರದೇಶಗಳಾದ ಮಡಿಕೇರಿ ನಗರ, ಗಾಳಿಬೀಡು, ವಣಚಲು, ಕಾಲೂರು, ಸೂರ್ಲಬ್ಬಿ ಮತ್ತಿತ್ತರ ಗ್ರಾಮಗಳಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಹಾರಂಗಿ ಜಲಾಶಯದ ನೀರಿನ ಮೂಲಗಳಾದ ಹಟ್ಟಿಹೊಳೆ ಮತ್ತು ಮಾದಾಪುರ ಹೊಳೆಗಳಲ್ಲಿ ನೀರಿನ ಮಟ್ಟ ಏರಿಕೆ ಕಂಡಿದೆ. ಈ ನದಿಗಳ ನೀರು ಹಾರಂಗಿ ಹಿನ್ನೀರಿಗೆ ಸೇರುತ್ತಿದ್ದು, ಜಲಾಶಯದ ಒಳಹರಿವಿನ ಪ್ರಮಾಣ ಸಹಜವಾಗಿಯೇ ಏರಿಕೆಯಾಗುತ್ತಿದೆ. ಮಾತ್ರವಲ್ಲದೇ, ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮತ್ತಷ್ಟು ಮಳೆಯಾಗುವ ಸಂಭವವಿದೆ. ಇದರಿಂದಾಗಿ ಒಳಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಲಕ್ಷಣಗಳಿವೆ. ಜಲಾಶಯ ಹಾರಂಗಿ ಮತ್ತು ಕಾವೇರಿ ನದಿ ಪಾತ್ರದಲ್ಲಿರುವ ಮತ್ತು ದಂಡೆಯಲ್ಲಿ ವಾಸಿಸುತ್ತಿರುವವರು ತಮ್ಮ ಆಸ್ತಿ ಪಾಸ್ತಿ ಹಾಗೂ ಜನ ಜಾನುವಾರು ರಕ್ಷಣೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಹಾರಂಗಿ ಪುನರ್ವಸತಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಪುಟ್ಟಸ್ವಾಮಿ ಕೋರಿದ್ದಾರೆ.

ಶಿಕ್ಷಣದೊಂದಿಗೆ ಕ್ರೀಡೆಗಳಲ್ಲೂ ಹೆಚ್ಚು ಆಸಕ್ತರಾಗಿ : ದೇವಯ್ಯ

ವಿರಾಜಪೇಟೆ, ಜೂ.14–ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಕ್ರೀಡೆಗಳಲ್ಲೂ ಹೆಚ್ಚು ಆಸಕ್ತರಾಗುವಂತೆ ಬೆಂಗಳೂರಿನ ಸ್ಟಾರ್‌ಲಾ ಪಾರ್ಟನರ್ಸ್‌ನ ವ್ಯವಸ್ಥಾಪಕ ಪಾಲುದಾರ ಪಿ.ಎಂ.ದೇವಯ್ಯ ತಿಳಿಸಿದ್ದಾರೆ.

ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್‌ನ 23ನೇ ಕಾಲೇಜು ವಾರ್ಷಿಕೋತ್ಸವದಲ್ಲಿ ಮಾತನಾಡಿ ಸಾಧನೆಯ ಪಥದಲ್ಲಿರುವ ಕ್ರೀಡಾಪಟುಗಳು ಇನ್ನೂ ಹೆಚ್ಚು ಸಾಧನೆ ಮಾಡುವಂತಾಗಲಿ ಎಂದು ಆಶಿಸಿದರು.

ಜಿಲ್ಲೆಯಲ್ಲಿ ವೃತ್ತಿಪರ ದಂತ ಆರೋಗ್ಯ ರಕ್ಷಣಾ ಸಂಸ್ಥೆಯನ್ನು ಬೆಳೆಸುವಲ್ಲಿ ದಂತ ವೈದ್ಯಕೀಯ ಕಾಲೇಜಿನ ಡಾ.ಸುನೀಲ್ ಮುದ್ದಯ್ಯ ಅವರ ಪ್ರಯತ್ನ ಮಹತ್ವವಾದುದು ಎಂದು ಶ್ಲಾಘಿಸಿದ ಅವರು, ದಂತ ಸಂಸ್ಥೆಯ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಕ್ರೀಡೆಯಲ್ಲಿ ಮಾಡಿರುವ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಕಾಲೇಜಿನ ಡೀನ್ ಪ್ರೊ. ಡಾ.ಸುನಿಲ್ ಮುದ್ದಯ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದು, ನಮ್ಮ ಸಂಸ್ಥೆಯಿಂದ ಕಲಿತು ನುರಿತ ವೈದ್ಯರು ದೇಶದ ಅನೇಕ ಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹರ್ಷಿಸಿದರು. ಡೆಂಟಲ್ ಸೈನ್ಸಸ್‌ನ ಉಪ ಪ್ರಾಂಶುಪಾಲ ಪ್ರೊ. ಡಾ, ಜಿತೇಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ವಿವಿಧ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮಾವೇಶಗಳು ಹಾಗೂ ಕ್ರೀಡಾಕೂಟಗಳಲ್ಲಿ 30 ಹೆಚ್ಚು ಬಹುಮಾನಗಳನ್ನು ಪಡೆದುಕೊಂಡಿರುವುದು ಕಾಲೇಜಿನ ಉತ್ತಮ ಸಾಧನೆಯಾಗಿದೆ ಎಂದರು.

ಕೂರ್ಗ್ ಡೆಂಟಲ್ ಮತ್ತು ಮೆಡಿಕಲ್ ಸೈನ್ಸಸ್ ಟ್ರಸ್ಟ್ ಹಾಗೂ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್‌ನ ಸ್ಥಾಪಕ ಸದಸ್ಯರಾದ ರಾಣಿ ಅಯ್ಯಪ್ಪ ಅವರ ಇತ್ತೀಚಿನ ನಿಧನಕ್ಕೆ ಸಭೆಯ ಮೊದಲಿಗೆ ಸಂತಾಪ ಸೂಚಿಸಲಾಯಿತು. ವಿವಿಧ ಕ್ರೀಡೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ವೇದಿಕೆಯಲ್ಲಿ ಬಹುಮಾನ ವಿತರಿಸಲಾಯಿತು.

ಸಭೆಯಲ್ಲಿ ಉಪಸ್ಥಿತರಿದ್ದ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷ ಎಂ.ಕೆ.ಸಮರ್ಥ್ ಕಾರ್ಯಪ್ಪ ಸ್ವಾಗತಿಸಿದರೆ ಕಾರ್ಯದರ್ಶಿ ಪಿ.ನಂದನಾ ವಂದಿಸಿದರು. ಕೊನೆಯಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್‌ನ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಮಕ್ಕಳ ಜ್ಞಾನಾರ್ಜನೆಗೆ ಅವಶ್ಯಕ ವಿಚಾರಗಳನ್ನು ಬಾಲ್ಯದಲ್ಲೇ ನೀಡಬೇಕು



ಕುಂಜಿಲ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕ – ಪೋಷಕರ ಸಂಘದ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷ ಶಾಹಿದ್ ಅಲಿ ಮಾತನಾಡಿದರು.

ನಾಪೋಕ್ಲು: ಮಕ್ಕಳ ಜ್ಞಾನಾರ್ಜನೆಗೆ ಅವಶ್ಯಕವಾದ ವಿಚಾರಗಳನ್ನು ಬಾಲ್ಯದಲ್ಲೇ ನೀಡಬೇಕು. ತಪ್ಪಿದಲ್ಲಿ ನಾವು ಅಸಹಾಯಕರಾಗಬೇಕಾಗುತ್ತದೆ ಎಂದು ಕುಂಜಿಲ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ವಿದ್ಯಾ ಸಂಸ್ಥೆ ಅಧ್ಯಕ್ಷ ಶಾಹಿದ್ ಅಲಿ ಹೇಳಿದ್ದಾರೆ.

ಇಲ್ಲಿಗೆ ಸಮೀಪದ ಕುಂಜಿಲ ಆಕ್ಸ್‌ಫರ್ಡ್ ಶಾಲೆಯಲ್ಲಿ ನಡೆದ ಶಿಕ್ಷಕ–ಪೋಷಕರ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಹೆತ್ತವರು ಶಾಲೆಗೆ ಮಕ್ಕಳನ್ನು ಸೇರಿಸುವುದಷ್ಟೇ ಅಲ್ಲ ತಮ್ಮ ಕರ್ತವ್ಯದ ಜೊತೆಗೆ ಅವರ ಜವಾಬ್ದಾರಿ ವಹಿಸಿಕೊಂಡು ಉತ್ಕೃಷ್ಟ ನಾಗರಿಕರನ್ನಾಗಿ ಬೆಳೆಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೋಷಕರ ಸಹಕಾರ ಅತ್ಯಗತ್ಯ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲ ಹಂತದಲ್ಲಿ 17 ವಿದ್ಯಾರ್ಥಿಗಳಲ್ಲಿ 15 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಇದೀಗ ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದು, ಶಾಲೆಗೆ, ಊರಿಗೆ ಕೀರ್ತಿಯನ್ನು ತಂದಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕ ಗಳಿಸಿರುವ ಅಫ್ರಾ ಪರ್ವೀನ್‌ಳನ್ನು ಅಭಿನಂದಿಸಿ ಶಾಲಾ ನಿಯಮಗಳ ಬಗ್ಗೆ ಮುಖ್ಯ ಶಿಕ್ಷಕಿ ಎಂ.ಎಂ.ಕವಿತಾ ತಿಳುವಳಿಕೆ ನೀಡಿದರು.

ವಿದ್ಯಾರ್ಥಿನಿಯರಾದ ಪಿ.ಎ ಹನ್ನತ್, ಪಿ.ವೈ.ನಾಸಿಹ, ಬಿ.ಎ.ಸಮ್ರೀನ ಪ್ರಾರ್ಥನೆಯನ್ನು ಮಾಡಿ ವಿದ್ಯಾರ್ಥಿನಿ ಮುಹಮ್ಮದ್ ಮಿಫ್ತ ಸ್ವಾಗತಿಸಿ, ಮುಹಮ್ಮದ್ ಫಾಹೀಜ್. ಎಂ.ಆರ್.ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಮುಕ್ಕೋಡ್ಲು ಗ್ರಾಮ

ಮಡಿಕೇರಿ, ಜೂ.14–ಜಿಲ್ಲಾ ಕೇಂದ್ರ ಸ್ಥಾನವಾದ ಮಡಿಕೇರಿಯಿಂದ ಕೇವಲ 15 ಕಿ.ಮೀ ದೂರದಲ್ಲಿರುವ ಮುಕ್ಕೋಡ್ಲು ಗ್ರಾಮ ಕಳೆದ ಹಲವು ದಶಕಗಳಿಂದ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ರಾಜಕೀಯವಾಗಿ ಹೆಚ್ಚು ಪ್ರಭಾವಿ ಗ್ರಾಮವಾಗಿದ್ದರೂ ಜನಪ್ರತಿನಿಧಿಗಳ ಆಸಕ್ತಿ ಈ ಗ್ರಾಮಕ್ಕೆ ವರವಾಗಿ ದೊರೆತ್ತಿಲ್ಲ.

ಮುಕ್ಕೋಡ್ಲುವಿನ ಕಲ್ಲುಕೊಟ್ಟುವರೆಗಿನ ರಸ್ತೆ ಸಂಪೂರ್ಣವಾಗಿ ಹೊಂಡ ಗುಂಡಿಗಳಿಂದ ಕೂಡಿದ್ದು, ವಾಹನಗಳ ಸಂಚಾರ ಅಸಾಧ್ಯವಾಗಿದೆ. ಮುಕ್ಕೋಡ್ಲು ಮೂಲಕ ಪ್ರಖ್ಯಾತ ಪ್ರವಾಸಿತಾಣ ಮಾಂದಲಪಟ್ಟಿ ಹಾಗೂ ಸೋಮವಾರಪೇಟೆ ತಾಲೂಕಿನ ಶಾಂತಳ್ಳಿಗೂ ಈ ರಸ್ತೆ ಸಂಪರ್ಕ ಕಲ್ಪಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಾವುದೇ ಅನುದಾನ ಮುಕ್ಕೋಡ್ಲು ಭಾಗದ ಗ್ರಾಮೀಣ ರಸ್ತೆಯ ಅಭಿವೃದ್ಧಿಗೆ ವಿನಿಯೋಗವಾಗಿಲ್ಲ ಎನ್ನುವ ಆರೋಪ ಗ್ರಾಮಸ್ಥರದ್ದಾಗಿದೆ.

ಮುಕ್ಕೋಡ್ಲು ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ನೂರಾರು ಗ್ರಾಮಸ್ಥರು ನೆಲೆಸಿದ್ದರೂ ರಸ್ತೆ ಸೇತುವೆಯಂಥ ತಾಲೂಕಿನ ಮುಕೋಡ್ಲು ಗ್ರಾಮಕ್ಕೆ ತೆರಳುವ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಸ್ಥಳೀಯ ಗ್ರಾಮಸ್ಥರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಸೌಲಭ್ಯಗಳು ಇಲ್ಲಿನ ಜನರಿಗೆ ಮರೀಚಿಕೆಯಾಗಿದ್ದು, ಸೂಕ್ತ ರಸ್ತೆಗಳಿಲ್ಲದೆ ಸಕಾಲದಲ್ಲಿ ವಾಹನಗಳ ಸಂಪರ್ಕ ಅಸಾಧ್ಯವಾಗಿದೆ. ಮಳೆಗಾಲದಲ್ಲಿ ಅನಾರೋಗ್ಯದಿಂದ ಬಳಲುತ್ತಿರುವವರನ್ನು ಹಾಗೂ ಅನಾಹುತಕ್ಕೆ ಸಿಲುಕುವವರನ್ನು ಸ್ಥಳಾಂತರ ಮಾಡಲು ಅಸಾಧ್ಯವಾಗಿದೆ. ವಿದ್ಯುತ್ ಸಂಪರ್ಕ ಕಡಿತಗೊಂಡರಂತೂ ವಾರ ಪೂರ್ತಿ ಕತ್ತಲಿನಲ್ಲೇ ಜೀವನ ಸಾಗಿಸಬೇಕು. ಗ್ರಾಮಕ್ಕೆ ಮೊಬೈಲ್ ನೆಟ್‌ವರ್ಕ್ ಸೇವೆ ಮರೀಚಿಕೆಯಾಗಿದೆ. ಬೆಟ್ಟ ಹತ್ತಿದರೆ ಮಾತ್ರ ಸ್ವಲ್ಪ ನೆಟ್ ವರ್ಕ್ ಸಿಗುತ್ತದೆ, ಸಂಕಷ್ಟದ ಕಾಲದಲ್ಲಿ ನೆಟ್ ವರ್ಕ್‌ಗಾಗಿ ಬೆಟ್ಟ ಮತ್ತು ಮರ ಹತ್ತಿ ಸರ್ಕಸ್ ಮಾಡಬೇಕಾಗುತ್ತದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ. ರಸ್ತೆಗಳ ದುರಸ್ತಿ ಕಾರ್ಯ ಸೇರಿದಂತೆ ಮೂಲ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಿದ್ದಲ್ಲಿ ತೀವ್ರ ರೀತಿಯ ಹೋರಾಟವನ್ನು ರೂಪಿಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.



ರಸ್ತೆಗಳ ದುರಸ್ತಿ ಕಾರ್ಯ ಸೇರಿದಂತೆ ಮೂಲ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಗ್ರಾಮಸ್ಥರಿಂದ ಮೌನ ಪ್ರತಿಭಟನೆ.

ಜಾನಪದ ಕೃತಿಗಳ ಪುಸ್ತಕ ಬಹುಮಾನಕ್ಕೆ ಆಹ್ವಾನ

ಮಡಿಕೇರಿ: ಜಾನಪದ ಅಕಾಡೆಮಿಯು ಕಳೆದ ಸಾಲಿನ ಜ.1 ರಿಂದ ಡಿ.31ರ ವರೆಗೆ ಪ್ರಥಮ ಆವೃತ್ತಿಯಲ್ಲಿ ಮುದ್ರಣಗೊಂಡಿರುವ (ತಾಂತ್ರಿಕ ಹಾಗೂ ಪೂರ್ವಭಾವಿ ಪುಟಗಳನ್ನು ಹೊರತುಪಡಿಸಿ) ಕನಿಷ್ಠ 150 ಪುಟಗಳಿಗೂ ಮೇಲ್ಪಟ್ಟಿರುವಂತೆ, ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಗದ್ಯ, ಪದ್ಯ, ವಿಚಾರ–ವಿಮರ್ಶೆ–ಸಂಶೋಧನೆ, ಸಂಕೀರ್ಣ ಸೇರಿ 4 ಪ್ರಕಾರಗಳ ಅತ್ಯುತ್ತಮ ಜಾನಪದ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಯಡಿಯಲ್ಲಿ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಲಾಗಿದೆ.

ಲೇಖಕರು, ಪ್ರಕಾಶಕರು, ಸಂಪಾದಕರು ತಮ್ಮ ಕೃತಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002 ಇವರಿಗೆ ಜೂ.30 ರೊಳಗೆ ತಲುಪುವಂತೆ ಖುದ್ದಾಗಿ, ಕೊರಿಯರ್ ಅಥವಾ ಅಂಚೆ ಮೂಲಕ ಕಳುಹಿಸಿಕೊಡಲು ಕೋರಿದೆ. ಈ ಪುಸ್ತಕವು ತಜ್ಞರಿಂದ ಪ್ರಕಾರವಾರು ಆಯ್ಕೆಯಾದಲ್ಲಿ, ಪುಸ್ತಕ ಬಹುಮಾನಕ್ಕೆ ಲೇಖಕರಿಂದ ಉಳಿದಂತೆ 3 ಪ್ರತಿಗಳನ್ನು ಮೌಲ್ಯಮಾಪಕರ ಪರಿಶೀಲನೆಗೆ ತರಿಸಿಕೊಳ್ಳಲಾಗುವುದು ಎಂದು ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ತಿಳಿಸಿದ್ದಾರೆ.

ವಿದ್ಯುತ್ ಕಂಬದೊಂದಿಗೆ ಕೆಳಬಿದ್ದು ಕಾರ್ಮಿಕರಿಬ್ಬರಿಗೆ ತೀವ್ರ ಗಾಯ

ಸುಂಟಿಕೊಪ್ಪ: ವಿದ್ಯುತ್ ಕಂಬವೇರಿ ಕೆಲಸ ಮಾಡುತ್ತಿದ್ದಾಗ ಏಕಾಏಕಿ ಕಂಬ ಉರುಳಿ ಬಿದ್ದು, ಗುತ್ತಿಗೆ ಕಾರ್ಮಿಕನೊಬ್ಬ ತೀವ್ರವಾಗಿ ಗಾಯಗೊಂಡಿರುವ ಘಟನೆಯೊಂದು ನಡೆದಿದೆ.

ಹುಣಸೂರು ತಾಲೂಕಿನ ಐತನಳ್ಳಿ ಗ್ರಾಮದ ನಂದೀಶ(32) ಗಂಭೀರ ಗಾಯಗೊಂಡ ಯುವಕನಾಗಿದ್ದಾನೆ. ವಿದ್ಯುತ್ ಕಾಮಗಾರಿಯ ಗುತ್ತಿಗೆ ಪಡೆದುಕೊಂಡಿದ್ದ ಸಂಸ್ಥೆಯ ಗುತ್ತಿಗೆ ಕಾರ್ಮಿಕ ನಂದೀಶ್ ಗಣೇಶ್ ಕ್ಯಾಂಟೀನ್ ಮುಂಭಾಗದ ಹೆದ್ದಾರಿ ಬದಿಯ ಚರಂಡಿ ಬದಿಯಲ್ಲಿ ನೆಡಲಾಗಿದ್ದ ಹೊಸ ಕಂಬವನ್ನು ಏರಿ ಇನ್ನೊಂದು ಕಂಬದಿಂದ ಅಳವಡಿಸಲಾಗುತ್ತಿದ್ದ ವಿದ್ಯುತ್ ವಯರ್ ಅನ್ನು ಎಳೆಯುತ್ತಿದ್ದ ವೇಳೆ ಹೊಸ ಕಂಬ ನೆಲಕ್ಕುರುಳಿದೆ. ಅದರೊಂದಿಗೆ ನಂದೀಶ್ ಕಂಬದ ಕೆಳಗೆ ಬಿದ್ದಿದ್ದಾರೆ. ಕಂಬಕ್ಕೆ ಅಳವಡಿಸಿದ್ದ ಉಕ್ಕಿನ ಸಲಾಕೆ ನಂದೀಶ್ ಅವರ ಸೊಂಟದ ಭಾಗಕ್ಕೆ ಚುಚ್ಚಿದ ಪರಿಣಾಮ ಗಂಭೀರವಾಗಿ ಗಾಯಗೊಂಡ ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಯ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಇದೇ ವೇಳೆ ಈ ಕಂಬದ ಸಮೀಪದ ಮತ್ತೊಂದು ಕಂಬದಲ್ಲಿದ್ದ ಇನ್ನೊಬ್ಬ ಗುತ್ತಿಗೆ ಕಾರ್ಮಿಕ ಯೋಗೇಶ್ ಎಂಬುವರು ಕೂಡ ಕೆಳಗೆ ಬಿದ್ದು ಕೈ ಮುರಿದುಕೊಂಡಿದ್ದಾರೆ.

ನಿರ್ಲಕ್ಷ್ಯಕ್ಕೆ ಆಕ್ರೋಶ : ಈ ವ್ಯಾಪ್ತಿಯಲ್ಲಿ ಅಳವಡಿಸಿರುವ ಎಲ್ಲ ವಿದ್ಯುತ್ ಕಂಬಗಳು ಕೇವಲ 2 ಅಡಿಗಳ ಆಳದಲ್ಲಿದ್ದು, ಈಗಾಗಲೇ ಆಳವಿಲ್ಲದೇ ವಾಲುತ್ತಿವೆ. ಇಂತಹ ಅಪಾಯದ ಕಂಬಗಳ ಮೇಲೆ ಹತ್ತಿ ಗುತ್ತಿಗೆ ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವುದು ಭಯಾನಕ ಎನಿಸಿದೆ. ಕೂಡಲೇ ಅವೈಜ್ಞಾನಿಕ ಮಾದರಿಯಲ್ಲಿ ಕಂಬ ನೆಟ್ಟಿರುವ ಗುತ್ತಿಗೆದಾರ ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತು ಗೊಳಿಸಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಗ್ರಾಪಂ ಅಧ್ಯಕ್ಷ ಪಿ.ಆರ್.ಸುನಿಲ್ ಕುಮಾರ್, ಜಿಪಂ ಮಾಜಿ ಸದಸ್ಯ ಪಿ.ಎಂ. ಲತೀಫ್, ಪೊಲೀಸ್ ಸಿಬ್ಬಂದಿ, ಸೆಸ್ಕ್ ಕಿರಿಯ ಅಭಿಯಂತರ ಲವ ಭೇಟಿ ಪರಿಶೀಲನೆ ನಡೆಸಿದ್ದಾರೆ. ಗುತ್ತಿಗೆ ಕಾರ್ಮಿಕರನ್ನು ಕರೆತಂದ ಮೇಲ್ವಿ ಚಾರಕರ ಮೇಲೆ ನಿರ್ಲಕ್ಷ್ಯ ಆರೋಪದಡಿ ಸುಂಟಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕೆಳ ಬಿದ್ದಿರುವ ಲೈಟ್ ಕಂಬ.

ಪೋಲೀಸರಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾ

ಗುಂಡ್ಲುಪೇಟೆ, ಜೂ–14 (ಸೋಮ್.ಜಿ) ಸಂಚಾರ ನಿರ್ವಹಣೆ ಮತ್ತು ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಜಾಥಾ ಪಟ್ಟಣ ಠಾಣೆ ಪೋಲೀಸರು ನಡೆಸಿದರು.

ಪಟ್ಟಣದ ವಿಶ್ವಗುರು ಶ್ರೀ ಬಸವೇಶ್ವರ ವೃತ್ತದ ಬಳಿ ಶ್ರೀ ಮದ್ದಾನೇಶ್ವರ ಶಾಲೆ ಮತ್ತು ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಕಿರಿಯ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಕನ್ನಡ ಸಂಘಟನೆಗಳ ಸದಸ್ಯರ ಜೊತೆಗೂಡಿ ಆಯೋಜಿಸಿದ್ದ ಜಾಥಾಕ್ಕೆ ಡಿವೈಎಸ್‌ಪಿ ಲಕ್ಷ್ಮಯ್ಯ ಚಾಲನೆ ನೀಡಿ, ಪ್ರತಿ ಯೊಬ್ಬರೂ ಸಂಚಾರಿ ನಿಯಮ ಪಾಲಿಸುವುದರಿಂದ ಅಮೂಲ್ಯ ಜೀವಗಳನ್ನು ಉಳಿಸಬಹುದಾಗಿದೆ ಎಂದರು.

ಬೈಕ್ ಸವಾರರು ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಮಾಡುವುದರಿಂದ ತಲೆಗೆ ಪೆಟ್ಟುಬಿದ್ದು ಸಾವಿಗೀಡಾಗುವ ಅಪಾಯವಿರುತ್ತದೆ. ಪ್ರತಿಯೊಬ್ಬರೂ ಆಯಾ ಕುಟುಂಬಕ್ಕೆ ಪ್ರಮುಖರಾಗಿದ್ದು ಚಾಲನೆ ಸಂದರ್ಭದಲ್ಲಿ ಹೆಲ್ಮೆಟ್ ಧರಿಸಿದ್ದರೆ ಆಕಸ್ಮಿಕ ಅಪಘಾತಗಳಲ್ಲಿ ಪ್ರಾಣಾಪಾಯದಿಂದ ಪಾರಾಗಬಹುದು. ಕೇವಲ ಪೊಲೀಸರು ದಂಡ ವಿಧಿಸುತ್ತಾರೆ ಎಂಬುದಕ್ಕಿಂತ ಹೆಚ್ಚಾಗಿ ತಮ್ಮ ಅಮೂಲ್ಯ ಜೀವಕ್ಕಾಗಿ ಪ್ರತಿಯೊಬ್ಬರೂ ಸಂಚಾರಿ ನಿಯಮ ಪಾಲಿಸುವಂತಾಗಬೇಕು ಎಂದು ತಿಳಿಸಿದರು.

ಗೃಹರಕ್ಷಕ ದಳದ ಸಿಬ್ಬಂದಿ ಸಿದ್ದರಾಜು ಗಣಪತಿಯ ಮುಖವಾಡ ಧರಿಸಿ "ನಿಮ್ಮ ತಲೆಯನ್ನು ನೋಡಿಕೊಳ್ಳಿ, ನನ್ನಂತೆ ಎಲ್ಲರಿಗೂ ಬದಲಿ ಸಿಗುವುದಿಲ್ಲ" ಎಂಬ ಬರಹದ ಬ್ಯಾನರ್ ಹಿಡಿದು ಜಾಥಾದಲ್ಲಿ ಸಾಗಿದ್ದು ಸಾರ್ವಜನಿಕರ ಗಮನ ಸೆಳೆಯಿತು.

ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯಿಂದ ಚಾಮರಾಜನಗರ ಜೋಡಿ ರಸ್ತೆಯಲ್ಲಿ ಸಾಗಿದ ಜಾಥಾ ಪ್ರವಾಸಿ ಮಂದಿರದ ಬಳಿ ಮುಕ್ತಾಯಗೊಂಡಿತು. ಇದೇ ಸಂದರ್ಭದಲ್ಲಿ ಹೆಲ್ಮೆಟ್ ಧರಿಸಿದ ಸವಾರರಿಗೆ ಹೂ ನೀಡಿ ಗೌರವಿಸಲಾಯಿತು. ಸರ್ಕಲ್ ಇನ್ಸ್‌ಪೆಕ್ಟರ್ ಎಸ್. ಜಯಕುಮಾರ್, ಸಬ್‌ಇನ್ಸ್‌ಪೆಕ್ಟರ್ ಸಾಹೇಬ ಗೌಡ, ಸಿಬ್ಬಂದಿ ಗಂಗಾಧರ್, ಮಹೇಶ, ನಟೇಶ್, ಶಿವಕುಮಾರ್, ಕನ್ನಡ ಸಂಘಟನೆಗಳ ಸದಸ್ಯರು ಹಾಗೂ ವಿದ್ಯಾರ್ಥಿಗಳಿದ್ದರು.



ರಸ್ತೆ ಸುರಕ್ಷತಾ ಜಾಥಾದಲ್ಲಿ ಹೆಲ್ಮೆಟ್ ಧರಿಸಿದ ಸವಾರರಿಗೆ ಹೂ ನೀಡಿ ಗೌರವಿಸಿದರು.

ಚಾ.ನಗರ ಜಿಲ್ಲೆಯಲ್ಲಿ ಚುರುಕಾದ ಕೃಷಿ ಚಟುವಟಿಕೆ

ಎಸ್.ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಜೂ.14–ಈ ಬಾರಿ ಜಿಲ್ಲೆಯಲ್ಲಿ ಮೇ ಕೊನೆಯ ವಾರದಿಂದಲೇ ಮುಂಗಾರು ಮಳೆ ಆರಂಭವಾಗಿದ್ದು, ಕೃಷಿ ಚಟುವಟಿಕೆ ಚುರುಕು ಪಡೆದುಕೊಂಡಿದೆ. ರೈತರು ಬಿತ್ತನೆ ಕಾರ್ಯ ಶುರು ಮಾಡಿದ್ದಾರೆ.

ಎರಡು ವರ್ಷಗಳಿಂದ ಮುಂಗಾರು ಮಳೆ ವಿಳಂಬವಾಗಿ ಆರಂಭವಾಗುತ್ತಿತ್ತು. ಅಲ್ಲದೇ ನಿರೀಕ್ಷಿತ ಸಮಯದಲ್ಲಿ ಮಳೆಯಾಗದೇ ರೈತರನ್ನು ನಷ್ಟಕ್ಕೆ ದೂಡುವಂತೆ ಮಾಡಿತ್ತು. ಆದರೆ, ಈ ಬಾರಿ ಮೊದಲೇ ಮುಂಗಾರು ಆಗಮನ ಆಗಿರುವುದರಿಂದ ಉತ್ತಮ ಬೆಳೆಯ ನಿರೀಕ್ಷೆಯಲ್ಲಿ ಅನ್ನದಾತರು ಇದ್ದಾರೆ. ಈಗಾಗಲೇ ಪೂರ್ವ ಮುಂಗಾರಿನ ಅವಧಿಯಲ್ಲಿ ಜಿಲ್ಲೆಯಲ್ಲಿ ಉತ್ತಮ ಮಳೆ ಆಗಿದ್ದು, ರೈತರು ತಮ್ಮ ಜಮೀನು ಹದಗೊಳಿಸಿ ಬಿತ್ತನೆ ಚಟುವಟಿಕೆ ಪ್ರಾರಂಭಿಸಿದ್ದಾರೆ.

ಬಿತ್ತನೆ ಬೀಜ ಖರೀದಿ ಜೋರು : ಕೃಷಿ ಇಲಾಖೆ ಅಧಿಕಾರಿಗಳು ಮಳೆಗೂ ಮುನ್ನವೇ ಬಿತ್ತನೆ ಬೀಜಗಳನ್ನು ಸಂಗ್ರಹಿಸಿಟ್ಟು ಕೊಂಡಿದ್ದರು. ಇಲಾಖೆ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದ್ದು, ರೈತರು ಬಿತ್ತನೆ ಬೀಜಗಳ ಖರೀದಿಗೆ ಮುಂದಾಗಿದ್ದಾರೆ. ಕೃಷಿ ಇಲಾಖೆಯಿಂದ ಅಗತ್ಯಕ್ಕೆ ಅನುಗುಣವಾಗಿ ಬಿತ್ತನೆ ಬೀಜ ಹಾಗೂ ಗೊಬ್ಬರ ದಾಸ್ತಾನು ಮಾಡಿಕೊಳ್ಳಲಾಗಿದ್ದು, ಇದರಿಂದಾಗಿ ಈ ಬಾರಿ ಬಿತ್ತನೆ ಬೀಜ ಹಾಗೂ ಗೊಬ್ಬರಕ್ಕೆ ಸಮಸ್ಯೆ ಇಲ್ಲ ಎಂದು ಹೇಳಲಾಗುತ್ತಿದೆ.

ಟ್ರ್ಯಾಕ್ಟರ್ ಮೊರೆ ಹೋದ ರೈತರು: ಬಹುತೇಕ ರೈತರು ಬರ ಹಾಗೂ ಸಾಕಣೆಗೆ ತೊಂದರೆಯಾದ ಕಾರಣ ದನ–ಕರುಗಳನ್ನು ಮಾರಾಟ ಮಾಡಿದ್ದಾರೆ. ಇದರಿಂದ ಜಮೀನಿನಲ್ಲಿ ಉಳುವೆ ಹಾಗೂ ಬಿತ್ತನೆ ಕಾರ್ಯಕ್ಕೆ ಜಾನುವಾರು ಸಿಗದೇ ಟ್ರ್ಯಾಕ್ಟರ್ ಸಹಾಯದಿಂದ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದಾರೆ.

ಒಟ್ಟಾರೆ ಜಿಲ್ಲೆಯಲ್ಲಿ ರೈತರು ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆ ನಿರೀಕ್ಷೆಯಲ್ಲಿ ಭೂಮಿ ಸಿದ್ಧತೆಯಲ್ಲಿ ತೊಡಗಿದ್ದಾರೆ. ಹಲವು ರೈತರು ಬೇಸಿಗೆ ಬೆಳೆಯಾಗಿ ಕಬ್ಬು, ಭತ್ತ, ರಾಗಿ, ಉದ್ದು, ಮುಸುಕಿನ ಜೋಳ ಮತ್ತು ಬಿಳಿಜೋಳ ನಾಟಿ ಮಾಡಿದ್ದು, ವರುಣನ ಕೃಪೆಗಾಗಿ ಕಾಯುತ್ತಿದ್ದಾರೆ.



ಬಿತ್ತನೆ ಕಾರ್ಯದಲ್ಲಿ ತೊಡಗಿರುವ ರೈತರು.

ಎತ್ತುಗಳಿಗೆ ಹೆಚ್ಚಿದ ಬೇಡಿಕೆ

ಗ್ರಾಮೀಣ ಭಾಗದ ಬಹುತೇಕ ರೈತರ ಬಳಿ ಎತ್ತುಗಳಿಲ್ಲ. ಹೀಗಾಗಿ ಜಾನುವಾರುಗಳನ್ನು ಹೊಂದಿರುವ ರೈತರಿಗೆ ಬೇಡಿಕೆ ಹೆಚ್ಚಿದೆ. ನೇಗಿಲಿನ ಮೂಲಕವೇ ಬಿತ್ತನೆ ಮಾಡಿಸಬೇಕೆಂಬುದು ರೈತರ ಆಶಯ. ಹೀಗಾಗಿ ಕೆಲವು ರೈತರು ದಿನಕ್ಕೆ 2 ಸಾವಿರ ರೂ. ನೀಡಿ ಸೂರ್ಯಕಾಂತಿ, ಜೋಳ, ಅಲಸಂದೆ ಬಿತ್ತನೆ ಮಾಡಿಸುತ್ತಿದ್ದಾರೆ.

ರೇಚಂಬಳ್ಳಿಯಲ್ಲಿ ಅಂಬೇಡ್ಕರ್ ಸಮುದಾಯ ಭವನಕ್ಕೆ ಕೃಷ್ಣಮೂರ್ತಿ ಗುದ್ದಲಿ ಪೂಜೆ

ಚಾಮರಾಜನಗರ, ಜೂ. 14– ತಾಲೂಕಿನ ರೇಚಂಬಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಗುದ್ದಲಿಪೂಜೆ ನೆರವೇರಿಸಿದರು.

ಗ್ರಾಮದಲ್ಲಿ ಅಂಬೇಡ್ಕರ್ ಸಮುದಾಯ ಭವನಕ್ಕೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 10 ಲಕ್ಷ ರೂ. ಬಿಡುಗಡೆಯಾಗಿದೆ. ಎಸ್‌ಇಪಿ, ಟಿಎಸ್‌ಪಿ ಯೋಜನೆಯ ಗ್ರಾಮದಲ್ಲಿ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣ ಕ್ಕೆ 7 ಲಕ್ಷ ರೂ ಮಂಜೂರಾಗಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ಹೆಚ್.ವಿ. ಚಂದ್ರು, ಗ್ರಾ.ಪಂ ಅಧ್ಯಕ್ಷೆ ಭದ್ರಮ್ಮ, ಉಪಾಧ್ಯಕ್ಷೆ ಶಾಂತಮ್ಮ, ಸದಸ್ಯರಾದ ಬಸವರಾಜು, ಮಹದೇವಸ್ವಾಮಿ, ಶಿವಪಾದ, ಮಾಜಿ ಅಧ್ಯಕ್ಷ ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರ ಮಹದೇವಪ್ಪ, ಕೆಆರ್ ಐ ಡಿ ಎಲ್ ಇಇ ಮಹದೇವಶೆಟ್ಟಿ, ನಿರ್ಮಿತಿ ಕೇಂದ್ರದ ಇಂಜಿನಿಯರ್ ನಂದೀಶ್, ಯಜಮಾನರಾದ ಪುಟ್ಟಸ್ವಾಮಿ, ಮರಿರಾಚಯ್ಯ, ನಂಜಯ್ಯ ಪುಟ್ಟಯ್ಯ, ರವಿ, ಅಂಬೇಡ್ಕರ್ ಸಂಘದ ಅಧ್ಯಕ್ಷ ಮಣಿ, ಉಪಾಧ್ಯಕ್ಷ ಶೇಖರ್, ಎನ್‌ಎಸ್‌ಯುಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದರ್ಶನ್, ಜಿಲ್ಲಾಧ್ಯಕ್ಷ ಮೋಹನ್ ನಗು, ಉಪಾಧ್ಯಕ್ಷ ಮುತ್ತುರಾಮು, ನವೀನ್, ಯುವ ಕಾಂಗ್ರೆಸ್ ಮಣಿ, ಮಹೇಶ್, ಮಂಜು, ಕೃಷ್ಣಮೂರ್ತಿ, ಮೋಹನ್ ಹಾಜರಿದ್ದರು.



ರೇಚಂಬಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಗುದ್ದಲಿಪೂಜೆ ನೆರವೇರಿಸಿದರು.

ವಕೀಲರ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಶುಕ್ರವಾರ ವಕೀಲರು ತಹಶೀಲ್ದಾರ್ ಶಿವರಾಜು ಮೂಲಕ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿದರು.

ಯಳಂದೂರು, ಜೂ14(ವಿ. ನಾಗರಾಜು)– ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಭಾರತ ವಕೀಲರ ಒಕ್ಕೂಟದ ನೇತೃತ್ವದಲ್ಲಿ ಪಟ್ಟಣದಲ್ಲಿ ಶುಕ್ರವಾರ ತಾಲೂಕು ವಕೀಲರ ಸಂಘದ ವತಿಯಿಂದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಯಿತು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಹೊನ್ನೂರು ರಾಜಣ್ಣ ಮಾತನಾಡಿ, ವಕೀಲರ ಸಂರಕ್ಷಣೆ ಕಾಯ್ದೆ 2024 ರ ತಿದ್ದುಪಡಿ ಮಾಡಬೇಕು, ಅವೈಜ್ಞಾನಿಕ ಅಖಿಲ ಭಾರತ ಬಾರ್ ಪರೀಕ್ಷೆ ರದ್ದುಪಡಿಸಬೇಕು. ಕಿರಿಯ ವಕೀಲರಿಗೆ 2 ವರ್ಷಗಳ ಕಾಲ ಮಾಸಿಕ 10 ಸಾವಿರ ರೂ. ಸಹಾಯಧನ ನೀಡಬೇಕು, ಜಿಲ್ಲಾ ವಕೀಲರ ಸಂಘಕ್ಕೆ 10 ಲಕ್ಷ ರೂ. ಅನುದಾನ ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು.

ವೈದ್ಯಕೀಯ ಮತ್ತು ಜೀವ ವಿಮಾ ಸೌಲಭ್ಯವನ್ನು ನೀಡಬೇಕು, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣಗಳಲ್ಲಿ ವಕೀಲರ ಅಕಾಡೆಮಿ ಸ್ಥಾಪಿಸಬೇಕು, ರಾಜ್ಯದಲ್ಲಿ ಹೆಚ್ಚುವರಿ ನ್ಯಾಯಾಲಯಗಳನ್ನು ಸ್ಥಾಪಿಸಬೇಕು, ನ್ಯಾಯಾಲಯದಲ್ಲಿ ವಕೀಲರ ಚೇಂಬರ್‌ಗಳನ್ನು ಸ್ಥಾಪಿಸಬೇಕು, ವಕೀಲರಿಗೆ ಟೋಲ್ ಶುಲ್ಕ ರಹಿತ ಪ್ರಯಾಣಕ್ಕೆ ಅವಕಾಶ ನೀಡಬೇಕು, ರಾಜ್ಯ ವಕೀಲರ ಪರಿಷತ್ತಿನ ಕಚೇರಿಯನ್ನು ವಿಭಾಗೀಯ ಮಟ್ಟದಲ್ಲಿ ಸ್ಥಾಪಿಸಬೇಕು, ವಕೀಲರ ಸಂಘ, ಪರಿಷತ್ತಿನ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡಬೇಕು, ಜಾತಿ ಆಧಾರದಲ್ಲಿ ಮೀಸಲಾತಿ ನೀಡುವುದೂ ಸೇರಿದಂತೆ ತಿಂಗಳೊಳಗಾಗಿ ಬೇಡಿಕೆ ಈಡೇರಿಸದಿದ್ದಲ್ಲಿ ನಮ್ಮ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡುತ್ತಿದ್ದೇವೆ ಎಂದು ತಿಳಿಸಿದರು. ನಂತರ ಪ್ರತಿಭಟನಾಕಾರರು ಮನವಿ ಪತ್ರವನ್ನು ತಹಶೀಲ್ದಾರ್ ಶಿವರಾಜುರವರಿಗೆ ನೀಡಿದರು.

ವಕೀಲರಾದ ಬಿ.ಎಂ. ಮಹದೇವಸ್ವಾಮಿ, ಸಿ.ಆರ್. ನಾಗರಾಜು, ಅಂಬಳೆ ಸಿದ್ದರಾಜು, ಕುಮಾರಸ್ವಾಮಿ, ಸಿ.ಎಂ. ಮಹದೇವಸ್ವಾಮಿ, ಶಶಿಧರ್, ರವೀಶ್, ಜಯಶಂಕರ್, ಕಾಂತರಾಜು, ಅಶ್ವಿನ್ ಕುಮಾರ್, ಎಂ.ನಾಗರಾಜು ಸೇರಿದಂತೆ ಅನೇಕರು ಇದ್ದರು.

ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ



ಪಟ್ಟಣದ ಪ್ರವಾಸಿಮಂದಿರದಲ್ಲಿ ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಅರ್ಹ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ ಮಾಡಿದರು.

ಗುಂಡ್ಲುಪೇಟೆ,ಜೂ.14 (ಸೋಮ್.ಜಿ)– ಗ್ರಾಮೀಣ ಕೈಗಾರಿಕಾ ಇಲಾಖೆಯ ಅನುದಾನದಲ್ಲಿ ಕ್ಷೇತ್ರದ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ವಿತರಣೆ ಮಾಡಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಅನುಕೂಲವಾಗುವಂತೆ 249 ಅರ್ಹ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಲಾಗಿದೆ ಎಂದರು.

ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್, ಪುರಸಭೆ ಅಧ್ಯಕ್ಷ ಜಿ.ಎಸ್. ಮಧುಸೂಧನ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಸದಸ್ಯರಾದ ಶಶಿಧರ್, ಕಪ್ಪಣ್ಣ, ಕಿರಣ್‌ಗೌಡ, ಕುಮಾರ್, ಅಲ್ಲಾಹು, ರಾಜಗೋಪಾಲ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ತಾಲೂಕು ಭೂನ್ಯಾಯ ಮಂಡಲಿ ಸದಸ್ಯ ಜಿ.ಕೆ.ಲೋಕೇಶ್ ಹಲವರು ಇದ್ದರು.

ಶಾಲೆಗಳಿಗೆ ಮೂಲ ಸೌಕರ್ಯ ಒದಗಿಸಲು ಕ್ರಮ : ಶಾಸಕ ಸಿ.ಪುಟ್ಟರಂಗಶೆಟ್ಟಿ

ಚಾಮರಾಜನಗರ: ನಗರದ ಹೊರವಲಯದ ಮಲ್ಲಯ್ಯನಪುರ ಬಳಿಯ ಮೊರಾರ್ಜಿ ದೇಸಾಯಿ ವಸತಿಶಾಲಾವರಣದಲ್ಲಿ 53.38 ಲಕ್ಷ ರೂವೆಚ್ಚದಲ್ಲಿ ಸುತ್ತುಗೋಡೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ದೇಶದ ಅಭಿವೃದ್ಧಿಗೆ ಇಂದು ಶಿಕ್ಷಣವೊಂದೇ ಆಧಾರವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಕ್ಕಳ ಶಿಕ್ಷಣಕ್ಕೆ ಕೋಟ್ಯಂತರ ರೂ.ವೆಚ್ಚ ಮಾಡುತ್ತಿದ್ದು, ವಿದ್ಯಾರ್ಥಿಗಳು ಸರ್ಕಾರ ಒದಗಿಸುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕಿದೆ ಎಂದರು. ಶಾಲೆಗಳ ಭದ್ರತೆಗೆ ಸುತ್ತುಗೋಡೆ ನಿರ್ಮಿಸಲಾಗುತ್ತಿದೆ. ಸುತ್ತುಗೋಡೆ ಇಲ್ಲದಿರುವ ಶಾಲೆಗಳಿಗೆ ಸುತ್ತುಗೋಡೆ ಸೇರಿದಂತೆ ಮೂಲ ಸೌಕರ್ಯ ಒದಗಿಸಲು ಕ್ರಮವಹಿಸಲಾಗುವುದೆಂದು ಭರವಸೆ ನೀಡಿದರು.

ಕರ್ನಾಟಕ ವಸತಿ ಶಿಕ್ಷಣಸಂಸ್ಥೆ ಎಇಇ ಮಂಜುನಾಯಕ್, ಮುಖಂಡ ಸಮೀಉಲ್ಲಾ, ಗುತ್ತಿಗೆದಾರ ಅಶೋಕ್ ವಿನೋದ್ ಇದ್ದರು.



ಮಲ್ಲಯ್ಯನಪುರ ಬಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲಾವರಣದಲ್ಲಿ ಸುತ್ತುಗೋಡೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.


ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 15-06-2025

ಜಗತ್ತಲ್ಲಿ ಮಕ್ಕಳಿಗೆ ಆದರ್ಶವೇ ಅಪ್ಪ

ಬ್ಯಾ. ರಾ. ಪ್ರಸನ್ನಕುಮಾರ್
ಮೊ: 9206376889



ತಂದೆಯ ನೆನೆದಾರೆ
ತಂಗಳು ಬಿಸಿಯಾಯ್ತು,
ಗಂಗಾದೇವಿ ನನ್ನ ಹಡೆದವ್ವ ನೆನೆದರೆ
ಮಾಸಿದ ತಲೆಯು ಮಡಿಯಾಯ್ತು.

ಭಾರತೀಯರಿಗೆ ಮಾತಾ–ಪಿತರನ್ನು, ಗುರುಹಿರಿಯರನ್ನು ಭಕ್ತಿ ಗೌರವದಿಂದ ಕಾಣಬೇಕೆಂಬುದು ಜನ್ಮಜಾತವಾಗಿ ಬಂದಿರುವ ಸಂಸ್ಕಾರವಾಗಿದೆ. ಸಾವಿರಾರು ವರ್ಷಗಳ ಹಿಂದೆಯೆ ತೈತ್ತೀರೀಯ ಉಪನಿಷತ್ತಿನಲ್ಲಿರುವ ಮಾತೃ ದೇವೋ ಭವ, ಪಿತೃ ದೇವೋ ಭವ, ಆಚಾರ್ಯ ದೇವೋ ಭವ, ಅತಿಥಿ ದೇವೋ ಭವ ಎಂಬ ಶ್ಲೋಕವು ತಾಯಿ, ತಂದೆ ಗುರು ಅತಿಥಿಗಳನ್ನು ದೇವರೆಂದು ತಿಳಿಸಿವೆ. ಹೀಗಾಗಿ ನಮಗೆ ಮಾತಾ–ಪಿತರು ಪ್ರತ್ಯಕ್ಷ ದೇವರುಗಳು. ಸಿಂಧೂ ನಾಗರಿಕತೆಯ ಕಾಲದಿಂದ ಇಂದಿನ ಹೈಟೆಕ್ ಯುಗದವರೆಗೂ ಏನೇ ಬದಲಾದರೂ ಜನ್ಮಜಾತರ ಮೇಲಿನ ದೈವತ್ವದ ಭಾವ ಕಿಂಚಿತ್ತು ಕಡಿಮೆಯಾಗಿಲ್ಲ.

ಉಂಡಾಡಿ ಗುಂಡನಂತಿದ್ದ ಗಂಡೆಂಬ ಜೀವಿಗೆ ಮದುವೆಯಾಗಿ ಮಕ್ಕಳಾಗಿ ತಂದೆ ಸ್ಥಾನದ ಪ್ರಮೋಷನ್ ಮತ್ತು ಜವಾಬ್ದಾರಿ ದೊರೆತು ಬದುಕಿನ ದೋಣಿಯ ನಾವಿಕನಾಗಿ ನಗೆಯ ಹಾಯಿ ದೋಣಿಗೆ ಹುಟ್ಟು ಹಾಕಿದ್ದಕ್ಕಿಂತ ಜೀವನವೆಂಬ ಮಹಾ ಸಾಗರದ ಬೋರ್ಗರೆಯುವ ಚಂಡಮಾರುತಗಳಿಗೆ ಎದೆಯೊಡ್ಡಿ ನಿಂತಿದ್ದೆ ಹೆಚ್ಚು.

ತಾಯಿ ಜೀವ ಕೊಟ್ಟರೆ ಅಪ್ಪ ಬದುಕು ಕೊಟ್ಟ ತನಗಾಗಿ ಎನ್ನುವುದಕ್ಕಿಂತ ತನ್ನವರಿಗಾಗಿ ಎಂದುಕೊಂಡಿದ್ದೆ ಹೆಚ್ಚು. ಸಪ್ತ ಸಾಗರವನ್ನು ಕಾಲು ಒದ್ದೆಯಾಗದೆ ದಾಟಬಹುದು; ಆದರೆ, ಕಣ್ಣು ಒದ್ದೆಯಾಗದೆ ಸಂಸಾರ ಸಾಗರ ದಾಟಲು ಸಾಧ್ಯವಿಲ್ಲವೆಂದು ಅನುಭವಿಗಳು ಹೇಳಿದ್ದಾರೆ. ಬಿಸಿಲಲ್ಲಿ ಬೆವರು ಹರಿಸಿ ದುಡಿದು, ಮಳೆಯಲ್ಲಿ ನಿಂತು ಕಣ್ಣೀರಿಟ್ಟು, ಕೊರೆವ ಚಳಿಯಲ್ಲಿ ತಾನು ಮಲಗಿ, ಮಕ್ಕಳಿಗಾಗಿ ಬೆಚ್ಚಗಿನ ಕನಸುಗಳ ಕೌದಿ ಹೊದಿಸಿ ಮಲಗಿಸಿದವನು ಅಪ್ಪ. ತಾಯಿ ಸರಳ, ಅಪ್ಪ ಸಂಕೀರ್ಣ. ಅಮ್ಮ ಸಹನಾ ಮೂರ್ತಿ, ಅಪ್ಪನೆಂದರೆ ಆದರ್ಶ. ನಿನಗೆ ಹ್ಯಾಪಿ ಫಾದರ್ಸ್ ಡೇ ಎಂದರಷ್ಟೇ ಸಾಕೇ?



ವಾಷಿಂಗ್ಟನ್‌ನ ಸ್ಪೋಕೇನ್‌ನಲ್ಲಿ 1909ರಲ್ಲಿ ಸೋನೋರಾ ಲೂಯಿಸ್ ಸ್ಮಾರ್ಟ್‌ಯೆಂಬ ತಾಯಿಯನ್ನು ಕಳೆದುಕೊಂಡ ಹೆಣ್ಮಗಳು ತಾಯಂದಿರ ದಿನದ ಪ್ರವಚನವನ್ನು ಆಲಿಸುವಾಗ ತಂದೆಯ ದಿನವನ್ನೂ ಆಚರಿಸಬೇಕೆಂದು ನಿರ್ಧರಿಸಿ ಅವರಪ್ಪನ ಜನ್ಮದಿನ ಜೂನ್ 19ರಂದು ವಿಜೃಂಭಣೆಯಿಂದ ಆಚರಿಸಿದಳು. ನಂತರ ಆಕೆ ತಂದೆಯ ಸೇವೆ, ತ್ಯಾಗ, ಪ್ರೀತಿಯ ಗೌರವದ ದಿನವನ್ನಾಗಿ ವಿಶ್ವ ಅಪ್ಪಂದಿರ ದಿನವನ್ನು ಆಚರಿಸುವಂತೆ ಕೋರಿಕೊಂಡಿದ್ದರ ಫಲವೇ ಇಂತಹದೊಂದು ಅಪೂರ್ವ ಅಪ್ಪಂದಿರ ದಿನಕ್ಕೆ ಕಾರಣವಾಯಿತು.

ಅಮೇರಿಕಾದ ವರ್ಜೀನಿಯಾದ 05/07/1908ರಂದು ಮೊನೊಂಗೋ ಗಣಿ ದುರಂತದಲ್ಲಿ ಜೀವ ಕಳೆದುಕೊಂಡ ಅಪ್ಪಂದಿರ ಸ್ಮರಣೆಗಾಗಿ ಮೊದಲ ಬಾರಿಗೆ 19.06.1910ರಲ್ಲಿ ಅಮೇರಿಕದ ವಾಷಿಂಗ್‌ಟನ್‌ನಲ್ಲಿ ಅಪ್ಪಂದಿರ ದಿನ ಆಚರಿಸಲಾಗಿತ್ತು, 1916ರಲ್ಲಿ ಅಮೆರಿಕಾದ ಅಂದಿನ ಅಧ್ಯಕ್ಷ ವುಡ್ರೋ ವಿಲ್ಸನ್ ಎಲ್ಲಾ ಅಪ್ಪಂದಿರಿಗೂ ಶುಭಾಶಯ ಕೋರಿದ್ದರು. 1966ರಲ್ಲಿ ಅಮೇರಿಕದ ಅಧ್ಯಕ್ಷರಾಗಿದ್ದ ಲಿಂಡನ್ ಬಿ ಜಾನ್ಸನ್ ಪ್ರತಿ ವರ್ಷ ಜೂನ್ ಮೂರನೆಯ ಭಾನುವಾರವನ್ನು ವಿಶ್ವ ಅಪ್ಪಂದಿರ ದಿನವೆಂದು ಘೋಷಿಸಿ ಆಚರಿಸಲು ತಿಳಿಸಿದರು. ಈ ವರ್ಷ ಜೂನ್ 15ನೆಯ ಭಾನುವಾರ ವಿಶ್ವ ಅಪ್ಪಂದಿರ ದಿನವಾಗಿದೆ. 1972ರಿಂದ ಅಪ್ಪಂದಿರ ದಿನವನ್ನು ಜಗತ್ತಿನಾದ್ಯಂತ ಏಕಕಾಲದಲ್ಲಿ ಆಚರಿಸುವುದಿಲ್ಲ.

05/07/1908ರಂದು ಅಮೇರಿಕಾದ ವರ್ಜೀನಿಯಾದ ಮೊನೊಂಗೋ ಗಣಿ ದುರಂತದಲ್ಲಿ ಜೀವ ಕಳೆದುಕೊಂಡ ಅಪ್ಪಂದಿರ ಸ್ಮರಣೆಗಾಗಿ ಮೊದಲ ಬಾರಿಗೆ 19.06.1910ರಲ್ಲಿ ಅಮೇರಿಕದ ವಾಷಿಂಗ್‌ಟನ್‌ನಲ್ಲಿ ಅಪ್ಪಂದಿರ ದಿನ ಆಚರಿಸಲಾಗಿತ್ತು, 1916ರಲ್ಲಿ ಅಮೆರಿಕಾದ ಅಂದಿನ ಅಧ್ಯಕ್ಷ ವುಡ್ರೋ ವಿಲ್ಸನ್ ಎಲ್ಲಾ ಅಪ್ಪಂದಿರಿಗೂ ಶುಭಾಶಯ ಕೋರಿದ್ದರು. 1966ರಲ್ಲಿ ಅಮೇರಿಕದ ಅಧ್ಯಕ್ಷರಾಗಿದ್ದ ಲಿಂಡನ್ ಬಿ ಜಾನ್ಸನ್ ಪ್ರತಿ ವರ್ಷ ಜೂನ್ ಮೂರನೆಯ ಭಾನುವಾರವನ್ನು ವಿಶ್ವ ಅಪ್ಪಂದಿರ ದಿನವೆಂದು ಘೋಷಿಸಿ, ಆಚರಿಸಲು ತಿಳಿಸಿದರು.

ಮಕ್ಕಳ ವೈಯಕ್ತಿಕ, ಆರ್ಥಿಕ, ಸಾಮಾಜಿಕ ಶೈಕ್ಷಣಿಕ ವಿಕಸನ ಮತ್ತು ಅಭಿವೃದ್ಧಿಯಲ್ಲಿ ತಂದೆಯ ಪಾತ್ರ ಮತ್ತು ಶ್ರಮ ಅಪರಿಮಿತವಾದುದು. ತಾಯಿ ಭೂಮಿ ತೂಕದ ಭಾರ ಹೊತ್ತರೆ, ತಂದೆ ಸಂಸಾರವೆಂಬ ಬ್ರಹ್ಮಾಂಡ ಭಾರವನ್ನೆ ಹೊತ್ತಿರುತ್ತಾನೆ ಅದ್ಯಾವುದು ಮಕ್ಕಳ ಕಣ್ಣಿಗೆ ಬೀಳಬಾರದೆಂದು ತಾನೊಬ್ಬನೇ ಎಲ್ಲಾ ನೋವ ನುಂಗಿ ಹೃದಯ ಭಾರವಾಗಿಸಿಕೊಂಡು ನಗುತ್ತಲೆ ಕಾಣಿಸಿಕೊಳ್ಳುವ ತಾಯ್ಗರಳಿನ ಅಪ್ಪ ಬದುಕಿನುದ್ದಕ್ಕೂ ಅರ್ಥವಾಗದ ಮಿಲಿಯನ್ ಡಾಲರ್ ಪ್ರಶ್ನೆಯಾಗಿಯೇ ಕಾಡುತ್ತಾನೆ. ಮಕ್ಕಳಾದ ಶುಭ ಸಂದರ್ಭದಲ್ಲಿ ಹಿಗ್ಗಿ ಗರ್ವದಿಂದ ಬೀಗಿ ಮೀಸೆ ತಿರುಗಿಸುವ ಅಪ್ಪ, ವಯಸ್ಸಾಗುತ್ತಾ ಹೋದಂತೆ ಮಕ್ಕಳಿಂದ ಅಪ್ಪ, ಅಪ್ಪನಿಂದ ಮಕ್ಕಳು ಸ್ನೇಹ ಪ್ರೀತಿ, ಗೌರವಗಳ ಬಗ್ಗೆ ವಯೋಸಹಜ ತಲೆಮಾರಿನ ಅಂತರ (Generation Gap) ಕಾಯ್ದುಕೊಳ್ಳುವ ಸಂದರ್ಭದಲ್ಲಿ ಮಾನಸಿಕ, ಭಾವನಾತ್ಮಕ ಬಿಕ್ಕಟ್ಟುಗಳು ಉದ್ಭವಿಸಿ ವ್ಯಕ್ತಿತ್ವ ವಿಘಟನೆಯೊಂದಿಗೆ ಕುಟುಂಬದ ವಿಘಟನೆಗಳಾಗಿ ಮನೆ ನರಕವಾಗಿ ನೀನು ನೀನೇ... ನಾನೂ ನಾನೆ... ನಿತ್ಯ ಜಗಳ್ಬಂದಿ.

ಹಿರಿಯವರೊಬ್ಬರ ಅನುಭವದ ಮಾತು ಹೀಗಿದೆ ನನ್ನ ಅಪ್ಪ ಹೇಳಿದ್ದು ಸರಿ ಎಂದು ಅರ್ಥವಾಗುವ ಹೊತ್ತಿಗೆ ಎದೆಯೆತ್ತರಕ್ಕೆ ಬೆಳೆದ ಮಕ್ಕಳಿದ್ದರು. ಮತ್ತದೆ ಮಕ್ಕಳು ಅಪ್ಪ ಸರಿಯಿಲ್ಲವೆಂಬ ನಿರ್ಧಾರಕ್ಕೆ ಬಂದಿದ್ದರು.

ಪಬ್ಲಿಕ್ ಹೀರೋ ನಮ್ಮಪ್ಪ: ನಮ್ಮಪ್ಪ ರಾಜಶೇಖರಯ್ಯ, ನಂಜಪ್ಪ ಮತ್ತು ಪುಟ್ಟಮ್ಮ ದಂಪತಿಗಳ ಮಗನಾಗಿ 08.09.1944ರಲ್ಲಿ ಕಡುಬಡತನದ ಕುಟುಂಬದಲ್ಲಿ ಜನಿಸಿದರು. ಹುಟ್ಟಿದ ವರ್ಷಕ್ಕೆ ತಂದೆ ತೀರಿ ಹೋಗಿ ನಮ್ಮವ್ವ ಪುಟ್ಟವ್ವ ತಂದೆಯಾಗಿ, ತಾಯಿಯಾಗಿ ಮಗನನ್ನು ಸಾಕಿ ಬೆಳೆಸಿ, ಶಿಕ್ಷಣ ಒಂದೇ ಬದುಕಿನ ಉದ್ಧಾರದ ಸಂಜೀವಿನಿಯೆಂದು ತಿಳಿ ಹೇಳಿದ ಅನಕ್ಷರಸ್ಥ ತತ್ವಜ್ಞಾನಿ. ಅದರಂತೆ ನಮ್ಮಪ್ಪ ಇಷ್ಟಪಟ್ಟು ಕಷ್ಟಪಟ್ಟು ಓದಿ ಶಿಕ್ಷಕ ತರಬೇತಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಸುದೀರ್ಘವಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಬಳಿಕ, ಸಾಮಾಜಿಕ ಧಾರ್ಮಿಕ ಸೇವೆಯಲ್ಲಿ ನಿರಂತರವಾಗಿ ಪಾದರಸದಂತೆ ತಮ್ಮನ್ನು ತೊಡಗಿಸಿಕೊಂಡಿರುವುದು ಯುವಕರು ನಾಚುವಂತಿದೆ.


ನಮ್ಮಪ್ಪನಿಗೆ ಹೆತ್ತಪ್ಪನ ವಾತ್ಸಲ್ಯ ದೊರೆಯದೆ ತಾಯಿಯ ಕಷ್ಟಗಳನ್ನು ನೋಡಿದ್ದರ ಪರಿಣಾಮವಾಗಿ ತಾಯ್ಗರಳಿನ ನಮ್ಮಪ್ಪ ತನ್ನ ಜೀವನದ ಬಹು ಭಾಗವನ್ನು ಸಮಾಜಕ್ಕಾಗಿ ಅರ್ಪಿಸಿಕೊಂಡವರು. ಜನರ ಬಡತನಕ್ಕೆ, ನೋವಿಗೆ, ನಲಿವಿಗೆ ಅವರೆಲ್ಲ ಬಗೆಯ ಸಂಕಟಗಳಿಗೆ ನಿರಂತರವಾಗಿ ನೆರವಾಗುತ್ತಲೆ ಬರುತ್ತಿದ್ದಾರೆ. ಜನತಾ ಸೇವೆಯನ್ನೇ ಜನಾರ್ಧನನ ಸೇವೆಯೆಂದು ಪರಿಗಣಿಸಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದ ನಿಷ್ಕಾಮ ಕರ್ಮಯೋಗಿ. ಕೃಷ್ಣರಾಜನಗರದಲ್ಲಿ ಗುರುಭವನ ನಿರ್ಮಾಣಕ್ಕೆ ದೊಡ್ಡ ಹೆಗಲನ್ನೊಡ್ಡಿದ್ದಾರೆ. ಹುಟ್ಟೂರು ಬ್ಯಾಡರಹಳ್ಳಿಯಲ್ಲಿ ದೇವಾಲಯಗಳ ನಿರ್ಮಾಣಕ್ಕೆ, ಜೀರ್ಣೋದ್ಧಾರಕ್ಕಾಗಿ ಸಾರ್ವಜನಿಕರು ಮತ್ತು ಯುವಕರನ್ನು ಪ್ರೇರೇಪಿಸಿ ಶ್ರಮಿಸಿದ್ದಾರೆ. ಹುಟ್ಟೂರನ್ನು ಅತಿಯಾಗಿ ಪ್ರೀತಿಸುವ ನಮ್ಮಪ್ಪ ಎಲ್ಲಿದ್ದರೂ ಎಷ್ಟೊತ್ತಾದರು ಊರನ್ನು ತಲುಪಬೇಕೆಂದು ಹಂಬಲಿಸುತ್ತಾರೆ.

ನಮ್ಮೂರು ಸರ್ವ ಜನಾಂಗದ ಶಾಂತಿಯ ನೆಲೆಯಾಗಿದ್ದು, ಜಾತ್ಯಾತೀತವಾಗಿ ನಮ್ಮಪ್ಪ ಮಾಡುವ ಸೇವೆಯಿಂದಾಗಿ ಎಲ್ಲಾ ಜನಾಂಗದವರ ಪ್ರೀತಿಯ ಮೇಷ್ಟ್ರಾಗಿದ್ದಾರೆ. ಅದೆಷ್ಟೋ ಬಡವರ ಕಾಯಿಲೆಗಳನ್ನು ಗುಣಪಡಿಸಲು ಹಗಲರಾತ್ರಿಯೆನ್ನದೆ ಅವರೊಂದಿಗಿದ್ದು ಅವರಿಗೆ ಭರವಸೆ ತುಂಬಿದ್ದಾರೆ. ಎಂತವರ ಸಾವಿನ ಸಂದರ್ಭದಲ್ಲೂ ಕುಟುಂಬದ ಸದಸ್ಯರಂತೆ ಸ್ಪಂದಿಸುತ್ತಾರೆ. ನಮ್ಮಪ್ಪ ಕನಸುಗಾರ, ಕವಿ, ನಾಟಕಕಾರ, ಉತ್ತಮ ಮಾತುಗಾರ ಯಾವುದೇ ಲಾಬಿ ಬಹುಮಾನ ಸ್ಥಾನ ಮಾನ ಸನ್ಮಾನ ಗೌರವ ಪ್ರಶಸ್ತಿಗಳಿಗಾಗಿ ದುಡಿಯದ ಶ್ರೇಷ್ಠ ಕಾಯಕ ಶರಣ. ಊರಿನ ಪ್ರತಿಭೆಗಳನ್ನು, ಸಾಧಕರನ್ನು ಹುಡುಕಿಕೊಂಡು ಹೋಗಿ ಸನ್ಮಾನಿಸಿ ಗೌರವಿಸಿ ಅಭಿನಂದಿಸಿ ಬರುವುದರಲ್ಲಿ ಇವರಿಗೆ ಬಹಳ ಆನಂದ. ಉಪಕೃತಗೊಂಡವರು ಉಪಕಾರವನ್ನು ಸ್ಮರಿಸದೆ ಅವಮಾನಿಸಿದ್ದರು ಸಹ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಸಾಮಾಜಿಕ ಸೇವೆಯನ್ನು ಕಡೆಗಣಿಸಿಲ್ಲ. ಕಳೆದ 56 ವರ್ಷಗಳಿಂದ ಊರ ಜನರ ಸಹಕಾರದಿಂದ ವಿನಾಯಕ ಸೇವಾ ಸಮಿತಿಯನ್ನು ರಚಿಸಿಕೊಂಡು ಗೌರಿ ಗಣೇಶ ಹಬ್ಬದಂದು ಗಣಪತಿ ಕೂರಿಸಿ ಸ್ಥಳೀಯ ಪ್ರತಿಭೆಗಳ ಜಾನಪದ ಕಲೆಗಳ ಹಾಗೂ ಶಾಲಾ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಒದಗಿಸುತ್ತಿದ್ದಾರೆ. ಇದೆಲ್ಲವೂ ನಮ್ಮಪ್ಪನಿಗೆ ಸಾಧ್ಯವಾದ್ದು ಊರವರ ಪ್ರೀತಿ ಸಹಕಾರ ನೆರವುಗಳಿಂದ ಎಂಬುದನ್ನು ಮರೆಯುವಂತಿಲ್ಲ.




ಮಕ್ಕಳ ಚಿತ್ರಕಥೆ: ನನಗೂ ಕನಸಿನಲ್ಲಿ ದೇವರು ಬಂದಿದ್ದ...!

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಬ್ಬ ಇಂಗ್ಲೀಷ್‌ನವ, ಒಬ್ಬ ಅರಬ್‌ನವ ಹಾಗೂ ಒಬ್ಬ ಭಾರತೀಯ – ಈ ಮೂವರೂ ಒಂದು ಬಾರಿ ಸಂದಿಸುತ್ತಾರೆ. ಈ ವೇಳೆ ಅವರ ಬಳಿ ಹಲ್ವಾ ತುಡು ಇರುತ್ತದೆ. ಮೂವರೂ ಭಾಗ ಮಾಡಿಕೊಳ್ಳಲಾಗದಷ್ಟು ಚಿಕ್ಕ ತುಂಡು ಅದು.




ರಾತ್ರಿ ಮೂವರೂ ಒಂದು ನಿರ್ಧಾರಕ್ಕೆ ಬರುತ್ತಾರೆ. 'ಸದ್ಯಕ್ಕೆ ಹಲ್ವಾ ತುಂಡನ್ನು ಒಂದು ಪಾತ್ರೆಯಲ್ಲಿ ಮುಚ್ಚಿಟ್ಟು ರಾತ್ರಿ ಮಲಗೋಣ ಯಾರಿಗೆ ಅದ್ಭುತ ಕನಸು ಬೀಳುತ್ತೋ ಅವರಿಗೇ ಆ ಹಲ್ವಾ ತುಂಡು...!' ಎಂದು ನಿರ್ಧರಿಸಿದರು.




ಮರುದಿನ ಮೂವರೂ ತಮ್ಮ ಕನಸನ್ನು ಹಂಚಿಕೊಳ್ಳುತ್ತಾರೆ. ಮೊದಲು ಇಂಗ್ಲೀಷ್‌ನವ, 'ನಿನ್ನೆ ರಾತ್ರಿ ನನ್ನ ಕನಸಿನಲ್ಲಿ ದೇವರು ಬಂದು ನನ್ನನ್ನು ಹೂದೋಟಕ್ಕೆ ಕರೆದುಕೊಂಡು ಹೋಗಿ...ಹಲವು ಅದ್ಭುತಗಳನ್ನು ಮಾಡಿ ತೋರಿಸಿದ...!' ಎಂದ.



ಅರಬ್‌ನವ 'ನನ್ನ ಕನಸಿನಲ್ಲಿಯೂ ದೇವರು ಬಂದಿದ್ದ. ಆದರೆ ನಾನೇ ಅವನನ್ನು ಹೂದೋಟಕ್ಕೆ ಕರೆದುಕೊಂಡು ಹೋಗಿ, ಅವನಿಗೆ ಹಲವು ಅದ್ಭುತಗಳನ್ನು ಮಾಡಿ ತೋರಿಸಿದೆ...!' ಎಂದ.



ಅಂತಿಮವಾಗಿ ಭಾರತೀಯ ಹೇಳಿದ,'ನನ್ನ ಕನಸಿನಲ್ಲೂ ದೇವರು ಬಂದಿದ್ದ, ಎದುರಿನಲ್ಲೇ ಸಿಹಿಯಾದ ಹಲ್ವಾ ಇಟ್ಟುಕೊಂಡು ಕನಸು ಕಾಣುತ್ತಿದ್ದೀಯಲ್ಲಾ. ಮೊದಲು ನಿದ್ರೆಯಿಂದ ಎದ್ದು, ಆ ಹಲ್ವಾ ತಿಂದು ಖಾಲಿ ಮಾಡು ಎಂದನು. ಅವನ ಆದೇಶದಂತೆ ಹಲ್ವಾ ತಿಂದು ಮುಗಿಸಿಬಿಟ್ಟೆ' ಎಂದ.



ಉಳಿದಿಬ್ಬರೂ ಬೆಚ್ಚಿ ಬಿದ್ದು ತರಾತುರಿಯಲ್ಲಿ ಮುಚ್ಚಿದ ಪಾತ್ರೆಯನ್ನು ತೆರೆದು ನೋಡಿದಾಗ ಅಲ್ಲಿ ಹಲ್ವಾ ತುಂಡು ಇಲ್ಲವಾಗಿತ್ತು.

ನೀತಿ :– ವಂಚನೆ ಮಾಡಲೇಬೇಕೆಂದು ನಿರ್ಧರಿಸಿದವರಿಗೆ ಅದಕ್ಕೆ ತಕ್ಕಂತೆ ಮನಸ್ಸು ತೀಕ್ಷ್ಣವಾಗಿ ಸಹಕರಿಸುತ್ತದೆ. ಅಂತಹವರಿಗೆ ಚಾಣಾಕ್ಷತನವುಳ್ಳವನು ಸುಲಭವಾಗಿ ಪಾಠ ಕಲಿಸಬಲ್ಲ.



ವಾರಭವಿಷ್ಯ

15.06.2025 ರಿಂದ 21.06.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ–ಮಕರ, ಕುಂಭ, ಮೀನ, ಮೇಷ, ಕುಜ–ಸಿಂಹ, ಬುಧ–ಮಿಥುನ, ಗುರು–ವೃಷಭ, ಶುಕ್ರ–ಮೇಷ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರವೆಲ್ಲಾ ನೀವು ಕ್ರಿಯಾಶೀಲತೆಯಿಂದ ಇರುವಿರಿ. ಕೆಲವು ಸಮಯ ಬಿಡುವೇ ಇಲ್ಲ ಅನಿಸಬಹುದು. ವಾರದ ಆದಿಗೆ ಹಲವು ಮೂಲಗಳಿಂದ ಶುಭ ಫಲವನ್ನು ಪಡೆಯುವಿರಿ. ಸಹೋದರರ ಸಹಕಾರ ದೊರಕುವುದು. ವಾರದ ಉತ್ತರಾರ್ಧಕ್ಕೆ ಅತಿಯಾದ ಪ್ರಯಾಣಗಳಿಂದ ದೇಹ ದಣಿಯುವುದು. ವಿಚಾರ ಮಾಡದೇ ಯಾವುದೇ ನಿರ್ಧಾರ ಬೇಡ. ಸ್ತ್ರೀಯರು ಮಾಂಗಲ್ಯ ಸರ ರಕ್ಷಿಸಿಕೊಳ್ಳಿ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–2

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೂ)

ವಾರದ ಆದಿಗೆ ಪ್ರಮುದಿತಾವಸ್ಥೆಯಲ್ಲಿರುವ ಗುರುವಿನ ಕೃಪೆಯಿಂದ ಅಲ್ಪ ಪರಿಶ್ರಮಕ್ಕೆ ಹೆಚ್ಚಿನ ಲಾಭವನ್ನು ಗಳಿಸುವಿರಿ. ನಿಮ್ಮ ಬಹು ಸಮಯದ ಆಸೆ–ಆಕಾಂಕ್ಷೆಗಳು ಈಡೇರುವುದು. ಉನ್ನತ ವ್ಯಾಸಂಗಕ್ಕೆ ವಿದೇಶ ಪ್ರವಾಸ ಏರ್ಪಡಬಹುದು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚುಗಳು ಹೆಚ್ಚುವುದು. ಉದ್ಯೋಗ ಸಂಬಂಧಿ ಸಂದರ್ಶನಗಳು ಸಫಲವಾಗುವುದು.

ಶ್ರೀ ದೇವೀಸ್ತುತಿ. ಶುಭ ಸಂಖ್ಯೆ–3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಸಾಮಾಜಿಕವಾಗಿಯೂ, ವೈಯಕ್ತಿಕವಾಗಿಯೂ ಶುಭ ಫಲಗಳನ್ನು ನೀಡಲು ಚಂದ್ರ ಸಂಚಾರ ಪೂರಕವಾಗಿದೆ. ಪ್ರೇಮ ಪ್ರಸಂಗಗಳು ವಿವಾಹದಲ್ಲಿ ಸುಖಾಂತ್ಯ ಕಾಣುವುದು. ಸಮಾಜದಲ್ಲಿ ಸದ್ವರ್ತನೆಯಿಂದ ಗೌರವ. ಉತ್ತರ ದಿಕ್ಕಿನ ಪ್ರಯಾಣದಿಂದ ಅನುಕೂಲ. ವಾರದ ಕಡೆಗೆ ಕೆಲಸದ ಒತ್ತಡದಿಂದ ದೇಹ ಬಳಲುವುದು. ಆಹಾರ ವ್ಯತ್ಯಾಸದಿಂದ ಆರೋಗ್ಯ ಕೆಡುವುದು.

ಶ್ರೀ ಸತ್ಯನಾರಾಯಣ ಪ್ರಾರ್ಥನೆ. ಶುಭ ಸಂಖ್ಯೆ–5

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಪೂರ್ವಾರ್ಧಕ್ಕೆ ಮುಂದಾಲೋಚನೆ ಇಲ್ಲದೆ ಮಾಡಿದ ಕೆಲಸಗಳಿಂದ ತೊಂದರೆಗಳು ಎದುರಾಗುವುದು. ಇದಕ್ಕೆ ಸಮಯ ಪ್ರಜ್ಞೆಯ ಕೊರತೆಯೇ ಕಾರಣ. ವಾರ ಮಧ್ಯೆ ಅನುಭವಿಗಳ ಮಾರ್ಗದರ್ಶನದಿಂದ ಸಮಸ್ಯೆಗೆ ಪರಿಹಾರ ದೊರಕುವುದು. ಸ್ನೇಹಿತರ ಸಹಾಯವೂ ಒದಗುವುದು. ವ್ಯಾಪಾರ ವ್ಯವಹಾರಗಳಲ್ಲಿ ಮುನ್ನಡೆ ಹಾಗೂ ಧನಲಾಭ. ಕೇಟರಿಂಗ್, ಹೋಟೆಲ್‌ನಲ್ಲಿ ಹೆಚ್ಚಿನ ಧನಾದಾಯ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–8

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆದಿಗೆ ಸಮಾಜ ಸೇವೆ ಮಾಡುವ ಮೂಲಕ ಗೌರವಾದರಗಳಿಗೆ ಪಾತ್ರರಾಗುವಿರಿ. ಲೇವಾದೇವಿ ವ್ಯವಹಾರಗಳಲ್ಲಿ ಲಾಭವುಂಟು. ಲಾಭ ಸ್ಥಾನ ಸ್ಥಿತ ಗುರು ಬೃಹತ್ ಯೋಜನೆಗಳಿಗೆ ಸಹಾಯಕನಾಗಿದ್ದಾನೆ. ರಿಯಲ್ ಎಸ್ಟೇಟ್ ದಂಧೆಯವರಿಗೆ ಉತ್ತಮ ವ್ಯವಹಾರಗಳು ದೊರೆಯಲಿದೆ. ಕೈಗೆ ಬಂದ ಹಣ ಸದ್ವಿನಿಯೋಗ ಮಾಡಿ. ಮಕ್ಕಳ ಸಾಧನೆಯಿಂದ ಹರ್ಷ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ನಾಣ್ಣುಡಿಯನ್ನು ಈ ವಾರ ಪಾಲಿಸಿದರೆ ಮನಸ್ಸಿಗೆ ನೆಮ್ಮದಿ. ವಾರ ಮಧ್ಯೆ ಚಂದ್ರ ಗ್ರಹದ ಶುಭ ಸಿಂಚನದಿಂದ ಧನ–ಧಾನ್ಯ ಲಾಭ ಮೃಷ್ಟಾನ್ನ ಭೋಜನ, ವಸ್ತ್ರಾಭರಣ ಪ್ರಾಪ್ತಿಯಾಗುವುದು. ನೂತನ ಆವಿಷ್ಕಾರಗಳನ್ನು ಮಾಡಿ ಪ್ರಶಸ್ತಿಗೆ ಪಾತ್ರರಾಗುವಿರಿ. ಕಲಾವಿದರಿಗೆ ಸರ್ಕಾರಿ ಮನ್ನಣೆ ದೊರೆಯುವುದು. ಕರುಳು ಸಂಬಂಧಿ ಕಾಯಿಲೆ ಕಾಡುವುದು.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–1

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

'ಮನಸ್ಸಿನಂತೆ ಮಹಾದೇವ', ನೀವು ಅನ್ಯರಿಗೆ ಒಳಿತನ್ನು ಬಯಸಿದರೆ ಅದರ ಫಲ ಒಳಿತೇ ಆಗುತ್ತದೆ. ನಿಮ್ಮ ಕುಶಲ ಬುದ್ಧಿಯಿಂದ ವ್ಯಾಪಾರ, ವ್ಯವಹಾರಗಳಲ್ಲಿ ಉತ್ತಮ ಧನ ಸಂಪಾದನೆ ಆಗುವುದು. ವೈಯಕ್ತಿಕ ವಿಚಾರದಲ್ಲಿ ಔಚಿತ್ಯಪೂರ್ಣ ತೀರ್ಮಾನಗಳು ನಿಮ್ಮನ್ನು ಹೊಸ ಮಜಲಿಗೆ ಕೊಂಡೊಯ್ಯಲಿದೆ. ಆಧ್ಯಾತ್ಮ, ತತ್ವಜ್ಞಾನಗಳಲ್ಲಿ ಆಸಕ್ತಿ ಮೂಡುವುದು. ವಾರಾಂತ್ಯಕ್ಕೆ ದೈವ ಸನ್ನಿಧಿಗೆ ಭೇಟಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–4

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಆಶಾಭಾವನೆ ಜೀವನಕ್ಕೆ ಟಾನಿಕ್ ಇದ್ದ ಹಾಗೆ. 'ಹಸಿದು ಉಂಡ ಊಟ ಚೆನ್ನ' ಎಂಬ ಗಾದೆಯಂತೆ ಹಲವು ಸಮಯದ ಅಂತರಾಳದ ನಂತರ ಬಹು ನಿರೀಕ್ಷೆಯ ಕೆಲಸವೊಂದು ಕೈಗೂಡುವುದು. ವಾರ ಮಧ್ಯೆ ಬಾಲ್ಯದ ಗೆಳೆಯರ ಸಮಾಗಮ ಖುಷಿ ತರುವುದು. ಮಹಿಳೆಯರು ಐಷಾರಾಮಿ ವಸ್ತುಗಳಿಗೆ ಹಣ ವ್ಯಯಿಸುವರು. ರಾಹು–ಕೇತುಗಳು ದುಡುಕು ನಿರ್ಧಾರ ಹಾಗೂ ಅನುಚಿತ ವ್ಯಕ್ತಿಗಳ ಸಂಗಕ್ಕೆ ಕಾರಣರಾಗುವರು.

ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ–7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಿಮ್ಮ ರಾಶ್ಯಾಧಿಪತಿ ಗುರುವಿನ ಶುಭ ಗೋಚರ ನಿಮಗೆ ಮಂಗಳಕರವಾದದ್ದನ್ನೇ ಮಾಡಲಿದ್ದಾನೆ. ಜೊತೆಗೆ ಚಂದ್ರನ ಕೃಪೆಯಿಂದ ಮನೋವಾಂಛಿತ ಕೆಲಸಗಳಿಗೆ ಪೂರಕ ಫಲವನ್ನು ನೀಡಲಿದ್ದಾನೆ. ಬುದ್ಧಿವಂತರ ಸಂಪರ್ಕದಿಂದ ಕ್ಲಿಷ್ಟ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಹಲವು ಮೂಲಗಳಿಂದ ಧನಾದಾಯವಾಗುವುದು. ಮನೆ ಮಂದಿಯಲ್ಲಿ ಮಧುರ ಭಾವನೆಯನ್ನು ತಾಳಿದರೆ ಉತ್ತಮ.

ಶ್ರೀ ಶಿರಡಿ ಪ್ರಭು ಅರ್ಚನೆ. ಶುಭ ಸಂಖ್ಯೆ–6

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಎರಡು ಪ್ರಮುಖ ಗ್ರಹಗಳಾದ ಶನಿ–ಗುರು ನಿಮ್ಮ ಸಹನ ಶಕ್ತಿಯನ್ನು ಪರೀಕ್ಷಿಸುತ್ತಿದ್ದಾರೆ. ಇದರಿಂದ ಆಗಬೇಕಾದ ಕೆಲಸಗಳು ಆಗದೆಯೂ, ಆಗ ಬಾರದ್ದು ಆಗುತ್ತಲೂ ಸಾಗುತ್ತಿದೆ ನಿಮ್ಮ ಜೀವನ. ನೂತನ ಯೋಜನೆಗಳನ್ನು ಸ್ವಲ್ಪ ಕಾಲ ಮುಂದೂಡುವುದು ಜಾಣತನ. ಸರ್ಕಾರಿ ಕೆಲಸಗಳಲ್ಲಿ ಕೊಂಚ ಮುನ್ನಡೆಯನ್ನು ಕಾಣುವಿರಿ. ವಾರದ ಕಡೆಗೆ ಶುಭ ವಾರ್ತೆ ಬರುವುದು. ದೈವವನ್ನು ನಂಬಿ ನಡೆಯಿರಿ.

ಶ್ರೀ ಶ್ರೀನಿವಾಸ ಸ್ತುತಿ. ಶುಭ ಸಂಖ್ಯೆ–4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಶ್ರೀ ಶನಿಸ್ವಾಮಿಯ ಅವಕೃಪೆಯು ಹೊರತಾಗಿಯೂ ಗುರುಸ್ವಾಮಿಯ ಶುಭ ದೃಷ್ಟಿಯ ಪರಿಣಾಮ ಯತ್ನ ಕಾರ್ಯಗಳು ನಿಮಗೆ ಅನುಕೂಲಕರವಾಗಿ ನಡೆಯುವುದು. ಖರ್ಚುಗಳು ಅಧಿಕವಿದ್ದಾಗ್ಯೂ ಸಮಯಕ್ಕೆ ಸರಿಯಾಗಿ ಹಣ ಒದಗುವುದು. ಪ್ರೇಮ ಪ್ರಸಂಗಗಳು ಆಶಾದಾಯಕ ಫಲವನ್ನು ನೀಡುವುದು. ಕೃಷಿಕರಿಗೆ ಉತ್ತಮ ಫಸಲು ಹಾಗೂ ಆದಾಯ ದೊರೆಯುವುದು. ಅಸಹಾಯಕರಿಗೆ ಸಹಾಯ ಮಾಡಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ವಾರ ನಿಮಗೆ ಶುಭ ಫಲ ಉಂಟಾಗಲು ಮನೋಕಾರಕ ಗ್ರಹನಾದ ಚಂದ್ರಗ್ರಹ ಕಾರಣ. ಸ್ಥಾನಮಾನಾದಿ ಲಾಭ, ಧನ ಸಂಚಯ, ಸುಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ಹೊಸ ಹುರುಪಿನಿಂದ ನಿಮ್ಮ ಸ್ವಂತದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿರಿ. ವ್ಯಯಸ್ಥಿತ ರಾಹುವಿನ ಕಾರಣ ಹಲವರು ನಿಮ್ಮ ವಿರುದ್ಧ ರಹಸ್ಯ ಕಾರ್ಯಾಚರಣೆ ಮಾಡಬಹುದು.

ಶ್ರೀ ದತ್ತಾತ್ರೇಯ ಉಪಾಸನೆ. ಶುಭ ಸಂಖ್ಯೆ–5

ಮೈಸೂರು ಮಿತ್ರ

ಭಾನುವಾರ 15 ಜೂನ್ 2025

ಮೂಲಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಪ್ರತಿಭಟನೆ

ಮನೆ ಇಲ್ಲ, ಶೌಚಾಲಯವಿಲ್ಲ, ರಸ್ತೆ ಇಲ್ಲ, ಲೈಟಿಲ್ಲ.. ಹಾಡಿ ನಿವಾಸಿಗಳ ಬದುಕು ಮೂರಾಬಟ್ಟೆ





ಸೀಗೆವಾಡಿ ಹಾಡಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಸೀಗೆವಾಡಿ ಹಾಡಿಯಲ್ಲಿ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಸರಗೂರು: ತಾಲೂಕಿನ ಬಿ.ಮಟಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸೀಗೆವಾಡಿ ಹಾಡಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಸೀಗೆವಾಡಿ ಹಾಡಿಯಲ್ಲಿ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಈ ವೇಳೆ ಅಖಿಲ ಭಾರತ ಜನಾಧಿಕಾರ ಸುರಕ್ಷಾ ಸಮಿತಿ ಸಂಚಾಲಕ ಸುನಿಲ್ ಮಾತನಾಡಿ ಸೀಗೆವಾಡಿ ಹಾಡಿಯಲ್ಲಿ 30 ಜೇನು ಕುರುಬ ಕುಟುಂಬಗಳು ಯಾವುದೇ ಸೌಕರ್ಯವಿಲ್ಲದೆ ವಾಸಿಸುತ್ತಿವೆ. ಮನೆ, ಶೌಚಾಲಯ, ರಸ್ತೆ, ಬೀದಿ ದೀಪದ ವ್ಯವಸ್ಥೆಯಿಲ್ಲದೆ ನಿವಾಸಿಗಳ ಜೀವನ ಮೂರಾಬಟ್ಟೆಯಾಗಿದೆ. ಹಾಡಿಗೆ ಸಂಪರ್ಕ ಕಲ್ಪಿಸಲು ಎರಡು ರಸ್ತೆಗಳಿದ್ದು, ಬಿ.ಮಟಕೆರೆಯಿಂದ ಸಂಪರ್ಕ ಕಲ್ಪಿಸುತ್ತಿದ್ದ ಒಂದು ರಸ್ತೆ ಒತ್ತುವರಿಯಾಗಿದೆ. ಅಲ್ಲಿ ರಸ್ತೆ ನಿರ್ಮಿಸಲು ಯಾವುದೇ ಜಾಗವೇ ಇಲ್ಲದಂತಾಗಿದೆ. ಇನ್ನೊಂದು ಕಡೆ ಇರುವ ರಸ್ತೆ ಅರಣ್ಯ ಇಲಾಖೆಯ ಕಚೇರಿಯಿಂದ ಅರಣ್ಯದ ಅಂಚಿನಿಂದ ಹಾದು ಹೋಗಿ ಕೆರೆಯನ್ನು ದಾಟಿ ಹೋಗಬೇಕು. ಅಲ್ಲಿ ಮಳೆ ಹೆಚ್ಚಾದಾಗ ಆ ರಸ್ತೆ ಕೆರೆಯ ಬಳಿ ಮುಚ್ಚಿ ಹೋಗುತ್ತದೆ. ಎರಡು ಕಡೆಯಿಂದಲೂ ಸಹ ಹಾಡಿಗೆ ತೆರಳಲು ತೊಂದರೆಯಾಗುತ್ತಿದೆ ಎಂದು ಆಪಾದಿಸಿದರು.

ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ತಮ್ಮ ಬದುಕಿಗಾಗಿ ಹೋರಾಡುತ್ತಿರುವ ಆದಿವಾಸಿಗಳ ಹಕ್ಕುಗಳನ್ನು, ಹಾಗೂ ಈ ಭಾಗದ ಅರಣ್ಯ ವಾಸಿಗಳ ಹಕ್ಕುಗಳನ್ನು ರಕ್ಷಿಸಲು ಅವರ ಹಕ್ಕೊತ್ತಾಯಗಳನ್ನು ಆದ್ಯತೆ ಆಧಾರದ ಮೇಲೆ ಈಡೇರಿಸಬೇಕೆಂದು ಒತ್ತಾಯಿಸಿದರು.

ಹಕ್ಕೋತ್ತಾಯಗಳು: ಹಾಡಿಯಲ್ಲಿ 30 ಹೊಸ ಮನೆಗಳು, ಶೌಚಾಲಯಗಳನ್ನು ನಿರ್ಮಿಸಬೇಕು. ಅಲ್ಲಿಯವರೆಗೆ ತಾತ್ಕಾಲಿಕವಾಗಿ ಮನೆ ಮೇಲ್ಚಾವಣಿ ದುರಸ್ತಿ ಹಾಗೂ ಮಹಿಳೆಯರಿಗೆ ಸಮುದಾಯ ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಿಸಬೇಕು. ಸೀಗೆವಾಡಿ ಹಾಡಿಗೆ ಬಿ ಮಟಕೆರೆಯಿಂದ ಸಂಪರ್ಕ ಕಲ್ಪಿಸುವ ರಸ್ತೆಯ ಒತ್ತುವರಿಯನ್ನು ತೆರವು ಮಾಡಿ ರಸ್ತೆ ನಿರ್ಮಿಸಬೇಕು. ಅಲ್ಲಿ ಯವರೆಗೆ ಮೊಳೆಯೂರು ಅರಣ್ಯ ಇಲಾಖೆ ಕಚೇರಿಯಿಂದ ಹಾಡಿಗೆ ಬರುವ ರಸ್ತೆಯನ್ನು ಡಾಂಬರೀಕರಣ ಮಾಡಬೇಕು. ಕುಡಿಯುವ ನೀರಿನ ನಲ್ಲಿಗಳ ದುರಸ್ತಿ ಮಾಡಬೇಕು. ಜಲ್ ಜೀವನ್ ಮಿಷನ್ ಕಳಪೆ ಕಾಮಗಾರಿಯಿಂದ ಆಗಿರುವ ಸಮಸ್ಯೆಗಳನ್ನು ಬಗೆಹರಿಸಬೇಕು.

ಅರಣ್ಯ ಕಚೇರಿ ರಸ್ತೆಯಿಂದ ಹಾಡಿಯ ಕೊನೆಯವರೆಗೆ ಬೀದಿ ದೀಪ ಹಾಕಿಸಿ. ಬಾಕಿ ಇರುವ ಐದು ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ನೀಡಿ. ಹಾಡಿಯ ಸಮುದಾಯ ಭವನಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿ. ಆಧಾರ್ ಕಾರ್ಡ್, ಪಡಿತರ ಚೀಟಿ ಹೊಂದಿಲ್ಲದವರಿಗೆ ಬಿಪಿಎಲ್ ಪಡಿತರ ಚೀಟಿ ಮಾಡಿಸಿಕೊಡಬೇಕು. ಹೊಸ ಕುಟುಂಬಗಳಿಗೆ ಪೌಷ್ಟಿಕ ಆಹಾರ ಸಾಮಾಗ್ರಿಗಳನ್ನು ವಿತರಿಸಬೇಕು ಎಂದು ಆಗ್ರಹಿಸಿದರು.

ಸೀಗೇವಾಡಿಯ ಬಹುತೇಕರು ಕೃಷಿ ಭೂಮಿ ಇಲ್ಲದ ಕೂಲಿ ಕಾರ್ಮಿಕರಾಗಿದ್ದು. ಕೃಷಿ ಭೂಮಿಯನ್ನು ಒದಗಿಸಬೇಕು. ಅರಣ್ಯ ಹಕ್ಕುಪತ್ರವನ್ನು ವಿತರಿಸಬೇಕು ಹಾಗೂ ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಅವಕಾಶ ನೀಡಬೇಕು. ಪ್ರತಿ ಮನೆಗಳಿಗೂ ಉಚಿತವಾಗಿ ಎಲ್‌ಪಿಜಿ ಸಿಲಿಂಡರ್ ಸಂಪರ್ಕ ಕಲ್ಪಿಸಿ ಸ್ಟೌವ್ ವಿತರಿಸಬೇಕು. ಮುಂದಿನ ದಿನಗಳಲ್ಲಿ ಸಮಸ್ಯೆ ಬಗೆಹರಿಸದಿದ್ದರೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಸೀಗೆವಾಡಿ ಹಾಡಿ ನಿವಾಸಿಗಳಾದ ಚಿಕ್ಕಮ್ಮ, ಕುಮಾರ, ಚಿಕ್ಕ, ಗಣೇಶ, ಕುಳ್ಳ, ಗೌರಿ, ಮಂಜುಳಾ, ಸಿಂಧು, ಬೊಮ್ಮ ಒತ್ತಾಯಿಸಿ ಬಿ.ಮಟಕೆರೆ ಗ್ರಾಪಂಗೆ ಮನವಿಪತ್ರ ಸಲ್ಲಿಸಿ ಆಗ್ರಹಿಸಿದರು.

ಮೈಸೂರು-ಚಾ.ನಗರ ಜಿಲ್ಲಾ ಸಹಕಾರ ಬ್ಯಾಂಕ್ ಚುನಾವಣೆ

ಆಕಾಂಕ್ಷಿ ಬಸವೇಗೌಡ ಭರ್ಜರಿ ಪ್ರಚಾರ



ತಿ.ನರಸೀಪುರ, ಜೂ.14– ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕಿನ ಚುನಾವಣೆ ಹಿನ್ನೆಲೆಯಲ್ಲಿ ಹಿರಿಯ ಸಹಕಾರಿ ಧುರೀಣ, ಬ್ಯಾಂಕ್ ಮಾಜಿ ಅಧ್ಯಕ್ಷ ಸಿ ಬಸವೇಗೌಡ ತಾಲೂಕಿನ ಸಹಕಾರಿ ಮುಖಂಡರನ್ನು ಭೇಟಿ ನೀಡಿ ಸಹಕಾರ ಕೋರುವ ಮೂಲಕ ಬಿರುಸಿನ ಚುನಾವಣಾ ಪ್ರಚಾರ ನಡೆಸಿದರು.

ತಾಲೂಕಿನ ಹಿರಿಯ ಸಹಕಾರಿ ಮುಖಂಡರಾದ ಹೆಮ್ಮಿಗೆ ಗ್ರಾಮದ ಎಚ್.ವಿ. ಶೇಷಾದ್ರಿ ಹಾಗೂ ಹಿರಿಯೂರು ಗ್ರಾಮದ ನಾಗಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಈ ಬಾರಿ ನಡೆಯಲಿರುವ ಬ್ಯಾಂಕು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದು, ಸಹಕಾರ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಅವರು ಸಹಕಾರ ಸಂಘದಲ್ಲಿ ಕಳೆದ 45 ವರ್ಷಗಳಿಂದ ನನಗೆ ಸಹಕಾರ ನೀಡಿ ಆಯ್ಕೆ ಮಾಡುತ್ತಾ ಬಂದಿದ್ದೀರಿ. ಈ ಬಾರಿಯೂ ನನಗೆ ಆಶೀರ್ವದಿಸುವಂತೆ ಕೋರಿದ ಅವರು ತಾಲೂಕಿನ 32 ಸಹಕಾರ ಸಂಘಗಳ ಅಧ್ಯಕ್ಷರುಗಳನ್ನು ಭೇಟಿ ಮಾಡಿ ಅವರ ಸಹಕಾರವನ್ನು ಕೋರುತ್ತಿರುವುದಾಗಿ ತಿಳಿಸಿದರು.

ತಾಲೂಕಿನ ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಪ್ರತಿನಿಧಿಯಾಗಿರುವ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಜೂನ್ 18ರಂದು ನಾಮಪತ್ರ ಸಲ್ಲಿಸುತ್ತಿರುವುದಾಗಿ ಹೇಳಿದರು,


ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರುಗಳನ್ನ ಭೇಟಿ ಮಾಡಿ, ನಾಮಪತ್ರ ಸಲ್ಲಿಸುವಾಗ ತಮ್ಮ ಜೊತೆ ಬಂದು ಸಹಕರಿಸುವಂತೆ ಮನವಿ ಮಾಡಿದ್ದೇನೆ, ಕಳೆದ 45 ವರ್ಷಗಳಿಂದಲೂ ತಾಲೂಕಿನ ಸಹಕಾರ ಬಂಧುಗಳು ನನ್ನನ್ನು ಬೆಂಬಲಿಸುತ್ತಾ ಬಂದಿದ್ದಾರೆ, ಈ ಬಾರಿಯೂ ನನಗೆ ಆಶೀರ್ವಾದ ಮಾಡಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರುವ ಮತದಾರರನ್ನು ಖುದ್ದು ಭೇಟಿ ಮಾಡಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಈ ಬಾರಿಯೂ ನನ್ನನ್ನು ಬೆಂಬಲಿಸುವಂತೆ ಕೋರುವುದಾಗಿ ತಿಳಿಸಿದರು.

ಗ್ರಾಮೀಣ ಪ್ರದೇಶದ ರೈತರಿಗೆ ಸಾಲ ಸೌಲಭ್ಯ ಒದಗಿಸಲು, ಹೆಚ್ಚಿನ ಹಣ ಒದಗಿಸಿಕೊಡುವ ಮೂಲಕ ರೈತರ ವಿಶ್ವಾಸ ಗಳಿಸಿರುವುದಾಗಿ ತಿಳಿಸಿದರು

ತಾಯಿಯಿಂದ ಬೇರ್ಪಟ್ಟಿದ್ದ ಮರಿಯಾನೆ ರಕ್ಷಣೆ

ತಾಯಿಯ ಬಳಿ ಸೇರಿಸಿದ ಅರಣ್ಯ ಸಿಬ್ಬಂದಿ



ಪಿರಿಯಾಪಟ್ಟಣ: ಆಹಾರವನ್ನು ಹುಡುಕುತ್ತ ತಾಯಿ ಆನೆಯೊಂದಿಗೆ ಕಾಡಿನಿಂದ ನಾಡಿಗೆ ಬಂದು ತಪ್ಪಿಸಿಕೊಂಡಿದ್ದ ಮರಿಯಾನೆಯನ್ನು ಅರಣ್ಯ ಸಿಬ್ಬಂದಿ ರಕ್ಷಿಸಿ, ತಾಯಿ ಆನೆಯ ಜೊತೆ ಸೇರಿಸಿದ್ದಾರೆ. ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಆನೆ ಚೌಕೂರು ವಿಭಾಗದ ವರ್ತಿ ಗಿರಿಜನ ಹಾಡಿಯ ಬಳಿ ರಾತ್ರಿಯ ವೇಳೆ ಮೇವನ್ನು ಅರಸಿ ಬಂದಂತಹ ಆನೆಗಳು ಹಿಂದಿರುಗುವ ಸಂದರ್ಭದಲ್ಲಿ 3 ತಿಂಗಳ ಮರಿ ಆನೆಯನ್ನು ಅಲ್ಲಿ ಬಿಟ್ಟು ಕಾಡಿನತ್ತ ಹೋಗಿದ್ದವು. ಬೆಳಗ್ಗೆ 6 ಗಂಟೆ ಸಮಯದಲ್ಲಿ ಮರಿ ಆನೆಯನ್ನು ಕಂಡಂತಹ ಗಿರಿಜನ ಹಾಡಿಯ ಯುವಕರು ಮರಿ ಆನೆಯನ್ನು ಕಟ್ಟಿಹಾಕಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು.

ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಅಧಿಕಾರಿಗಳು ಕಾಡಿನಲ್ಲಿದ್ದ ತಾಯಿ ಆನೆಯನ್ನು ಹುಡುಕಿ ಮರಿ ಆನೆಯನ್ನು. ತಾಯಿಯೊಂದಿಗೆ ಸೇರಿಸುವಲ್ಲಿ ಯಶಸ್ವಿಯಾದರು. ಈ ಸಂದರ್ಭದಲ್ಲಿ ವಲಯ ಅರಣ್ಯ ಅಧಿಕಾರಿ ಸುಬ್ರಮಣಿ, ಗಸ್ತು ಅರಣ್ಯಪಾಲಕ ಸತೀಶ್, ಅರಣ್ಯ ಸಿಬ್ಬಂದಿಗಳಾದ ಶಶಿಧರ್, ಪ್ರದೀಪ್, ಮಧು, ಮಹೇಶ್ ಇದ್ದರು.

ಸರ್ಕಾರಿ ಶಾಲೆಯ ಬಿಸಿಯೂಟದ ಅಕ್ಕಿಯಲ್ಲಿ ಹುಳು ಪತ್ತೆ; ಪೋಷಕರ ಆಕ್ರೋಶ



ಪೋಷಕರು ಮುಖ್ಯ ಶಿಕ್ಷಕನನ್ನು ತರಾಟೆಗೆ ತೆಗೆದುಕೊಂಡಿರುವ ದೃಶ್ಯ.

ನಂಜನಗೂಡು: ವರುಣ ವಿಧಾನಸಭಾ ಕ್ಷೇತ್ರದ ನಂಜನಗೂಡು ತಾಲೂಕಿನ ಚಿಕ್ಕಹೊಮ್ಮ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಬೆಳಗಿನ ಉಪಹಾರದ ಬಿಸಿಯೂಟದ ಅಕ್ಕಿಯಲ್ಲಿ ಹುಳು ಪತ್ತೆಯಾಗಿದ್ದು. ಹುಳು ಮಿಶ್ರಿತ ಅಕ್ಕಿಯನ್ನು ಬಳಕೆ ಮಾಡಿ ಬಿಸಿಯೂಟ ತಯಾರಿಸಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ.

ಮುಖ್ಯ ಶಿಕ್ಷಕ ಶಿವಸ್ವಾಮಿ ಎಂಬುವರು ರೇಷನ್ ಬಂದಿಲ್ಲ ಎಂದು ನೆಪವೊಡ್ಡಿ ಹುಳು ಮಿಶ್ರಿತ ಅಕ್ಕಿಯನ್ನು ಬಳಸಿ ಬಿಸಿಯೂಟ ತಯಾರಿಸಿದ್ದಾರೆ, ಈ ಬಗ್ಗೆ ಪ್ರಶ್ನೆ ಮಾಡಿದಾಗ ನಮಗೆ ರೇಷನ್ ಬಂದಿಲ್ಲ ಎಂದು ಸುಳ್ಳು ಹೇಳಿದ್ದಾರೆ, ಆದರೆ, ತಮ್ಮ ಕೊಠಡಿಯಲ್ಲಿಯೇ ಸುಮಾರು ಮೂರುವರೆ ಮೂಟೆಯಷ್ಟು ಅಕ್ಕಿ ದಾಸ್ತಾನು ಇಟ್ಟುಕೊಂಡು ನಮ್ಮಲ್ಲಿ ರೇಷನ್ ಇಲ್ಲ ಎಂದು ಸುಳ್ಳು ಹೇಳಿದ್ದಾರೆ, ಶಾಲಾ ಮಕ್ಕಳಿಗೆ ನೀಡುವ ಆಹಾರ ಪದಾರ್ಥಗಳನ್ನು ಮುಖ್ಯ ಶಿಕ್ಷಕ ಶಿವಸ್ವಾಮಿ ಮಾರಾಟ ಮಾಡಿಕೊಳ್ಳುತ್ತಿದ್ದಾರೆ ಎಂದು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಗಂಭೀರ ವಾಗಿ ಆರೋಪ ಮಾಡಿದರು.

ನಮ್ಮ ಶಾಲೆಯಲ್ಲಿಯೇ ಇರುವ ಅಕ್ಕಿಯನ್ನು ಬೇರೆ ಶಾಲೆಗೆ ಕಳುಹಿಸಿದ್ದಾರೆ. ನಮ್ಮ ಮಕ್ಕಳಿಗೆ ಹುಳು ಬಂದಿರುವ ಆಹಾರ ಪದಾರ್ಥಗಳನ್ನು ಅಡುಗೆಗೆ ಬಳಸುತ್ತಿದ್ದಾರೆ. ದಾಸ್ತಾನು ಇದ್ದರೂ ನಮಗೆ ಸರ್ಕಾರದಿಂದ ದಾಸ್ತಾನು ಬಂದಿಲ್ಲ ಎಂದು ಸುಳ್ಳು ಹೇಳಿರುವ ಇಂತಹ ಬೇಜಾಬ್ದಾರಿ ಮುಖ್ಯ ಶಿಕ್ಷಕನನ್ನು ಕೂಡಲೇ ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಪೋಷಕರು ಮುಖ್ಯ ಶಿಕ್ಷಕನನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡ ಘಟನೆ ಜರುಗಿದೆ.

ಗಾಂಜಾ ಸಾಗಿಸುತ್ತಿದ್ದ ಆರೋಪಿ ಬಂಧನ



ಹುಣಸೂರು, ಜೂ.14– ಪ್ಯಾಸೆಂಜರ್ ಆಟೋದಲ್ಲಿ ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ನಗರ ಠಾಣಾ ಪೋಲೀಸರು ಬಂಧಿಸಿ ಆಟೋ ವಶಪಡಿಸಿಕೊಂಡಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಪಂಚವಳ್ಳಿ ಗ್ರಾಮದ ಸಯ್ಯದ್ ಯೂನಸ್ ಬಂಧಿತ ಆರೋಪಿ, ಈತನಿಂದ 50 ಸಾವಿರ ಮೌಲ್ಯದ 926 ಗ್ರಾಂ. ಒಣ ಗಾಂಜಾ ಹಾಗೂ ಬಜಾಜ್ ಪ್ಯಾಸೆಂಜರ್ ಆಟೋ(ಕೆಎ–12 ಸಿ4359) ವನ್ನು ವಶಪಡಿಸಿಕೊಳ್ಳಲಾಗಿದೆ.

ಮೈಸೂರು ಕಡೆಯಿಂದ ಪಂಚವಳ್ಳಿ ಕಡೆಗೆ ಗಾಂಜಾ ಸಾಗಾಟದ ಬಗ್ಗೆ ಬಂದ ಮಾಹಿತಿ ಮೇರೆಗೆ ಹುಣಸೂರು ಟೌನ್ ಪೊಲೀಸರು ನಗರಕ್ಕೆ ಸಮೀಪದ ಹಾಲಗೆರೆ ಜಂಕ್ಷನ್ ಬಳಿ ಆಟೋ ಅಡ್ಡಗಟ್ಟಿ ತಪಾಸಣೆ ನಡೆಸಲಾಗಿ ಹಣ ಸಂಪಾದನೆಗಾಗಿ ಗಾಂಜಾ ಸಾಗಿಸುತ್ತಿರುವುದಾಗಿ ಒಪ್ಪಿಕೊಂಡಿದ್ದಾನೆ.

ಡಿವೈಎಸ್ಪಿ ಗೋಪಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಎಸ್.ಐ.ಗಳಾದ ಜಮೀರ್ ಅಹಮದ್, ಮಹಾಲಿಂಗಯ್ಯ, ಸಿಬ್ಬಂದಿ ಅರುಣ್, ಶ್ರೀರಾಜರತ್ನಂ, ಮಂಜುನಾಥ್, ಇರ್ಫಾನ್, ಮಹೇಂದ್ರ, ರವಿಕುಮಾರ್ ಭಾಗವಹಿಸಿದ್ದರೆಂದು ಇವರ ಕಾರ್ಯಕ್ಷಮತೆ ಮತ್ತು ಸಾಧನೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ.ವಿಷ್ಣುವರ್ಧನ ಪ್ರಶಂಸಿಸಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ತಿ.ನರಸೀಪುರ ತಾಲೂಕಿನ ಯಾಚೇನಹಳ್ಳಿ ಗ್ರಾಮದ ಸುಲ್ತಾನ ರಸ್ತೆಯಿಂದ ನೇರಲಕೆರೆಯ ಮುಖ್ಯ ರಸ್ತೆವರೆಗೂ ಒಂದೂವರೆ ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶ್ರೀರಂಗಪಟ್ಟಣ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ಗುದ್ದಲಿ ಪೂಜೆ ನೆರವೇರಿಸಿದರು. ರಾಮಕೃಷ್ಣ ಸೇವಾಶ್ರಮದ ಸ್ವಾಮೀಜಿ ನಾದನಂದ ಸ್ವಾಮೀಜಿ, ಬನ್ನೂರು ಕಾಂಗ್ರೆಸ್ ಮುಖಂಡರಾದ ಯಾಚೇನಹಳ್ಳಿ ಅಶೋಕ್ ಕುಮಾರ್, ನೇರಲಕೆರೆ ಪಟೇಲ್ ಸುರೇಶಣ್ಣ, ಅರಕೆರೆ ತಾಲೂಕಿನ ಪಂಚಾಯಿತಿ ಮಾಜಿ ಸದಸ್ಯರಾದ ಸಂತೋಷ, ಮುಖಂಡರಾದ ರಾಮಸ್ವಾಮಿ ಕಂಟ್ರಾಕ್ಟರ್ ಶಶಾಂಕ್, ಪಿಎಸ್ಐ ವಿನೋದ್ ಹಾಗೂ ಅಧಿಕಾರಿಗಳು ಹಾಜರಿದ್ದರು

ಮೂವರು ಬೈಕ್ ಕಳ್ಳರ ಬಂಧನ: ಬೈಕುಗಳ ವಶ



ಹುಣಸೂರು, ಜೂ.14– ಓರ್ವ ಬಾಲಾಪರಾಧಿ ಸೇರಿದಂತೆ ಮೂವರು ಬೈಕ್ ಕಳ್ಳರನ್ನು ಬಂಧಿಸಿ ವಿವಿಧೆಡೆ ಕಳ್ಳತನ ಮಾಡಿದ್ದ 9 ಬೈಕ್‌ಗಳನ್ನು ಹುಣಸೂರು ನಗರ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಹುಣಸೂರು ತಾಲೂಕು ನಂಜಾಪುರದ ಸುಮಂತ, ಪಿರಿಯಾಪಟ್ಟಣ ತಾಲೂಕಿನ ಚಾಮರಾಯನಕೋಟೆ ಗ್ರಾಮದ ಅಭಿಷೇಕ್, ಕಣಗಾಲು ಗ್ರಾಮದ ಸೂರ್ಯ (ಬಾಲಾಪರಾಧಿ) ಬಂಧಿತರು.

ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಕಳ್ಳತನ: ಆರೋಪಿಗಳು ಮೈಸೂರು ಜಿಲ್ಲೆಯ ಹುಣಸೂರು ಟೌನ್, ಬಿಳಿಕೆರೆ, ಪಿರಿಯಾಪಟ್ಟಣ, ಬೆಟ್ಟದಪುರ, ಕೋಣನೂರು. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಗಳಲ್ಲಿ ಕಳ್ಳತನ ಮಾಡಿದ್ದ 3.60 ಲಕ್ಷರೂ ಬೆಲೆಬಾಳುವ ಒಂದು ಯಮಹಾ ಹಾಗೂ 9 ಸ್ಪೆಂಡರ್ ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಜಿಲ್ಲೆಯಲ್ಲಿ ಬೈಕ್ ಕಳ್ಳತನ ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಎಸ್.ಪಿ.ವಿಷ್ಣುವರ್ಧನ್‌ರವರು ಎಎಸ್ಪಿಗಳಾದ ಮಲಿಕ್, ನಾಗೇಶ್, ಡಿವೈಎಸ್ಪಿ ಗೋಪಾಲಕೃಷ್ಣರ ಮಾರ್ಗದರ್ಶನದಲ್ಲಿ ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ನೇತೃತ್ವದಲ್ಲಿ ತಂಡ ರಚಿಸಿದ್ದರು.

ಕಾರ್ಯಾಚರಣೆಗಿಳಿದ ತಂಡವು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಬೈಕ್ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಲಾಯಿತೆಂದು ಪೊಲೀಸರು ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಬಸವೇಗೌಡ, ಎಚ್.ಎನ್.ಅರುಣ್, ದಿಲೀಪ್ ಮಹೇಂದ್ರ, ರವಿಕುಮಾರ್, ಡಿ.ಎ.ಇರ್ಫಾನ್, ಲಕ್ಷ್ಮಮ್ಮ ಭಾಗವಹಿಸಿದ್ದರು.

ದೇವಸ್ಥಾನದ ಬೀಗ ಮುರಿದು ಗಂಟೆ, ತೂಗುದೀಪ, ತಟ್ಟೆ ಕಳವು

ತಿ.ನರಸೀಪುರ, ಜೂ.14– ತಾಲೂಕಿನ ಬೆಟ್ಟದ ಹೊಸೂರು ಗ್ರಾಮದ ಬಳಿಯಿರುವ ಶ್ರೀ ಬಸವೇಶ್ವರ ದೇವಸ್ಥಾನದ ಬೀಗವನ್ನು ಮುರಿದಿರುವ ಕಳ್ಳರು, ದೇವಾಲಯದಲ್ಲಿದ್ದ 20 ಸಾವಿರ ರೂ. ಮೌಲ್ಯದ ವಸ್ತುಗಳನ್ನು ದೋಚಿರುವ ಘಟನೆ ಗುರುವಾರ ರಾತ್ರಿ ನಡೆದಿದ್ದು, ಶುಕ್ರವಾರ ಬೆಳಕಿಗೆ ಬಂದಿದೆ.

ಗ್ರಾಮಕ್ಕೆ ಸೇರಿದ ಶ್ರೀ ಬಸವೇಶ್ವರ ದೇವಸ್ಥಾನ ಬೆಟ್ಟದ ತಪ್ಪಲಿನಲ್ಲಿದ್ದು, ಎಂದಿನಂತೆ ಅರ್ಚಕ ಶಾಂತಮೂರ್ತಿ ಅವರು ಶುಕ್ರವಾರ ಬೆಳಗ್ಗೆ ದೇವರಿಗೆ ಪೂಜೆ ಸಲ್ಲಿಸಲು ಬಂದಾಗ ದೇವಸ್ಥಾನದ ಬಾಗಿಲಿನ ಬೀಗ ಮುರಿಯಲಾಗಿತ್ತು. ಒಳ ಹೋಗಿ ನೋಡಲಾಗಿ ದೇವಸ್ಥಾನದ ಎರಡು ಹಿತ್ತಾಳೆ ಗಂಟೆಗಳು, ಎರಡು ಬೆಳ್ಳಿ ತೂಗು ದೀಪ, ತಟ್ಟೆ ಹಾಗೂ ಹೊರಭಾಗದಲ್ಲಿ ಇಟ್ಟಿದ್ದ ಎರಡು ವಿದ್ಯುತ್ ಕಂಬಗಳು ಸೇರಿದಂತೆ ಸುಮಾರು 20 ಸಾವಿರ ಬೆಲೆಬಾಳುವ ವಸ್ತುಗಳು ಕಳ್ಳತನವಾಗಿತ್ತು. ಈ ಸಂಬಂಧ ತಲಕಾಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನಾ ಸ್ಥಳದ ಮಹಜರು ನಡೆಸಿರುವ ಪೊಲೀಸರು ಕಳ್ಳರ ಬಂದನಕ್ಕೆ ಕ್ರಮ ಕೈಗೊಂಡಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪರಿಸರ ಜಾಗೃತಿ



ನಂಜನಗೂಡು: ತಾಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಗರದ ಟೌನ್ ಪೊಲೀಸ್ ಠಾಣಾ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಗಿಡ ನೆಡುವ ಮೂಲಕ ಜನಸಾಮಾನ್ಯರಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಿದರು.

ನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಿ.ಎ.ರವೀಂದ್ರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ವಲಯದ ಮೇಲ್ವಿಚಾರಕರಾದ ಪ್ರತಿಮಾ ಮತ್ತು ಕೃಷಿ ಮೇಲ್ವಿಚಾರಕರಾದ ಜಯಪಾಲ್ ಅವರು ಮಾತನಾಡಿ ಪರಿಸರ ಸಂರಕ್ಷಣೆ ಬಗ್ಗೆ ಮಾಹಿತಿಯನ್ನು ನೀಡುವ ಮೂಲಕ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಎಸ್.ಎ.ಎಲ್. ಮೂರ್ತಿ, ಎನ್.ಮಂಜುನಾಥ್, ಲಕ್ಷ್ಮಣ್, ಸವಿತ, ಮಮತಾ, ಸುಶೀಲಮ್ಮ, ಗೀತಾರಾಣಿ, ಶೈಲಾ, ಸಂಜನಾ, ರಮ್ಯ, ಹಾಗೂ ತಾಲೂಕು ಕೃಷಿ ಮೇಲ್ವಿಚಾರಕರು, ವಲಯ ಮೇಲ್ವಿಚಾರಕರು, ಸೇವಾಪ್ರತಿನಿಧಿಗಳು, ಎರಡು ಠಾಣೆಯ ಸಿಬ್ಬಂದಿ ವರ್ಗದವರು ಹಾಗೂ ಕಾರ್ಯಕರ್ತರುಗಳು ಭಾಗವಹಿಸಿದ್ದರು.

ಬನ್ನೂರಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ಬನ್ನೂರಿನಲ್ಲಿ ರೋಟರಿ ಸಂಸ್ಥೆ, ಕಾನ್‌ಸಿಂಗ್‌ಜೀ ರಾಜ್‌ಪುರೋಹಿತ್, ಶ್ರೀ ಗೌರಿದೇವಿ, ಲಯನ್ಸ್ ಕ್ಲಬ್ ಆಫ್ ಈರೋಡ್ ಕಾವೇರಿ ಟ್ರಸ್ಟ್, ಕೊಯಮತ್ತೂರು ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಶನಿವಾರ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಮಾಜಿ ರೋಟರಿ ಅಧ್ಯಕ್ಷ ಡಾ.ಮಹೇಂದ್ರಸಿಂಗ್ ಕಾಳಪ್ಪ, ಕೆ.ರಾಜೇಶ್‌ಕುಮಾರ್, ಡಾ.ಶಮೀಕ್ಷಾ ಮೋದಿ, ಡಾ.ಕಸ್ತೂರಿ ದಬೋಲೆ, ನಂಜುಂಡಸ್ವಾಮಿ, ಯಾಸೀನ್, ಮೂರ್ತಿ ಸೇರಿದಂತೆ ಹಲವರು ಉಪಸ್ಥಿತರಿಸಿದ್ದರು.

ಮಳೆ ಹಾನಿ ಪ್ರದೇಶಗಳಿಗೆ ಖುದ್ದು ತೆರಳಿ ಸಮಸ್ಯೆ ಪರಿಹರಿಸಿ

ಕೆ.ಆರ್.ನಗರದ ಅಧಿಕಾರಿಗಳಿಗೆ ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಸೂಚನೆ



ಕೆ.ಆರ್.ನಗರದ ತಾಲೂಕು ಕಚೇರಿಯ ಸಭಾಂಗಣದಲ್ಲಿ ನಡೆದ ಮಳೆಹಾನಿ ಕುರಿತ ಮುಂಜಾಗ್ರತಾ ಕ್ರಮಗಳ ಪರಿಶೀಲನಾ ಸಭೆಯಲ್ಲಿ ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಕೆ.ಆರ್.ನಗರ: ತಾಲೂಕಿನಲ್ಲಿ ಕೆಲ ದಿನಗಳಿಂದ ನಿರಂತರ ಮಳೆಯಾಗುತ್ತಿದ್ದು, ಹಾನಿ ಕುರಿತು ಯಾವುದೇ ದೂರು ಬಂದರು ಕೂಡಲೇ ಸ್ಪಂದಿಸಿ ಮಳೆ ಹಾನಿ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಮುಂದಾಗಬೇಕು ಎಂದು ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಸೂಚನೆ ನೀಡಿದ್ದಾರೆ.

ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ನಡೆದ ಮಳೆಹಾನಿ ಕುರಿತ ಸಭೆಯಲ್ಲಿ ಮಾತನಾಡಿದ ಅವರು ಶಾಲಾ–ಕಾಲೇಜು ಮತ್ತು ಮನೆಗಳಿಗೆ ಹಾಗೂ ರಸ್ತೆ ಹಾನಿ ಮಾಡುವ ಮರಗಳನ್ನು ತೆರವುಗೊಳಿಸಬೇಕು ಎಂದು ಸೂಚಿಸಿದರು. ಮರಗಳಿಂದ ಹಾನಿಯಾದರೆ ಅರಣ್ಯ ಇಲಾಖೆ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದರು.

ನಗರದಲ್ಲಿ ಪುರಸಭೆ ಅಧಿಕಾರಿಗಳು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆಯಾ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು ಕೆಲಸ ಮಾಡುವುದರ ಜತೆಗೆ ಮೊಬೈಲ್ ಪೋನ್‌ಗಳನ್ನು ಚಾಲ್ತಿಯಲ್ಲಿಟ್ಟುಕೊಂಡು ಸಾರ್ವಜನಿಕರಿಂದ ದೂರು ಬಂದ ಕೂಡಲೇ ಸ್ಥಳಕ್ಕೆ ಭೇಟಿ ನೀಡಬೇಕು ಎಂದು ಸೂಚಿಸಿದರು.

ನದಿ ಭಾಗದಲ್ಲಿ ಇರುವಂತಹ ಗ್ರಾಮಗಳಲ್ಲಿ ಪಂಚಾಯಿತಿ ವತಿಯಿಂದ ಡಂಗೂರ ಸಾರಿಸಿ ನದಿಗೆ ಇಳಿಯದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಇದರ ಜತೆಗೆ ನೀರಾವರಿ ಇಲಾಖೆಯವರು ನಾಲೆಗಳ ಏರಿಗಳು, ತಡೆಗೋಡೆಗಳನ್ನು ಹಾಳಾಗುವುದನ್ನು ತಡೆಯಲು ಸಂಬಂಧಪಟ್ಟ ಇಂಜಿನಿಯರ್‌ಗಳು ಮುಂಜಾಗ್ರತ ಕ್ರಮ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳಲ್ಲಿ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಲು ಆರೋಗ್ಯ ಇಲಾಖೆಯವರು ಬೇಕಾಗುವ ಸಿದ್ದತೆಗಳನ್ನು ಮಾಡಿಕೊಳ್ಳಬೇಕು ಈ ಬಗ್ಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದಲ್ಲದೆ ಅವಘಡಗಳು ಸಂಭವಿಸಿದಾಗ ತುರ್ತು ವಾಹನಗಳು ತಕ್ಷಣ ಸೇವೆ ನೀಡಲು ಸಿದ್ದತೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ. ಡಿ. ನಟರಾಜ್, ಕೃಷಿ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್, ಚೆಸ್ಕಾಂ ಎಇಇ ಅರ್ಕೇಶ್‌ಮೂರ್ತಿ, ಉಪ ವಲಯ ಅರಣ್ಯಾಧಿಕಾರಿ ಮಂಜುನಾಥ್, ಅಗ್ನಿಶಾಮಕ ಠಾಣಾಧಿಕಾರಿ ಲಕ್ಷ್ಮಿಕಾಂತ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಈ ವೇಳೆ ಹಾಜರಿದ್ದರು.

ಸ್ವಚ್ಛತೆ ಕಾಣದ ಚರಂಡಿ



ಧಾರ್ಮಿಕ ಕ್ಷೇತ್ರ ಎನಿಸಿ ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದ ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಮುಂಭಾಗದ ಚರಂಡಿಯಲ್ಲಿ ತ್ಯಾಜ್ಯ ಸಂಗ್ರಹಗೊಂಡು ಭಕ್ತರಿಗೆ ಮುಜುಗರ ಉಂಟು ಮಾಡಿದ್ದು ಗ್ರಾಮದ ಕೆಲವೆಡೆ ಕಸ ವಿಲೇವಾರಿಯಾಗದೆ ಅನೈರ್ಮಲ್ಯ ತಾಂಡವವಾಡುತ್ತಿದೆ.

ಈಶ್ವರ ಶೆಟ್ಟಿ ನಿಧನ



ಹುಣಸೂರು, ಜೂ.14–ಹುಣಸೂರಿನ ಕಲ್ಕುಣಿಕೆ ಬಡಾವಣೆ ನಿವಾಸಿ ಈಶ್ವರ ಶೆಟ್ಟಿ(75) ಇಂದು ನಿಧನರಾಗಿದ್ದಾರೆ.

ಮೃತರು ಪತ್ನಿ, ತಾಲೂಕು ಮಡಿವಾಳ ಸಂಘಟನೆ ಖಜಾಂಚಿ ನಂಜುಂಡ ಸೇರಿ ಮೂವರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 3 ಗಂಟೆಗೆ ಲಕ್ಷ್ಮಣತೀರ್ಥ ನದಿ ದಡದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ನಮ್ಮ ಮೈಸೂರು, ಸ್ವಚ್ಛ ಮೈಸೂರು’ ಸ್ವಚ್ಛತಾ ಅಭಿಯಾನದಲ್ಲಿ ಸಾವಿರಾರು ಮಂದಿ ಭಾಗಿ





ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಶನಿವಾರ ‘ನಮ್ಮ ಮೈಸೂರು, ಸ್ವಚ್ಛ ಮೈಸೂರು’ ಶೀರ್ಷಿಕೆಯಲ್ಲಿ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನದಲ್ಲಿ ಪ್ಲಾಸ್ಟಿಕಾಸುರ ವೇಷಧಾರಿಯೊಂದಿಗೆ ಪ್ಲಾಸ್ಟಿಕ್ ಬಳಕೆ ತ್ಯಜಿಸುವ ಪ್ರತಿಜ್ಞೆ ಸ್ವೀಕರಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಕಾಣಬಹುದು.

ಮೈಸೂರು, ಜೂ.14(ಎಂಟಿವೈ)– ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಶನಿವಾರ ‘ನಮ್ಮ ಮೈಸೂರು ಸ್ವಚ್ಛ ಮೈಸೂರು’ ಶೀರ್ಷಿಕೆಯಲ್ಲಿ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ರಿಂಗ್ ರಸ್ತೆಯಲ್ಲಿ ಪ್ಲಾಸ್ಟಿಕ್ ಸೇರಿದಂತೆ ತ್ಯಾಜ್ಯ ಸಂಗ್ರಹಿಸಿ ಸ್ವಚ್ಛತೆ ಕಾಪಾಡಿದರು.

ಮೈಸೂರು ಮಹಾನಗರ ಪಾಲಿಕೆ ಆಯೋಜಿಸಿದ್ದ ಅಭಿಯಾನದಲ್ಲಿ ಪಾಲಿಕೆ ಸಿಬ್ಬಂದಿ, ಸಿಐಐ ಕಾನ್ಫಡರೇಷನ್ ಅಫ್ ಇಂಡಿಯನ್ ಇಂಡಸ್ಟ್ರೀಸ್, ವಿವಿಧ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡು ಮೈಸೂರಿನ ರಿಂಗ್ ರಸ್ತೆಯುದ್ದಕ್ಕೂ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡರು. ರಿಂಗ್ ರಸ್ತೆಯ ಎರಡೂ ಬದಿಯಲ್ಲಿ ಬೀಸಾಡಿದ್ದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿದರು. ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ‘ನಮ್ಮ ಮೈಸೂರು–ಸ್ವಚ್ಛ ಮೈಸೂರು’ ಸಂದೇಶ ಸಾರಿದರು.

ಸ್ವಚ್ಛತೆಯೊಂದಿಗೆ ಏಕಬಳಕೆ ಪ್ಲಾಸ್ಟಿಕ್ ನಿಷೇಧಿಸಬೇಕು: ರಿಂಗ್ ರಸ್ತೆಯಲ್ಲಿ ಸ್ವಚ್ಛತಾ ಅಭಿಯಾನ ಪೂರ್ಣಗೊಂಡ ನಂತರ ಸಂಗ್ರಹವಾದ ಪ್ಲಾಸ್ಟಿಕ್ ತ್ಯಾಜ್ಯದೊಂದಿಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನಕ್ಕೆ ಸ್ವಯಂಸೇವಕರು, ವಿದ್ಯಾರ್ಥಿಗಳು ಆಗಮಿಸಿದರು. ಈ ವೇಳೆ ಪಾಲಿಕೆ ವತಿಯಿಂದ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನದ ಕಾರ್ಯಕ್ರಮದಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರು ನಗರ ಸ್ವಚ್ಛತೆಗೆ ಹೆಸರಾಗಿದೆ. ಈ ಹಿಂದೆ ಸ್ವಚ್ಛ ನಗರಿ ಎಂಬ ಬಿರುದಿಗೂ ಪಾತ್ರವಾಗಿದ್ದು, ಅದನ್ನು ಮುಂದುವರೆಸಿಕೊಂಡು ಹೋಗಬೇಕಾದ ಜವಾಬ್ದಾರಿ ಎಲ್ಲರದ್ದಾಗಿದೆ. ಮೈಸೂರು ನಗರದಲ್ಲಿ ಸ್ವಚ್ಛತೆ ಕಾಪಾಡುವುದರೊಂದಿಗೆ ಪರಿಸರಕ್ಕೆ ಧಕ್ಕೆಯಾಗುವ ಏಕ ಬಳಕೆ ಪ್ಲಾಸ್ಟಿಕ್ ಮಾರಾಟ ಹಾಗೂ ಬಳಕೆಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಾಗುತ್ತಿದೆ. ಜನ ತಮಗೆ ಅರಿವಿಲ್ಲದಂತೆ ಪ್ಲಾಸ್ಟಿಕ್ ಬಳಕೆಗೆ ಮೊರೆ ಹೋಗಿದ್ದಾರೆ. ಇದರಿಂದ ಪರಿಸರದ ಮೇಲೆ ಅಗಾಧವಾದ ದುಷ್ಪರಿಣಾಮ ಬೀರುತ್ತಿದೆ. ಪ್ರತಿದಿನವೂ ಒಂದಲ್ಲಾ ಒಂದು ಕಾರಣಕ್ಕೆ ಪ್ಲಾಸ್ಟಿಕ್ ಅನ್ನು ಅವಲಂಬಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ಬಳಕೆಗೆ ಸ್ವಯಂ ಕಡಿವಾಣ ಹಾಕಬೇಕು. ಪಾಲಿಕೆ ಕೈಗೊಂಡ ಕಾರ್ಯಕ್ರಮಕ್ಕೆ ಸಾರ್ವಜನಿಕರು ಬೆಂಬಲ ನೀಡಬೇಕು. ಪ್ಲಾಸ್ಟಿಕ್ ಬಳಕೆ ನಿಯಂತ್ರಿಸಿದರೆ ಸುಸ್ಥಿರ ಬದುಕು ಸಾಧಿಸಬಹುದು. ಅಲ್ಲದೆ, ಆರೋಗ್ಯದೊಂದಿಗೆ ಪರಿಸರ ಸಂರಕ್ಷಣೆ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಪ್ಲಾಸ್ಟಿಕಾಸುರ ವೇಷ ಧರಿಸಿದ್ದ ವ್ಯಕ್ತಿಯೊಬ್ಬರು ಗಮನ ಸೆಳೆದರು. ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟೋಣ (ಎಂಡಿಂಗ್ ಪ್ಲಾಸ್ಟಿಕ್ ಪೊಲಿಷನ್) ಸಂದೇಶ ಮಾನವ ಸರಪಳಿ ರಚಿಸಲಾಯಿತು. ಅಲ್ಲದೆ, ಪ್ಲಾಸ್ಟಿಕ್ ಬಳಕೆ ತ್ಯಜಿಸುವುದಾಗಿ ಪ್ರತಿಜ್ಞೆ ಸ್ವೀಕರಿಸಲಾಯಿತು.

ಈ ಸಂದರ್ಭದಲ್ಲಿ ಪಾಲಿಕೆಯ ಉಪ ಆಯುಕ್ತರಾದ ಸಿಂಧು, ಪಾಲಿಕೆ ಆರೋಗ್ಯಾಧಿಕಾರಿ ಡಾ.ಎನ್.ಪಿ ವೆಂಕಟೇಶ್, ಎಇಇ, ಪರಿಸರ ಇಂಜಿನಿಯರ್, ಆರೋಗ್ಯ ಪರೀವೀಕ್ಷಕರು, ಸಿಐಐ ತಂಡ ಸದಸ್ಯರು ಉಪಸ್ಥಿತರಿದ್ದರು.

ಆರ್‌ಸಿಬಿ ವಿಜಯೋತ್ಸವ ಕಾಲ್ತುಳಿತ ದುರಂತ ವಿಷಯಾಂತರಕ್ಕೆ ಸಿಎಂ ಸಿದ್ದರಾಮಯ್ಯ ಯತ್ನ

ವೈಫಲ್ಯಗಳ ಮರೆಮಾಚಲು ಕೇಂದ್ರದ ಮೇಲೆ ಗೂಬೆ ಕೂರಿಸುವ ಯತ್ನ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ



ಬೆಂಗಳೂರು, ಜೂ.14(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿ ಕುಳಿತು ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನ, ಕುತಂತ್ರ ಮತ್ತು ಷಡ್ಯಂತ್ರ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಮುಖ್ಯಮಂತ್ರಿ ದೊಡ್ಡ ಮನಸ್ಸು ಮಾಡಿ, ಮುಜುಗರ ಬಿಟ್ಟು ಕೇಂದ್ರ ಸರ್ಕಾರ ಕರೆದ 16ನೇ ಹಣಕಾಸು ಆಯೋಗ ಸಭೆಯಲ್ಲಿ ಭಾಗವಹಿಸಿ, ರಾಜ್ಯದ ಪರ ವಿಚಾರ ಮಂಡನೆ ಮಾಡಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಿದ್ದರಾಮಯ್ಯ ಕರ್ನಾಟಕದ ಮುಖ್ಯಮಂತ್ರಿಯೇ ಅಥವಾ ಕಾಂಗ್ರೆಸ್ ಮುಖ್ಯಮಂತ್ರಿಯೇ ಎಂಬ ಸಂಶಯ ಮೂಡುತ್ತಿದೆ. ಗ್ಯಾರಂಟಿಗಳ ಅನುಷ್ಠಾನಕ್ಕೆ ಹಣ ಕ್ರೋಢೀಕರಿಸಲು ರಾಜ್ಯ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ.

ಹಣಕಾಸು ಇಲ್ಲದೆ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಆದರೆ, ಕೇಂದ್ರದ ಮೇಲೆ ಆರೋಪ ಮಾಡುತ್ತಿದ್ದಾರೆ. ತೆರಿಗೆ ರೂಪದಲ್ಲಿ ಕರ್ನಾಟಕ 100 ರೂ. ಕೊಟ್ಟರೆ ಕೇವಲ 13 ರೂ. ವಾಪಸು ಬರುತ್ತದೆ ಎಂಬುದು ಅರ್ಧಸತ್ಯ.

ಕೇಂದ್ರದ ಅನುದಾನ ರಾಜ್ಯದಲ್ಲಿ ಸದ್ಬಳಕೆ ಆಗುತ್ತಿಲ್ಲ. ಕೇಂದ್ರ ಸರ್ಕಾರದ ಯೋಜನೆಗಳಿಗೆ ಕತ್ತರಿ ಹಾಕುವ ಕೆಲಸ ರಾಜ್ಯ ಸರ್ಕಾರ ಮಾಡುತ್ತಿದೆ. ತನ್ನ ಆಡಳಿತ ವೈಫಲ್ಯ ಮುಚ್ಚಿ ಕೊಳ್ಳಲು ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಆಯೋಗದ ಕಾಂತರಾಜು ವರದಿ ಅನುಷ್ಠಾನಕ್ಕೆ ತರುವುದಾಗಿ ಹೇಳಿದ್ದರು, 4–5 ಕ್ಯಾಬಿನೆಟ್ ಸಭೆ ನಡೆದರೂ ಅನುಷ್ಠಾನ ಆಗಲಿಲ್ಲ.

ವರದಿ ಸಿದ್ಧಪಡಿಸಿ 10 ವರ್ಷ ಕಳೆದಿದೆ, ಅಂಕಿ–ಅಂಶಗಳು ಅವೈಜ್ಞಾನಿಕವಾಗಿವೆ, ಸಮೀಕ್ಷೆ ಹೊಸದಾಗಿ ನಡೆಸಲು ತೀರ್ಮಾನಿಸಲಾಗಿದೆ. ವರದಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು ವಿರೋಧ ವ್ಯಕ್ತಪಡಿಸಿದ್ದರು, ಈಗ ಜ್ಞಾನೋದಯವಾಗಿದೆ.

ಆರ್‌ಸಿಬಿ ವಿಜಯೋತ್ಸವದ ಕಾಲ್ತುಳಿತದಲ್ಲಿ 11 ಕ್ರೀಡಾಭಿಮಾನಿಗಳು ಮೃತಪಟ್ಟ ಘಟನೆಯಿಂದ ವಿಷಯಾಂತರ ಮಾಡಲು ಜಾತಿಗಣತಿ ಪ್ರಸ್ತಾಪಿಸಿದರೂ ಏನೂ ಮಾಡಲು ಸಾಧ್ಯವಾಗಲಿಲ್ಲ.

ಕೇಂದ್ರ ಸರ್ಕಾರ ಜನಗಣತಿ ಜೊತೆ, ಜಾತಿ ಜನಗಣತಿಯನ್ನೂ ನಡೆಸುವುದಾಗಿ ಈಗಾಗಲೇ ಘೋಷಿಸಿದೆ, ಜಾತಿಗಣತಿ ನಡೆಸುವ ಅಧಿಕಾರ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದೇ ಎಂಬ ಅನುಮಾನಗಳು ಹೆಚ್ಚಾಗಿವೆ ಎಂದರು.

ಕವಿಗಳ ಸಂಖ್ಯೆ ಹೆಚ್ಚಾದರೂ, ಓದುಗರು ಕಡಿಮೆ

ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ ವಿಷಾದ



ಮೈಸೂರು ವಿಶ್ವವಿದ್ಯಾನಿಲಯದ ಬಸವ ಪೀಠದ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಡಾ.ನೀಗೂ ರಮೇಶ್ ಅವರ ಗಾಂಧೀ ಮರ: ಕಾವ್ಯಾವಲೋಕನ ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ ಅರವಿಂದ ಮಾಲಗತ್ತಿ ಮಾತನಾಡಿದರು.

ಮೈಸೂರು, ಜೂ.14(ಎಂಟಿವೈ)– ಕಾವ್ಯ ಮತ್ತು ಕವನಗಳಲ್ಲಿ ದಿಕ್ಕು ದೆಸೆಯಿಲ್ಲದ ಕಾರಣ ಇತ್ತೀಚಿನ ದಿನಗಳಲ್ಲಿ ಕವಿಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಓದುಗರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಸವ ಪೀಠದ ಸಭಾಂಗಣದಲ್ಲಿ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಹಾಗೂ ಲಗೋರಿ ಸಾಂಸ್ಕೃತಿಕ ಬಳಗದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಡಾ.ನೀಗೂ ರಮೇಶ್ ಅವರ ಗಾಂಧೀಮರ: ಕಾವ್ಯಾವಲೋಕನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾವ್ಯಕ್ಕೆ ನಿರ್ದಿಷ್ಟ ಗುರಿ, ದೆಸೆ ಇರಬೇಕು. ಅದು ಇಲ್ಲವಾದರೆ ಚದುರಿದ ಚಿಂತನೆಯಾಗಲಿದೆ. ಇಂದಿಗೂ ಕಾವ್ಯ ಅದೆ ದಿಕ್ಕಿನಲ್ಲಿ ಸಾಗುತ್ತಿದೆ. ಕಾವ್ಯ ಸದ್ಬಳಕೆ ರೀತಿಯಲ್ಲಿ ಪ್ರವಾಹದ ಅರಿವು ಆಗುತ್ತಿಲ್ಲ. ದಿಕ್ಕು–ದೆಸೆಯೂ ಇಲ್ಲದಂತಾಗಿದೆ. ಇದರಿಂದ ಕವನ ಬರವಣಿಗೆ ಸುಲಭವಾಗಿದೆ. ಇದರಿಂದಾಗಿ ಕವಿಗಳ ಸಂಖ್ಯೆಯೂ ಹೆಚ್ಚಾಗುತ್ತಿದ್ದರೂ, ಓದುಗರ ಸಂಖ್ಯೆ ಕಡಿಮೆಯಾಗುತ್ತಲೇ ಇದೆ. ಜನ ಸಮುದಾಯದಲ್ಲಿ ಸಾಹಿತ್ಯ ಓದುವ ಹವ್ಯಾಸ ಕಡಿಮೆಯಾಗಿರುವುದೇ ಇದಕ್ಕೆ ಕಾರಣ ಎಂದು ವಿಶ್ಲೇಷಿಸಿದರು.

ಪ್ರಸ್ತುತ ಸಂದರ್ಭದಲ್ಲಿ ಮೊಬೈಲ್ ಮೂಲಕ ಕಾವ್ಯ ಅಂಗೈಗೆ ಬಂದಿದೆ. ಕಾವ್ಯವು ರೀಲ್ಸ್ ಹಾಗೂ ವಿಡಿಯೋ ತುಣುಕು ಸೇರಿದಂತೆ ಹೀಗೆ ವಿವಿಧ ಡಿಜಿಟಲ್ ರೂಪದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಆದರೆ, ಅಂಗೈಗೆ ಬಂದಿರುವ ಕಾವ್ಯವು ಹೃದಯಕ್ಕೆ ಮತ್ತು ಮನಸ್ಸಿಗೆ ತಲುಪುತ್ತಿಲ್ಲ ಎಂದು ವಿಷಾದಿಸಿದರು.

ಸಾಮಾಜಿಕ ಜಾಲತಾಣಗಳ ಮೂಲಕ ಮಾಧ್ಯಮ ಕವಿತೆ ಹೆಚ್ಚು ಬಳಕೆಯಾಗುತ್ತಿದೆ. ಇದರಲ್ಲಿ ಮನಸ್ಸಿಗೆ ಇಳಿದ ಕವಿತೆಗಳ ಸಂಖ್ಯೆ ಕಡಿಮೆ. ಕೇವಲ ಲೈಕ್, ಪ್ರತಿಕ್ರಿಯೆ ಕೊಟ್ಟ ಮಾತ್ರಕ್ಕೆ ಓದುಗರು ಆ ಕವಿತೆಯನ್ನು ಓದಿ, ಅರ್ಥೈಸಿಕೊಂಡಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಅದು ಹೃದಯಕ್ಕೆ ಇಳಿದಾಗಲೇ ಕವಿತೆ ಅರ್ಥವಾಗುತ್ತದೆ ಎಂದರು.

ನವೋದಯ–ನವ್ಯ ಸಾಹಿತ್ಯ ಕಾಲದ ಕಾವ್ಯಕ್ಕೂ, ದಲಿತ–ಬಂಡಾಯ ಸಾಹಿತ್ಯ ಕಾಲದ ಕಾವ್ಯಕ್ಕೂ ಸಾಕಷ್ಟು ವ್ಯತ್ಯಾಸವಿದೆ. ನವೋದಯ ಕಾಲದ ಕವಿತೆಗಳು ಸುದೀರ್ಘವಾಗಿದ್ದು, ಅರ್ಥವಾಗುವುದು ಕಷ್ಟಕರವಾಗಿದೆ. ಅದು 4 ಗೋಡೆ ಮಧ್ಯೆ ಸಿಲುಕಿಕೊಂಡಿರುವ ಸ್ವರೂಪದ ಕಾವ್ಯ ಎನಿಸಿತ್ತು. ಕವಿ ಮತ್ತು ಓದುಗರ ನಡುವೆ ವಿಮರ್ಶಕ ಮುಖ್ಯ. ವಿಮರ್ಶೆ ಮಾಡದೇ ಕಾವ್ಯ ಅರ್ಥೈಸಿಕೊಳ್ಳುವುದು ಕಷ್ಟ. ಆ ಕಾರಣದಿಂದ ಕಾವ್ಯ ಭಾರ ಎನಿಸಿತ್ತು. ನವ್ಯ ಸಾಹಿತ್ಯ ಕಾಲದ ಭಾವಗೀತೆ ಸ್ವರೂಪದ ಕಾವ್ಯಗಳು ಆಸ್ವಾದಿಸುವಂತಿತ್ತು. ಕಾವ್ಯದಲ್ಲಿ ತೇಲುವ, ಮುಳುಗುವ, ಅನುಸಂವಾದಿಸುವ ಗುಣವಿತ್ತು ಎಂದು ವಿಶ್ಲೇಷಿಸಿದರು.

ದಲಿತ, ಬಂಡಾಯ ಸಾಹಿತ್ಯ ಕಾಲದಲ್ಲಿ ಕಾವ್ಯ ಬೀದಿಗೆ ಬಂತು. ಅದುವರೆಗೂ 4 ಗೋಡೆ ಮಧ್ಯೆ ಸಿಲುಕಿದ್ದ ಕಾವ್ಯ ಜನಸಾಮಾನ್ಯರತ್ತ ತಲುಪಿತು. ದಲಿತ, ಬಂಡಾಯ ಸಾಹಿತ್ಯ ಎಂದರೆ ಗೋಳು ಹೇಳುವ, ಪ್ರತಿಭಟನೆ ಮಾಡುವುದಕಷ್ಟೆ ಸೀಮಿತವಾಗಿತ್ತು ಎಂದು ಮೂಗು ಮುರಿಯುತ್ತಾರೆ. ಆದರೆ, ಬದುಕಿನ ಆಳಕ್ಕೆ ಇಳಿಯುವ ಗುಣವೇ ಕಾವ್ಯ ಅದು ಗೋಳು, ಪ್ರತಿಭಟನೆಯ ನಡುವಿನ ಮಾತಾಗಿತ್ತು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ವಹಿಸಿದ್ದರು. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕ, ಬಳಗದ ಗೌರವಾಧ್ಯಕ್ಷ ಡಾ.ನೀಲಗಿರಿ ತಳವಾರ, ಕವಿ ಡಾ.ನೀ.ಗೂ. ರಮೇಶ್ ಉಪಸ್ಥಿತರಿದ್ದರು.

ಗುಂಡ್ಲುಪೇಟೆ ಬಳಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ

ಸೂರ್ಯಕಾಂತಿ ತೋಟ

- ತಾತ್ಕಾಲಿಕ ಪ್ರವಾಸಿತಾಣಗಳಾಗಿರುವ ಹಳದಿ ತೋಟಗಳು
- ಹಳದಿ ಬಣ್ಣದ ಹೂವಿಗೆ ಮಾರುಹೋದ ಪ್ರವಾಸಿಗರು



ಗುಂಡ್ಲುಪೇಟೆ ಬಳಿ ಸೂರ್ಯಕಾಂತಿ ತೋಟದಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿರುವ ಪ್ರವಾಸಿಗರು.

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜೂ.14– ಸೂರ್ಯನತ್ತ ಮುಖಮಾಡಿ ನಿಂತಿರುವ ಹಳದಿ ಬಣ್ಣದ ಸುಂದರಿ ಸೂರ್ಯಕಾಂತಿಗೆ ಪ್ರವಾಸಿಗರು ಮಾರುಹೋಗುತ್ತಿದ್ದು, ಮೈಸೂರಿನತ್ತ ಕೇರಳ, ಊಟಿ ಭಾಗದಿಂದ ಬರುವ ಪ್ರವಾಸಿಗರು ಸೂರ್ಯಕಾಂತಿ ತೋಟಕ್ಕೆ ಲಗ್ಗೆ ಇಟ್ಟು ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಮುಗಿ ಬೀಳುತ್ತಿದ್ದಾರೆ.

ಪೂರ್ವ ಮುಂಗಾರು ಮಳೆ ಉತ್ತಮವಾಗಿ ಬಂದ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನ ವಿವಿಧೆಡೆ ರೈತರು ಸಾಂಪ್ರದಾಯಿಕ ಬೆಳೆಯಾಗಿ ಸೂರ್ಯಕಾಂತಿಯನ್ನು ಬೆಳೆದಿದ್ದು, ಈ ಬಾರಿ ಇಳುವರಿ ಉತ್ತಮವಾಗಿದೆ. ಈಗಾಗಲೇ ಕಟಾವು ಹಂತಕ್ಕೆ ಬಂದಿರುವ ಸೂರ್ಯಕಾಂತಿ ಗಿಡಗಳು ಹಳದಿ ಬಣ್ಣದಿಂದ ಕಂಗೊಳಿಸುತ್ತಿವೆ. ಸಾವಿರಾರು ಹಳದಿ ಬಣ್ಣದ ಹೂವುಗಳಿಂದ ಕೂಡಿರುವ ಸೂರ್ಯಕಾಂತಿ ತೋಟ ನೋಡುಗರ ಗಮನ ಸೆಳೆಯುತ್ತಿವೆ.



ಹಳದಿ ಬಣ್ಣದಿಂದ ಕಂಗೊಳಿಸುತ್ತಿರುವ ಸೂರ್ಯಕಾಂತಿ ತೋಟ.
(ಚಿತ್ರ: ಎಂ.ಎಸ್.ಲಕ್ಷ್ಮೀನಾರಾಯಣ ಯಾದವ್)

ತಾತ್ಕಾಲಿಕ ಕೃಷಿ ಪ್ರವಾಸೋದ್ಯಮ: ಸೂರ್ಯಕಾಂತಿ ತೋಟ ತಾತ್ಕಾಲಿಕ ಕೃಷಿ ಪ್ರವಾಸೋದ್ಯಮವಾಗಿ ಮಾರ್ಪಟ್ಟಿದ್ದು, ತೋಟದ ಮಾಲೀಕರಿಗೆ ಆದಾಯ ಕೊಡುವ ತಂದು ಮೂಲವಾಗಿ ಪರಿಣಮಿಸಿದೆ. ಗುಂಡ್ಲುಪೇಟೆಯಿಂದ ಊಟಿ ರಸ್ತೆ, ಸುಲ್ತಾನ್ ಬತೇರಿ ರಸ್ತೆ ಹಾಗೂ ಗೋಪಾಲಸ್ವಾಮಿ ಬೆಟ್ಟದ ರಸ್ತೆಯಲ್ಲಿನ ಕೃಷಿ ಭೂಮಿಯಲ್ಲಿ ರೈತರು ಬೆಳೆದಿರುವ ಸೂರ್ಯಕಾಂತಿ ಬೆಳೆ ಪ್ರವಾಸಿಗರಿಗೆ ಮುದ ನೀಡುತ್ತಿವೆ. ಪ್ರತಿ ವರ್ಷವೂ ಈ ವೇಳೆ ಗುಂಡ್ಲುಪೇಟೆ ಭಾಗದಲ್ಲಿ ಹೆಚ್ಚಿನ ಪ್ರಮಾಣದ ರೈತರು ಸೂರ್ಯಕಾಂತಿ ಬೆಳೆ ಬೆಳೆಯುವ ಸಂಪ್ರದಾಯ ಅನುಸರಿಸುತ್ತಿದ್ದು, ಈ ಬಾರಿ ಸೂರ್ಯಕಾಂತಿ ಬೆಳೆ ಹುಲುಸಾಗಿ ಬೆಳೆದಿದೆ.

ಫೋಟೊಗೆ ಕಾಸು: ಸೂರ್ಯಕಾಂತಿ ತೋಟದಲ್ಲಿ ಫೋಟೋ, ಸೆಲ್ಫಿ, ರೀಲ್ಸ್‌ಗಾಗಿ ವಿಡಿಯೋ ಮಾಡಿಕೊಳ್ಳಲು ಪ್ರವಾಸಿಗರು ಬಯಸುತ್ತಿದ್ದು, ಇದಕ್ಕೆ ತೋಟದ ಮಾಲೀಕರು ಅಥವಾ ಕೆಲಸಗಾರರು ಸಣ್ಣ ಪ್ರಮಾಣದ ಶುಲ್ಕ ಸಂಗ್ರಹಿಸುತ್ತಿದ್ದಾರೆ. ಕಾರು, ಜೀಪ್‌ಗಳಲ್ಲಿ ಬರುವ ಪ್ರವಾಸಿಗರು ಫೋಟೋ, ವಿಡಿಯೋ ತೆಗೆದುಕೊಳ್ಳಲು ಸೂರ್ಯಕಾಂತಿ ತೋಟದ ಮಾಲೀಕರಿಗೆ 20ರಿಂದ 30 ರೂ. ನೀಡಿದರೆ, ಪ್ರವಾಸಿ ಬಸ್‌ಗಳಲ್ಲಿ ಬರುವವರು 50 ರೂ. ನೀಡುತ್ತಿದ್ದಾರೆ. ಇದರಿಂದ ಒಂದು ತೋಟದ ಮಾಲೀಕರು ಅಥವಾ ಕೆಲಸಗಾರರು ದಿನವೊಂದಿಗೆ 500 ರೂ. ನಿಂದ 1500 ರೂ.ವರೆಗೆ ಸಂಗ್ರಹಿಸುತ್ತಿದ್ದಾರೆ. ಮತ್ತೆ ಕೆಲವೆಡೆ 100 ರೂ., 200 ರೂ.ವರೆಗೂ ಹಣ ಸಂಗ್ರಹಿಸಲಾಗುತ್ತಿದೆ. ಇದರಿಂದ ಶ್ರಮಪಟ್ಟು ಬೆಳೆದ ರೈತರು ಫೋಟೊ ತೆಗೆದುಕೊಳ್ಳಲು ಬರುವವರಿಂದ ಆದಾಯ ಸಂಗ್ರಹಿಸಿಕೊಳ್ಳುವ ಮಾರ್ಗ ಕಂಡುಕೊಂಡಿದ್ದಾರೆ.

ಬೆಳೆಗೂ ಹಾನಿಯಾಗುವ ಸಂಭವ: ಸೂರ್ಯಕಾಂತಿ ತೋಟಕ್ಕೆ ಹಣ ಪಡೆದು ಫೋಟೊ ತೆಗೆದುಕೊಳ್ಳುವಂತೆ ಮಾಲೀಕರು ನಿಯಮ ರೂಪಿಸದಿದ್ದರೆ, ರೀಲ್ಸ್, ಸೆಲ್ಫಿ ವ್ಯಾಮೋಹಕ್ಕಾಗಿ ತೋಟದ ಒಳಗೆ ನುಗ್ಗಿ ಬೆಳೆಗೂ ಹಾನಿಯುಂಟು ಮಾಡುತ್ತಿದ್ದರು. ಹೂವು ಉದುರಿ ಹೋದರೆ ಸೂರ್ಯಕಾಂತಿ ಜಳ್ಳಾಗುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರು ಲಗ್ಗೆ ಇಡುವುದನ್ನು ತಡೆಗಟ್ಟುವುದಕ್ಕಾಗಿಯೇ ಕೆಲಸದವರನ್ನು ನೇಮಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಸೂರ್ಯಕಾಂತಿ ತೋಟದ ಬದು ಮೇಲೆ ನಿಂತುಕೊಂಡು ಫೋಟೊ ತೆಗೆದುಕೊಳ್ಳುವಂತೆ ರೈತರು ಸಲಹೆ ನೀಡಿದರೂ, ಕೆಲವರು ಮಾತ್ರ ತೋಟದ ಒಳಗೆ ಹೋಗುವ ಮೂಲಕ ಬೆಳೆ ಹಾನಿಯುಂಟಾಗುವಂತೆ ಮಾಡುತ್ತಿದ್ದಾರೆ. ಕೂಡಲೆ ತೋಟದಿಂದ ಹೊರ ಬರುವಂತೆ ರೈತರು ಮನವಿ ಮಾಡಿಕೊಳ್ಳುತ್ತಿದ್ದಾರೆ.

ಬಲವಂತ ಮಾಡಲ್ಲ, ಕೊಟ್ಟರೆ ತೆಗೆದುಕೊಳ್ಳುತ್ತೇವೆ

ಸೂರ್ಯಕಾಂತಿ ಬೆಳೆ ರಕ್ಷಣೆ ಮಾಡಿಕೊಳ್ಳಲು ತೋಟ ಕಾಯಬೇಕಾದ ಪರಿಸ್ಥಿತಿ ಎದುರಾಗಿದೆ. ಸೂರ್ಯಕಾಂತಿ ತೋಟಕ್ಕೆ ಬಂದು ಫೋಟೋ, ವಿಡಿಯೋ ಚಿತ್ರೀಕರಿಸಿಕೊಳ್ಳಲು ಬರುವವರು ದುಡ್ಡು ಕೊಟ್ಟರೆ ಪಡೆಯುತ್ತೇವೆ. ಬಲವಂತಕ್ಕೆ ದುಡ್ಡು ಪಡೆಯುವುದಿಲ್ಲ. ಕಾರು, ಜೀಪ್‌ನಲ್ಲಿ ನಾಲ್ಕೈದು ಮಂದಿ ಬಂದರೂ 20 ರೂ, 30 ರೂ. ಕೊಡುತ್ತಾರೆ. ಬಸ್‌ನಲ್ಲಿ ಬರುವವರು 50 ರೂ, 100 ರೂ. ಕೊಡುತ್ತಾರೆ. ದಿನಕ್ಕೆ ನೂರಾರು ಮಂದಿ ಫೋಟೊ ತೆಗೆದುಕೊಳ್ಳುತ್ತಾರೆ. ರೈತರಿಗೆ ದಿನಕ್ಕೆ 500 ರೂ.ನಿಂದ 1000 ರೂ.ವರೆಗೆ ಹಣ ಸಂಗ್ರಹವಾಗುತ್ತಿದೆ.

-ಮಹದೇವು, ತೋಟದ ಮಾಲೀಕರು.

ದುಡ್ಡು ಕೊಡುವುದರಲ್ಲಿ ತಪ್ಪೇನಿಲ್ಲ

ವಿವಿಧ ಪ್ರವಾಸಿ ತಾಣಗಳಿಗೆ ಪ್ರವೇಶ ಶುಲ್ಕ ನೀಡಿ ಹೋಗುತ್ತೇವೆ. ಆದರೆ, ರೈತರು ಕಷ್ಟಪಟ್ಟು ಬೆಳೆದ ಸೂರ್ಯಕಾಂತಿ ತೋಟದಲ್ಲಿ ಫೋಟೊ ತೆಗೆದುಕೊಳ್ಳುವುದಕ್ಕೆ ದುಡ್ಡು ಕೊಡುವುದರಲ್ಲಿ ತಪ್ಪೇನಿಲ್ಲ. ಸುಂದರ ಚಿತ್ರಾ ಸೆರೆ ಹಿಡಿಯಬಹುದು. ಫೋಟೋ ಹಾಗೂ ವಿಡಿಯೋದಲ್ಲಿ ಸೂರ್ಯಕಾಂತಿ ಗಿಡ ನೋಡುವುದೇ ಆನಂದ.

-ಉನ್ನತಿ, ಸಾನ್ವಿ, ಜಾಹ್ನವಿ. ಕೇರಳದ ಪ್ರವಾಸಿಗರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪುದುಪೆಟ್ಟೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಹೊಲೊಕಾಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಎಡಗೈಯೇ ಅಪಘಾತಕ್ಕೆ ಕಾರಣ (ಕ)	4 ಪ್ರದರ್ಶನಗಳು
ಲಿಡೋ	
ಮೆರ್ಸಲ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೀವನವನ್ನು ದಿವ್ಯ ಮಾಡಿಕೊಳ್ಳಲು ನಿಯಮಾವಳಿ ಪಾಲನೆ ಅವಶ್ಯಕ

ರಾಜಯೋಗಿನಿ ಬ್ರಹ್ಮಾಕುಮಾರಿ ತೃಪ್ತಿ ಬೆಹೆಂಜೀ ಅಭಿಪ್ರಾಯ



ಮೈಸೂರು, ಜೂ. 14– ಯಾವ ವ್ಯಕ್ತಿ ದಿವ್ಯ ಜೀವನವನ್ನು ಪ್ರೀತಿಸುತ್ತಾರೋ ಅವರು ನಿಯಮಗಳನ್ನು ಆವಶ್ಯಕವಾಗಿ ಪಾಲಿಸುತ್ತಾರೆ ಎಂದು ಸೂರತ್ ಮಹಾನಗರ ಈಶ್ವರೀಯ ವಿಶ್ವವಿದ್ಯಾಲಯಗಳ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ತೃಪ್ತಿ ಬೆಹೆಂಜೀ ಅಭಿಪ್ರಾಯಪಟ್ಟರು.

ಹುಣಸೂರು ರಸ್ತೆಯಲ್ಲಿರುವ ಜ್ಞಾನ ಸರೋವರ ಪುನಶ್ಚೇತನ ಕೇಂದ್ರದಲ್ಲಿ ನಡೆಯುತ್ತಿರುವ 5 ದಿನಗಳ ಅಖಂಡ ಮೌನ, ರಾಜಯೋಗ ಧ್ಯಾನ, ವ್ಯಕ್ತಿತ್ವ ವಿಕಸನ,ದಿವ್ಯಜೀವನ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಗೌರವ ಸಮರ್ಪಣೆಯನ್ನು ಸ್ವೀಕರಿಸಿ ಮಾತನಾಡುತ್ತಿದ್ದರು. ಜೀವನದಲ್ಲಿ ಬದುಕೋದು ಎಂದರೆ ಅರ್ಥ, ಜೀವನ ಚಕ್ರದಲ್ಲಿ ನಿಯಮಗಳ ಮತ್ತು ಸಿದ್ಧಾಂತಗಳನ್ನು ಸ್ವೀಕರಿಸುವುದೇ ಆಗಿದೆ. ಯಾವುದೂ ಶಾಶ್ವತವಲ್ಲ ಸದಾ ಖುಷಿಯಾಗಿರಬೇಕು. ಜೀವನದ ಪ್ರತಿಯೊಂದು ಕ್ಷಣದ ಆನಂದವನ್ನು ಬಂದಿರುವಂತಹ ವ್ಯಕ್ತಿ ಎಂದು ಯಾರಿಗೂ ತೊಂದರೆ ಕೊಡುವುದಿಲ್ಲ. ಬದಲಾಗಿ ತನ್ನ ತಪ್ಪುಗಳನ್ನು ತಿದ್ದಿಕೊಳ್ಳಲು ಪ್ರಯತ್ನ ಪಡುತ್ತಾರೆ ಎಂದರು. ಶಿಬಿರದಲ್ಲಿ ಭಾಗವಹಿಸಿದ್ದ ವಿವಿಧ ರಾಜ್ಯದ ವಿದ್ಯಾರ್ಥಿಗಳು, ಐದು ದಿನಗಳ ಶಿಬಿರದ ಪೂರ್ಣ ಲಾಭ ಪಡೆದುಕೊಂಡಿದ್ದಾರೆ ಎಂದು ಪ್ರಶಂಸಿಸಿದರು.

ಮೈಸೂರು ಉಪವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಮಾತನಾಡಿ, ಶಿಬಿರದಲ್ಲಿ ಜ್ಞಾನ, ಪವಿತ್ರತೆ, ಶಾಂತಿ, ಪ್ರೀತಿ ಮತ್ತು ಕರುಣೆ ವ್ಯಕ್ತಿಯ ತನುಮನವನ್ನು ಮತ್ತು ಸಮಸ್ತ ಕರ್ಮೇಂದ್ರಿಯಗಳನ್ನು ಶಾಂತ, ನಿರ್ವಿಕಾರಿನ್ನಾಗಿ ಮಾಡುತ್ತದೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಚಾಮರಾಜನಗರ ಮಂಡ್ಯ ಹಾಸನ ಕೊಡಗು ಜಿಲ್ಲೆಗಳಿಂದ ಸುಮಾರು 120ಕ್ಕೂ ಹೆಚ್ಚು ರಾಜಯೋಗ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಇದೇ ವೇಳೆ ಬಹುಮಾನವನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಯೋಗಭವನದ ಬಿಕೆ ಶಾರದಾಜಿ, ಕುಮಾರಣ್ಣ, ಆತ್ಮಾನಂದಣ್ಣ, ಗಂಗಣ್ಣ, ಶಿವಲೀಲಾಜೀ ಬಿಕೆ, ಆರಾಧ್ಯ, ರುದ್ರೇಶ್, ರಾಮಚಂದ್ರ ಮುಂತಾದವರು ಹಾಜರಿದ್ದರು.

ಆರೇಳು ತಿಂಗಳಿಂದ ಮುಡಾ, ಪರಿವರ್ತಿತ ಎಂಡಿಎ ಸಭೆ ನಡೆಯದೇ ಬಡಾವಣೆ ಅಭಿವೃದ್ಧಿ, ನಿರ್ಮಾಣ ಕ್ಷೇತ್ರದಲ್ಲಿ ಹಿನ್ನಡೆ

ಒಂದೆಡೆ ಡೆವಲಪರ್ಸ್, ಬಿಲ್ಡರ್ಸ್‌ಗಳಿಗೆ ನಷ್ಟ: ಮತ್ತೊಂದೆಡೆ ಸರ್ಕಾರಕ್ಕೂ ಆದಾಯ ಖೋತಾ



ಮೈಸೂರು, ಜೂ.14– 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)' ತಿಂಗಳ ಹಿಂದೆ 'ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)'ವಾಗಿ ಬದಲಾಗಿದೆ. ಆದರೆ ಆರೇಳು ತಿಂಗಳಿಂದ ಪ್ರಾಧಿಕಾರದ ಸಭೆ ನಡೆಯದೆ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಹೊಡೆತದ ಜೊತೆಗೆ ಸರ್ಕಾರದ ಆದಾಯಕ್ಕೂ ಕತ್ತರಿ ಬಿದ್ದಿದೆ.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರು ಮುಡಾ ಅಧ್ಯಕ್ಷರಾಗಿ 2024ರ ನವೆಂಬರ್ 7ರಂದು ಸಾಮಾನ್ಯ ಸಭೆ ನಡೆಸಿದ್ದರು. ಆ ಸಭೆಯಲ್ಲಿ 50:50ರ ಅನುಪಾತದಲ್ಲಿ ಪರಿಹಾರವಾಗಿ ನಿವೇಶನ ಹಂಚಿಕೆ ಮಾಡಿದ ಹಗರಣದ ಬಗ್ಗೆಯೇ ಸುದೀರ್ಘ ಚರ್ಚೆ ನಡೆದಿತ್ತು. ಅದೇ ಮುಡಾದ ಕೊನೆಯ ಸಭೆ ಆಯಿತು. ಕಳೆದ ತಿಂಗಳು 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ' ವಿಸರ್ಜಿಸಿ, 'ಮೈಸೂರು ಅಭಿವೃದ್ಧಿ ಪ್ರಾಧಿಕಾರ' ಅನುಷ್ಠಾನಕ್ಕೆ ಬಂತು. ಆದರೆ ಇನ್ನೂ ಪೂರ್ಣ ಆಡಳಿತ ಮಂಡಳಿ ರಚನೆಯಾಗದ ಕಾರಣ ಸಾಮಾನ್ಯ ಸಭೆ ಸದ್ಯಕ್ಕಿಲ್ಲ. ಹೀಗೆ ಆರೇಳು ತಿಂಗಳಿಂದ ಸಭೆ ನಡೆಸದಿರುವುದರಿಂದ ಡೆವಲಪರ್ಸ್‌ಗಳ ನಿದ್ದೆಗೆಡಿಸಿದೆ.

ಮುಡಾ(ಈಗಿನ ಎಂಡಿಎ)ದ ಪ್ರಮುಖ ಆದಾಯ ಮೂಲವಾದ ರಿಯಲ್ ಎಸ್ಟೇಟ್ ಉದ್ಯಮ ಸದ್ಯ ಮಂಕಾಗಿದೆ. ಪ್ರಾಧಿಕಾರದ ಸಭೆ ನಡೆಯದಿರುವುದರಿಂದ ಹೊಸ ಬಡಾವಣೆ ನಿರ್ಮಾಣಕ್ಕೆ ಅಡ್ಡಿಯಾಗಿದೆ. ಕ್ರಿಯಾಯೋಜನೆಗೆ ಅನುಮೋದನೆ ಸೇರಿದಂತೆ ಎಲ್ಲಾ ಪ್ರಕ್ರಿಯೆಗೂ ಬ್ರೇಕ್ ಬಿದ್ದಿದೆ. ಪರಿಣಾಮ ಡೆವಲಪರ್ಸ್‌ಗಳು ಕಂಗಾಲಾಗಿದ್ದಾರೆ. ಯೋಜಿತ ಸಮಯಕ್ಕೆ ಬಡಾವಣೆ ನಿರ್ಮಿಸಿ, ನಿವೇಶನ ಮಾರಾಟ ಮಾಡದಿದ್ದರೆ ಆರ್ಥಿಕ ಹೊರೆ ಹೆಚ್ಚಾಗಲಿದೆ. ಹೂಡಿಕೆಗೆ ತಕ್ಕ ಲಾಭ ಸಿಗುವುದಿಲ್ಲ. ಸಾಲಕ್ಕೆ ಅಧಿಕ ಬಡ್ಡಿ ತೆರಬೇಕಾಗುತ್ತದೆ. ವಿಶ್ವಸನೀಯ ಗ್ರಾಹಕರಿಗೆ ಸಕಾಲಕ್ಕೆ ನಿವೇಶನ ನೀಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಇದರಿಂದ ಡೆವಲಪರ್ಸ್ ಅನುಮಾನದ ದೃಷ್ಟಿಯಿಂದ ನೋಡುವಂತಾಗಿದೆ. ಕಟ್ಟಡ ನಿರ್ಮಾಣ ಹಾಗೂ ಅದಕ್ಕೆ ಸಂಬಂಧಿಸಿದ ವ್ಯಾಪಾರ–ವಹಿವಾಟಿನಲ್ಲೂ ನಷ್ಟವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಹೊಸ ಬಡಾವಣೆಗಳ ನಿರ್ಮಾಣ ಸಂಬಂಧಿತ ಪ್ರಕ್ರಿಯೆ ನಡೆಯದಿದ್ದರೆ ಸರ್ಕಾರಕ್ಕೂ ನಷ್ಟ ಕಾರ್ಯಾದೇಶ ಸೇರಿದಂತೆ ಹಲವು ಹಂತಗಳಲ್ಲಿ ಪಾವತಿಸುವ ಶುಲ್ಕದಿಂದ ಪ್ರಾಧಿಕಾರಕ್ಕೆ ಸಾಕಷ್ಟು ಆದಾಯ ಸಂಗ್ರಹವಾಗುತ್ತಿತ್ತು. ಆದರೆ ಈಗ ಎಲ್ಲಾ ರೀತಿಯ ಆದಾಯಕ್ಕೂ ಕತ್ತರಿ ಬಿದ್ದಿದೆ. ಇನ್ನು ಡೆವಲಪರ್ಸ್‌ಗಳು ಹೊಸ ಯೋಜನೆಗಳನ್ನು ಆರಂಭಿಸಲು ಸಾಧ್ಯವಾಗದಿರುವುದರಿಂದ ಬ್ಯಾಂಕ್‌ಗಳ ವಹಿವಾಟಿನ ಮೇಲೂ ಪ್ರತಿಕೂಲ ಪರಿಣಾಮ ಉಂಟಾಗಿದೆ. ಅಂತಿಮವಾಗಿ ಈ ಎಲ್ಲಾ ಲೆಕ್ಕಾಚಾರದ ಹೊರೆ ನಿವೇಶನ ಖರೀದಿಸುವವರ ಮೇಲೇರಲಿದೆ. ಡೆವಲಪರ್ಸ್‌ಗಳು ಹೂಡಿಕೆ ಮೇಲಿನ ನಿರೀಕ್ಷಿತ ಲಾಭದ ಜೊತೆಗೆ ಹೆಚ್ಚುವರಿ ಖರ್ಚು–ವೆಚ್ಚಗಳನ್ನೆಲ್ಲಾ ಅನಿವಾರ್ಯವಾಗಿ ಗ್ರಾಹಕರ ಮೇಲೆ ಹಾಕುತ್ತಾರೆ.



ಶೀಘ್ರ ಸಭೆ ನಡೆಸಬೇಕು

ಆರೇಳು ತಿಂಗಳಿಂದ ಪ್ರಾಧಿಕಾರದ ಸಭೆ ನಡೆಸದಿರುವುದರಿಂದ ಡೆವಲಪರ್ಸ್‌ಗಳಿಗೆ ಭಾರಿ ನಷ್ಟವಾಗುತ್ತಿದೆ. ಜಿಲ್ಲಾಧಿಕಾರಿಗಳೇ ಎಂಡಿಎ ಅಧ್ಯಕ್ಷರಾಗಿರುವುದರಿಂದ ತಕ್ಷಣಕ್ಕೆ ಸರ್ಕ್ಯುಲರ್ ಮೀಟಿಂಗ್ ನಡೆಸಿ, ಅಪ್ಲಿಕೇಷನ್ ಅಡ್ಮಿಷನ್‌ಗೆ ಅವಕಾಶ ಮಾಡಿಕೊಟ್ಟು, ನಂತರ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆಗೆ ಕ್ರಮ ವಹಿಸಬಹುದು. ಹಾಗಾದಾಗ ಎಲ್ಲಾ ಕಡತಗಳ ವಿಲೇವಾರಿ ಸುಸೂತ್ರವಾಗುತ್ತದೆ. ಪ್ರಾಧಿಕಾರದಲ್ಲಿ ಏಕಗವಾಕ್ಷಿ(ಸಿಂಗಲ್ ವಿಂಡೋ) ವ್ಯವಸ್ಥೆ ಜಾರಿಗೊಳಿಸುವುದು ಅತ್ಯವಶ್ಯವಾಗಿದೆ. ಈ ಮೂಲಕ ಎಲ್ಲಾ ಪ್ರಕ್ರಿಯೆಗಳನ್ನೂ ಸರಳೀಕೃತಗೊಳಿಸಲು ಸಾಧ್ಯವಿದೆ. ನಿಯಮಾನುಸಾರ ಮಾಸಿಕ ಸಭೆಯಾಗದಿದ್ದರೂ ಅರ್ಹ ಕಡತಗಳಿಗೆ ಅನುಮೋದನೆ ನೀಡಬಹುದು. ಇದರಿಂದ ಬಡಾವಣೆ ನಿರ್ಮಾಣಕ್ಕೂ ಯಾವುದೇ ಅಡಚಣೆಯಾಗುವುದಿಲ್ಲ. ಸರ್ಕಾರಕ್ಕೂ ನಿರೀಕ್ಷಿತ ಆದಾಯ ಸಂಗ್ರಹವಾಗಲಿದೆ.


–ಎ.ಪಿ.ನಾಗೇಶ್, ಮ್ಯಾನೇಜಿಂಗ್ ಪಾರ್ಟ್ನರ್, ಎಪಿಎನ್ ಪ್ರಾಪರ್ಟೀಸ್

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಮರಿಯಪ್ಪ
(ನಿವೃತ್ತ ಕೆ.ಎ.ಆರ್.ಪಿ ಮೌಂಟೆಡ್ ಪೋಲೀಸ್)
ದುಃಖತಪ್ತರು: ಶ್ರೀಮತಿ ಶುಭಮಣಿ (ಮಗಳು) ವಿಹಾನ್, ಆಕಾಶ್, ಸಹರ್ಷ (ಮೊಮ್ಮಗ) ಹಾಗೂ ಕುಟುಂಬವರ್ಗದವರು

ಘನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯೀಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ

ಅಸಲು ದಾವಾ ಸಂಖ್ಯೆ 14/2024

ವಾದಿ: ಶಿವರಾಜು ಎಸ್, ಬಿನ್ ಲೇಟ್ ಶಿವಲಿಂಗ, ವಯಸ್ಸು: ಸುಮಾರು 35 ವರ್ಷಗಳು, #54, 18ನೇ ಕ್ರಾಸ್, 2ನೇ ಮೇನ್, ಜಯನಗರ, ಮೈಸೂರು ಸಿಟಿ.

ವಿರುದ್ಧ

ಪ್ರತಿವಾದಿಗಳು: 1) ಎನ್. ಶಾಂತರಾಜು, ಬಿನ್ ಲೇಟ್ ನಾಗಪ್ಪ, ವಯಸ್ಸು: ಸುಮಾರು 35 ವರ್ಷಗಳು. (2) ಶ್ರೀಮತಿ ದ್ರಾಕ್ಷಾಯಿಣಿ, ಕೋಂ ಎನ್. ಶಾಂತರಾಜು, ವಯಸ್ಸು ಸುಮಾರು 30 ವರ್ಷಗಳು. (3) ಶಾಂತ ನಾಗರಾಜು, ಬಿನ್ ಲೇಟ್ ಟೈಲರ್ ಮಹದೇವಪ್ಪ, ವಯಸ್ಸು ಸುಮಾರು 38 ವರ್ಷಗಳು. ಎಲ್ಲರ ವಾಸ: ಕುರುಬೂರು ಗ್ರಾಮ, ಮೂಗೂರು ಹೋಬಳಿ, ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕರಾರಿನ ನಿರ್ದಿಷ್ಟ ಅನುಷ್ಠಾನಕ್ಕಾಗಿ ದಾವೆಯನ್ನು ಹೂಡಿದ್ದು, ಸದರಿ ಪ್ರಕರಣದಲ್ಲಿ ಎನ್. ಶಾಂತರಾಜು ಆದ ನಿಮ್ಮನ್ನು 1ನೇ ಪ್ರತಿವಾದಿಯಾಗಿ, ಶ್ರೀಮತಿ ದ್ರಾಕ್ಷಾಯಿಣಿ ಆದ ನಿಮ್ಮನ್ನು 2ನೇ ಪ್ರತಿವಾದಿಯಾಗಿ ಮಾಡಲಾಗಿರುತ್ತದೆ. ಸದರಿ ಪ್ರಕರಣವು ದಿನಾಂಕ 30–6–2025ರಂದು ಬೆಳಿಗ್ಗೆ 11–00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ನಿಗಧಿಯಾಗಿದ್ದು, ಸದರಿ ದಿನಾಂಕದಂದು ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗುವುದು. ತಪ್ಪಿದಲ್ಲಿ ಪ್ರಕರಣವನ್ನು ನಿಮ್ಮ ಗೈರುಹಾಜರಾತಿಯಲ್ಲಿ ಏಕಪಕ್ಷೀಯವಾಗಿ ನಿರ್ಣಯವಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್

ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಮೂಗೂರು ಹೋಬಳಿ, ಕುರುಬೂರು ಗ್ರಾಮದಲ್ಲಿರುವುದು, ಕೊತ್ತೇಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ ತರೀ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ಮತ್ತು ಕೆ.ಸಿ. ವೀರೇಶ್‌ರವರ ಜಮೀನು, ಪಶ್ಚಿಮಕ್ಕೆ: ನೀರು ಹರಿಯುವ ಹಳ್ಳ, ಉತ್ತರಕ್ಕೆ: ಲೇಟ್ ಶಿವಪ್ಪರವರ ಜಮೀನು, ದಕ್ಷಿಣಕ್ಕೆ: ಬಸವಣ್ಣ ರವರ ಜಮೀನು ಈ ಮಧ್ಯೆ ಇರುವ ಸರ್ವೆ ನಂ. 232/1ರ ವಿಸ್ತೀರ್ಣ 0.38 ಗುಂಟೆ, ಆಕಾರ 2–50 ಪೈಸೆವುಳ್ಳ ಸ್ವತ್ತು ಮತ್ತು ಸ್ವತ್ತಿನಲ್ಲಿ ಇರತಕ್ಕ ಐ.ಪಿ. ಪಂಪ್‌ಸೆಟ್ ವಿದ್ಯುತ್ ಚಾಲಿತ ಬೋರ್‌ವೆಲ್ ಹಾಗೂ ಇದರ ವಿದ್ಯುತ್ ಸಂಪರ್ಕ ಪಡೆದಿರುವ ಸಂಖ್ಯೆ TNILP-8079 ಯ ಸೇರಿದ ಹಾಲಿ ಸ್ವರೂಪದಲ್ಲಿರುವ ಸಂಪೂರ್ಣ ಸ್ವತ್ತು.

ನ್ಯಾಯಾಲಯದ ಮೊಹರಿನೊಡನೆ ದಿನಾಂಕ 3–6–2025 ರಂದು ನೀಡಿದೆ.

ಸಹಿ/– ಶಿರಸ್ತೇದಾರರು, ಘನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳವರ ನ್ಯಾಯಾಲಯ, ತಿ.ನರಸೀಪುರ


ಸಹಿ/– ಹೆಚ್.ಎನ್.ಬಿ. ನಿಧಿ, ಬಿ.ಕಾಂ. ಎಲ್‌ಎಲ್‌ಬಿ
ವಕೀಲರು ಮತ್ತು ನೋಟರಿ, ಲಿಂಕ್ ರಸ್ತೆ, ತಿ.ನರಸೀಪುರ

24ನೇ ವರ್ಷದ ಸವಿನೆನಪು



ಶ್ರೀ ಭೈರೆಗೌಡ
ನಿಧನ : 15.6.2001
ನೀವು ನಮ್ಮನ್ನಗಲಿ ಇಂದಿಗೆ 24 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಲಾರಿ ಬೋರಲಿಂಗೇಗೌಡ ಮತ್ತು ಮಕ್ಕಳು ಕುಂಬಾರಕೊಪ್ಪಲು, ಮೈಸೂರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ನಿಂಗಯ್ಯರವರು
(ಶ್ರೀ ಕಾಳಬೋರನ ಬಸವೇಗೌಡರ ಮಗ)

ಇವರು ದಿನಾಂಕ: 06.06.2025 ಶುಕ್ರವಾರ ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಹಾಗೂ ಹಾಲುತುಪ್ಪ ಕಾರ್ಯವನ್ನು ದಿನಾಂಕ : 16-06-2025ನೇ ಸೋಮವಾರ ಬೆಳಗ್ಗೆ 11:30 ಗಂಟೆಗೆ # 1/4, 9ನೇ ಕ್ರಾಸ್, 5ನೇ ಮೇನ್, ಜಯನಗರ (ತೋಟದಮನೆ ಹತ್ತಿರ), ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಲಕ್ಷ್ಮಮ್ಮ, ಮಕ್ಕಳು, ಮೊಮ್ಮಕ್ಕಳು ಕುಟುಂಬವರ್ಗದವರು

ಭೋಜನ : ಮಧ್ಯಾಹ್ನ 12:00 ಗಂಟೆಗೆ